॥ ಶ್ರೀ ಗುರು ಬಸವ ಲಿಂಗಾಯನಮಃ ॥



# ಲಿಂಗಾಯತ ದರ್ಶನ

ಸಂಪುಟ : ೬ ಡಿಸೆಂಬರ್ ೨೦೧೯ ಸಂಚಿಕೆ : ೧೨

ಮಾರ್ಗದರ್ಶನ
**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**
ರುದ್ರಾಕ್ಷಿಮಠ, ನಾಗನೂರು–ಬೆಳಗಾವಿ
ತೋಂಟದಾರ್ಯ ಸಂಸ್ಥಾನಮಠ, ಗದಗ–ಡಂಬಳ

**ಸಂಪಾದಕ**
**ಡಾ॥ ಎಸ್. ಜಿ. ಮಹಾದೇವಪ್ಪ**
**ಸಹ ಸಂಪಾದಕ**
**ಡಾ॥ ರಾಮಕೃಷ್ಣ ಮರಾಠೆ**

**ಸಂಪಾದಕ ಮಂಡಳಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಸಿ. ಕೆ. ನಾವಲಗಿ
ಶ್ರೀ ಆರ್. ಪಿ. ಅಪರಾಜ
ಡಾ॥ ವಿ. ಎಸ್. ಮಾಳಿ
ಡಾ॥ ಬಸವರಾಜ ಜಗಜಂಪಿ
ಶ್ರೀ ಬಿ. ಬಿ. ಹೊಸಮನಿ
ಡಾ. ಎಂ. ಎಸ್. ಹುಲ್ಲೋಳಿ
ಶ್ರೀಮತಿ ನೀಲಗಂಗಾ ಚರಂತಿಮಠ

**ಪ್ರಕಾಶಕರು**
ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ
**ವಚನ ಅಧ್ಯಯನ ಕೇಂದ್ರ**
ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ
ಬೆಳಗಾವಿ–೫೯೦೦೧೦
ದೂ:೦೮೩೧–೨೪೦೭೧೫೭ *email:basavaguru@rediffmail.com*
*Web: www.rudrakshimath.in*

**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರು ವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **'ವಚನ ಅಧ್ಯಯನ ಕೇಂದ್ರ'** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್ ಮುಖಾಂತರ **"ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ–೫೯೦ ೦೧೦"** ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

**ಅಂತರಂಗದೊಳಗೆ.....**

* ಸಂಪಾದಕೀಯ ೨
* ಕದಳಿಯ ಬನ ೪
  - **ಡಾ. ಸಿದ್ಧರಾಮ ಸ್ವಾಮಿಗಳು**
* ಶಿವಬಸವ ಸ್ತವನ ೬
  - **ಚಂದ್ರಶೇಖರ ವಸ್ತ್ರದ**
* ಕರ್ಮತಪಸ್ವಿ ೮
  - **ಶ್ರೀ ಬಿ. ಎಸ್. ಪಾಟೀಲ**
* ಮಧುರ ಬಾನಂಗಳದಿಂದ ೧೦
  - **ವೀ. ಗ. ಶೀಲವಂತರ**
* ಇತಿಹಾಸ ಸೃಷ್ಟಿಸಿದ ಮಹಾ ಉತ್ಸವ ೧೩
  - **ಡಾ. ರಾಮಕೃಷ್ಣ ಮರಾಠೆ**
* ನಿಜಲಿಂಗ ಚಿಕ್ಕಯ್ಯ ೧೯
  - **ಶ್ರೀ ಶ್ರೀಶೈಲ ಪ. ಕಳಸದ**
* ಇಳೆಯಲ್ಲಿ ಲಿಂಗಸಸಿ ಬೆಳೆಸಿ, ಅರಿವಿನ ಪ್ರಸಾದವನ್ನು ಜಂಗಮವಾಗಿಸಿದಾತ ೨೩
  - **ವೆಂಕಟೇಶ ಕೆ. ಜನಾದ್ರಿ**
* ಶಿವಭಕ್ತಿಯಲ್ಲಿ ನಿರತಳಾದ ದುಗ್ಗಳೆ ೨೭
  - **ಶ್ರೀಧರ ಗೌಡರ**
* ಸಿಂಧೂ ಹಿಂದೂ : ಭಾರತೀಯ ಧರ್ಮ ದರ್ಶನ ಪರಿಷತ್ ಒಂದು ಚಿಂತನೆ ೨೯
  - **ಚಂದ್ರಶೇಖರ ಕಗ್ಗಲ್ಲಗೌಡ್ರು**

ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. **–ಸಂ**

ಸಂಪಾದಕೀಯ

# ನಿರಾಭಾರಿ ಗುರುಗಳಿಗೆ ಭಕ್ತರು ಆಭಾರಿ

ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳು ೧೯೮೯ ನವೆಂಬರ್ ೧೦ ರಂದು ನಾಗನೂರು ರುದ್ರಾಕ್ಷಿಮಠಕ್ಕೆ ಒಂಭತ್ತನೆಯ ಪೀಠಾಧಿಪತಿಯಾಗಿ ಅಧಿಕಾರ ವಹಿಸಿಕೊಂಡರು. ಅಂದು ಹಿರಿಯ ಗುರುಗಳಾದ ಪೂಜ್ಯ ಡಾ. ಶಿವಬಸವ ಮಹಾಸ್ವಾಮಿಗಳು ಅವರಿಗೆ ಷಟ್‌ಸ್ಥಲ ಬ್ರಹ್ಮೋಪದೇಶ ನೀಡಿ, ಚಿನ್ಮಯ ದೀಕ್ಷೆ ಅನುಗ್ರಹಿಸಿ, ನಿರಂಜನ ಪಟ್ಟವನ್ನು ಕಟ್ಟಿದ್ದರು. ೨೦೧೯ ನವೆಂಬರ್ ೧೧ ರಂದು ಪೂಜ್ಯ ಡಾ. ಅಲ್ಲಮಪ್ರಭು ಮಹಾಸ್ವಾಮಿಗಳು ಶ್ರೀಮಠದ ಹತ್ತನೆಯ ಪೀಠಾಧಿಪತಿಯಾಗಿ ಅಧಿಕಾರ ವಹಿಸಿಕೊಂಡರು. ಈಗ ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳು ಷಟ್‌ಸ್ಥಲ ಬ್ರಹ್ಮೋಪದೇಶ ನೀಡಿ ಚಿನ್ಮಯ ದೀಕ್ಷೆ ಅನುಗ್ರಹಿಸಿ, ನಿರಂಜನ ಪಟ್ಟವ ಕಟ್ಟಿದರು. ಪೂಜ್ಯ ಸಿದ್ಧರಾಮ ಮಹಾಸ್ವಾಮಿಗಳು ಬೀಳಗಿಯ ಕಲ್ಮಠ ಮತ್ತು ನಾಗನೂರ ಮಠಗಳಿಗೆ ಪೀಠಾಧಿಪತಿಗಳಾದುದು ಅವರಿಗೆ ಬಯಸದೇ ಬಂದ ಭಾಗ್ಯಗಳಾದರೆ ಮೊನ್ನೆ ರುದ್ರಾಕ್ಷಿಮಠದ ಅಧಿಕಾರವನ್ನು ವಹಿಸಿಕೊಟ್ಟು ನಿರಾಭಾರಿಯಾದುದು ಮಾತ್ರ ಅವರೇ ಬಯಸಿ ಬರಮಾಡಿಕೊಂಡ ಭಾಗ್ಯ.

ಮೇಲಿನ ಮಾತಿಗೆ ಐದು ವರ್ಷಗಳ ಇತಿಹಾಸವಿದೆ. ಪೂಜ್ಯರ ಪೀಠಾರೋಹಣದ ರಜತ ಮಹೋತ್ಸವ ಸಂದರ್ಭವದು (೨೦೧೪) ಗುರುವಂದನೆಗೆ ಪ್ರತಿಕ್ರಿಯೆಯಾಗಿ ಮಾತನಾಡುತ್ತ ಪೂಜ್ಯರು 'ರುದ್ರಾಕ್ಷಿಮಠದ ಭಕ್ತರು, ಹಿತೈಷಿಗಳು ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿಕೊಳ್ಳಬೇಕು ನನ್ನ ಆಸಕ್ತಿಯ ಅಧ್ಯಯನ ಮತ್ತು ಏಕಾಂತಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮನದ ಮಾತನ್ನು ಆಡಿದ್ದರು. ಆಗ ಬೇರೆ ಬೇರೆ ಮಠಗಳ ಪೂಜ್ಯರಿಂದ, ಭಕ್ತರಿಂದ ಅಸಮಾಧಾನ ವ್ಯಕ್ತವಾಗಿತ್ತು. ಅಷ್ಟೇ ಅಲ್ಲದೆ ಅಂದಿನ ಸಮಾರಂಭದ ಸಾನಿಧ್ಯ ವಹಿಸಿದ್ದ ಗದಗ ತೋಂಟದಾರ್ಯ ಮಠದ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು 'ನಿಮಗಿನ್ನೂ ವಯಸ್ಸಿದೆ, ಕೆಲಸ ಮಾಡಲು ಶಕ್ತಿ ಸಾಮರ್ಥ್ಯವಿದೆ. ಇಷ್ಟು ಬೇಗ ಏಕೆ ಈ ನಿರ್ಣಯ' ಎಂದು ಕೇಳಿದ್ದರು. ಆಗ ಪೂಜ್ಯರ ನಿಲುವು ದೊಡ್ಡ ಸುದ್ದಿಯೇ ಆಯಿತು. ಅದಕ್ಕೆ ಅವರು ಪೀಠಕ್ಕೆ ಬರುವ ನೂತನ ಶ್ರೀಗಳಿಗೆ ಮಾರ್ಗದರ್ಶನ ಅವಶ್ಯಕತೆ ಇರುತ್ತದೆ. ಅವರನ್ನು ಸಮರ್ಥರನ್ನಾಗಿ ಮಾಡುವ ಹೊಣೆಗಾರಿಕೆ ಹಿರಿಯ ಸ್ವಾಮಿಗಳದ್ದು. ಅದಕ್ಕಾಗಿ ಸಮಯ ಹಿಡಿಯುತ್ತದೆ ಎಂದು ಜನರನ್ನು ಸಮಾಧಾನ ಪಡಿಸಿದ್ದರು. ಶ್ರೀಮಠದ ಭಕ್ತರು ಅವರ ಮಾತನ್ನು ಮನಸ್ಸಿನ ಮೇಲೆ ತೆಗೆದುಕೊಳ್ಳಲಿಲ್ಲ. ಎರಡು ವರ್ಷಗಳಾದ ಮೇಲೆ ಪೂಜ್ಯರು ಮತ್ತೆ ತಮ್ಮ ಅಧಿಕಾರ ಗಡುವನ್ನು ತಿಳಿಸಿ ಬೇಗನೆ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿಕೊಳ್ಳಿರಿ ಎಂದರು. ಅವರ ಒತ್ತಾಯಕ್ಕೆ ಆಯ್ಕೆ ಪ್ರಕ್ರಿಯೆ ಪ್ರಾರಂಭವಾಯಿತು. ತಿಂಗಳೊಪ್ಪತ್ತಿನಲ್ಲಿ ಉತ್ತರಾಧಿಕಾರಿಯನ್ನು ಘೋಷಿಸಲು ಸಿದ್ಧತೆ ನಡೆದಿತ್ತು. ಅಷ್ಟರಲ್ಲಿ ಗದಗ ತೋಂಟದಾರ್ಯಮಠದ ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಲಿಂಗೈಕ್ಯರಾದರು. ಅವರ ಉಯಿಲಿನಂತೆ ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳು ತೋಂಟದಾರ್ಯಮಠದ ಅಧಿಕಾರವನ್ನು ಅನಿವಾರ್ಯವಾಗಿ ವಹಿಸಿಕೊಳ್ಳಬೇಕಾಯಿತು. ಇರುವ ಅಧಿಕಾರವನ್ನು ಬಿಟ್ಟು ನಿರುಮ್ಮಳಾಗಿ ಇರಬೇಕೆಂದವರಿಗೆ ಮತ್ತೊಂದು ದೊಡ್ಡ ಹೊಣೆಗಾರಿಕೆ ಹೆಗಲೇರಿತು. ಇದೇನಿದು? ಹೀಗೇಕೆ? ಎಂದು ವಿಸ್ಮಯವಾಗುವುದು ಸಹಜ. ಅಧಿಕಾರದಿಂದ ದೂರ ಇರಬೇಕು ಎನ್ನುವವರಿಗೆ ಅಧಿಕಾರವೇ ಬೆಂಬಲಿಸಿ ಬರುವುದಕ್ಕೆ ಕಾರಣವೂ ಇಲ್ಲದಿಲ್ಲ. ಅದು ಏನೆಂದರೆ 'ಸೇವೆ'. ಪೂಜ್ಯರ ಸೇವೆಯ ಶಿಸ್ತು, ಸೇವೆಯ ವೈಖರಿ, ಸೇವೆಯ ಬದ್ಧತೆ ಲಿಂಗ ಮೆಚ್ಚಿ ಅಹುದು ಅಹುದು ಎನ್ನುವಂತಹುದು.

ನಾಗನೂರು ರುದ್ರಾಕ್ಷಿಮಠದ ಪೀಠಾಧಿಪತಿಯಾಗಿ ಪೂಜ್ಯರು ಮೂವತ್ತು ವರುಷ ಸೇವೆ ಮಾಡಿದ್ದರು. ಈ ಅವಧಿಯಲ್ಲಿ ಅವರು ಹಿರಿಯ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿಯೇ ನಡೆದರು. ಅವರ ಅಪೂರ್ಣ ಕನಸುಗಳನ್ನು ನನಸು ಮಾಡಿದರು. ತಮ್ಮ ಆಸಕ್ತಿಯ ಕೆಲವು ಮಹತ್ವದ ಚಟುವಟಿಕೆಗಳನ್ನು ಆರಂಭಿಸಿದರು. ಶ್ರೀಮಠದ ಸಮಾಜೋಪಯೋಗಿ ಕಾರ್ಯಗಳನ್ನು ಎತ್ತರಿಸಿ, ವಿಸ್ತರಿಸಿ ನಾಗನೂರು ರುದ್ರಾಕ್ಷಿಮಠದ ಕೀರ್ತಿಯನ್ನು, ಘನತೆಯನ್ನು ಹೆಚ್ಚಿಸಿದರು.

ರುದ್ರಾಕ್ಷಿಮಠದ ಭಕ್ತರ ಯೋಗಕ್ಷೇಮವಿರಬಹುದು, ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ ಆಡಳಿತವಿರಬಹುದು, ಗಡಿನಾಡು ಬೆಳಗಾವಿಯ ಕನ್ನಡಪರ ನಿಲುವು ಇರಬಹುದು, ರೈತರ ಸಮಸ್ಯೆಗಳ ಪರಿಹಾರವಿರಬಹುದು, ಲಿಂಗಾಯತ ಸ್ವತಂತ್ರಧರ್ಮದ ಹೋರಾಟವಿರಬಹುದು, ಬಸವತತ್ತ್ವಗಳ ಪ್ರಸಾರವಿರಬಹುದು, ಸಾಹಿತ್ಯಕವಾಗಿ ಓದು, ಬರಹ,

ಪುಸ್ತಕಗಳ ಪ್ರಕಟಣೆ ಇರಬಹುದು– ಯಾವುದೇ ಚಟುವಟಿಕೆಗಳಿರಲಿ ಎದ್ದು ಕಾಣುವ ಅವರ ಗುಣವೆಂದರೆ ಸೇವಾತತ್ಪರತೆ. ಶ್ರಮದ ಸೇವೆಗೆ ಫಲವಿದೆ; 'ಶ್ರಮಏವ ಜಯತೇ' ಎಂಬುದರಲ್ಲಿ ಅಚಲವಾದ ವಿಶ್ವಾಸ. ಶ್ರೀಮಠದ ಆಡಳಿತದಲ್ಲಿ ಅವರೆಂದೂ ಪರಿಶೀಲಿಸದೆ ಹಾಗೆ ಒಪ್ಪಿಕೊಳ್ಳುವವರಲ್ಲ. ಆದಾಯ–ಖರ್ಚಿನ ವಿಷಯದಲ್ಲಿ ಸಣ್ಣ ಪುಟ್ಟ ಲೆಕ್ಕಗಳನ್ನು ಪ್ರತ್ಯಕ್ಷವಾಗಿ ಪರಿಶೀಲಿಸದೆ ಒಪ್ಪಿಕೊಳ್ಳುವವರಲ್ಲ. ಭಕ್ತರ ಕಾಣಿಕೆ, ದಾನಿಗಳ ದೇಣಿಗೆ ಶ್ರೀಮಠದ ಏಳಿಗೆಗೆ, ಸಮಾಜದ ಸೇವೆಗೆ ಸದ್ವಿನಿಯೋಗ ಆಗಬೇಕೆನ್ನುವ ಕಳಕಳಿ ಅವರದು.

ಮಾಡುವ ಕೆಲಸ ದೋಷರಹಿತವಾಗಿರಬೇಕು ಎನ್ನುವುದು ಶ್ರೀಗಳ ನಿಲುವು. ಸಾಂಸ್ಕೃತಿಕ ಚಟುವಟಿಕೆಗಳಿರಲಿ, ಪುಸ್ತಕಗಳ ಪ್ರಕಟಣೆ ಇರಲಿ ಸ್ವತಃ ಅವುಗಳ ಮೇಲ್ವಿಚಾರಣೆ ಮಾಡುವರು. ತಾವು ಬರೆದ ಬರಹ ಇರಲಿ, ಶ್ರೀಮಠದಿಂದ ಪ್ರಕಟವಾಗುವ ಪುಸ್ತಕವಿರಲಿ ಅವುಗಳ ಕರಡನ್ನು ತಾವೇ ತಿದ್ದಿ ದೋಷವಿಲ್ಲವೆಂದು ಖಚಿತವಾದಾಗ ಮಾತ್ರ ಪ್ರಕಟಣೆಗೆ ಒಪ್ಪಿಗೆ ಸೂಚಿಸುತ್ತಾರೆ. ಓದುವುದರಲ್ಲಿ ಮತ್ತು ಕರಡು ತಿದ್ದುವುದರಲ್ಲಿ ಅವರು ಅನುಭವಿಸುವ ಆನಂದಕ್ಕೆ ಪಾರವೇ ಇಲ್ಲವೆಂಬುದು ಮನಗಂಡ ಮಾತು. ಸಾಹಿತ್ಯಿಕವಾಗಿ ಅವರ ರಚನೆಗಳು ವಿಶೇಷವಾಗಿ ವಚನಾರ್ಥ ಚಿಂತನ, ಅಮೃತವಾಕ್ಕು ಮತ್ತು ಭಾರತೀಯ ತತ್ತ್ವಶಾಸ್ತ್ರದಂತಹ ಅನುವಾದ ಕೃತಿಗಳು ಕನ್ನಡ ಸಾರಸ್ವತಲೋಕಕ್ಕೆ ಮಹತ್ವದ ಕೊಡುಗೆಗಳೆನಿಸಿವೆ. ಅವರ ಆಸಕ್ತಿಯ ಫಲವಾಗಿಯೇ ಜನ್ಮತಳೆದ 'ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ' 'ವಚನ ಅಧ್ಯಯನ ಕೇಂದ್ರಗಳು' ನಾಡಿನ ವಿದ್ವತ್‌ಲೋಕಕ್ಕೆ ಮಾದರಿಗಳೆನಿಸಿವೆ. ಶೈಕ್ಷಣಿಕವಾಗಿ ಪೂಜ್ಯರು ಆರಂಭಿಸಿದ ಎಸ್. ಜಿ. ಬಾಳೇಕುಂದ್ರಿ ತಾಂತ್ರಿಕ ಮಹಾವಿದ್ಯಾಲಯ ಕೂಡ ಮಹತ್ವದ ಸಾಧನೆಯೆನಿಸಿದೆ. ಪೂಜ್ಯರ ಸಾಧನೆಗಳ ಪಟ್ಟಿ ದೊಡ್ಡದು. ಅವನ್ನೆಲ್ಲ ಹೇಳುವುದಕ್ಕೆ ಇಲ್ಲಿ ಸ್ಥಳವಿಲ್ಲ. 'ಮಾಡುವಂತಿರಬೇಕು ಮಾಡದಂತಿರಬೇಕು ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು' ಎಂಬಂತೆ ಏನೆಲ್ಲ ಸೇವೆ ಮಾಡಿದರೂ ಏನೊಂದನ್ನೂ ಹೇಳಿಕೊಳ್ಳುವ ಸ್ವಭಾವ ಅವರದು.

ಕಳೆದ ತಿಂಗಳು ಪರಮಪೂಜ್ಯ ಡಾ. ಶಿವಬಸವ ಮಹಾಸ್ವಾಮಿಗಳ ಪುಣ್ಯಸ್ಮರಣೆಯ ರಜತ ಮಹೋತ್ಸವದ ನಿಮಿತ್ತ 'ಲಿಂಗಾಯತ ದರ್ಶನ'ದ ವಿಶೇಷಾಂಕ ಪ್ರಕಟವಾಯಿತು. ಅದರಲ್ಲಿಯ ಪೂಜ್ಯರ ಪರಿಚಯದ ಲೇಖನ ಓದಿ ಗುರುಗಳಾದ ಡಾ. ಗುರುಲಿಂಗ ಕಾಪಸೆ ಅವರು ೮–೧೧–೨೦೧೯ ರಂದು ಫೋನು ಮಾಡಿ ಮಾತನಾಡಿದರು. 'ಪೂಜ್ಯರು ಬಾಲ್ಯದಲ್ಲಿ ನಡೆದ ಘಟನೆ ಓದಿ ವಿಸ್ಮಯಗೊಂಡೆ. ಎಂತಹ ಬಡತನ ಅದು? ಅವರನ್ನು ಕುತ್ತಿನಿಂದ ಪಾರು ಮಾಡಿದ ಆ ತಾಯಿ ಹಡಪದ ಗಂಗಮ್ಮ ಸಾಮಾನ್ಯ ಹೆಣ್ಣುಮಗಳಲ್ಲ. ಅವಳು ಮಹಾಶರಣೆ. ಒಬ್ಬ ಜಗದ್ಗುರುಗಳನ್ನು ಬದುಕಿಸಿದ ಶ್ರೇಯ ಅವಳದು. ಅರವಿಂದರ ತತ್ತ್ವಜ್ಞಾನದ ಪ್ರಕಾರ ಇದೆಲ್ಲ ಪೂರ್ವನಿಯೋಜಿತ ಎಂದು ಹೇಳುತ್ತ ಪೂಜ್ಯರ ವಿನಯ ಹಾಗು ಕೆಲಸದ ಸಾಮರ್ಥ್ಯವನ್ನು ಬಣ್ಣಿಸಿದರು. ಅದಾದ ಹದಿನೈದು ನಿಮಿಷಗಳಲ್ಲಿ ಪ್ರಸಾದನಿಲಯದ ಹಳೆಯ ವಿದ್ಯಾರ್ಥಿಗಳೂ, ಲೇಖಕರೂ ಆದ ಶ್ರೀ ಆರ್. ಪಿ. ಅಪರಾಜ ಅವರು ಪೋನಿಸಿ ಗದ್ಗದಿತ ಕಂಠದಿಂದ ಮಾತನಾಡಿದರು. ಪೂಜ್ಯರ ಬಾಲ್ಯದ ಘಟನೆ ಓದಿದಾಗ ಕಣ್ಣೀರು ತಡೆಯಲಿಲ್ಲ. ಎರಡು ಮೂರು ಸಲ ಓದಿದರೂ ಅದೇ ಪರಿಸ್ಥಿತಿ ಎಂದು ಹೇಳಿದರು. ನಿಜಕ್ಕೂ ಅದೊಂದು ಪವಾಡಸದೃಶ ಘಟನೆ!

ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳು ಬಾಲ್ಯದಲ್ಲಿ ಬಡತನದ ಕೆಂಡವನ್ನು ಹಾಯ್ದು ಬಂದವರು, ಅಧ್ಯಯನದಿಂದ ಗಟ್ಟಿಗೊಂಡು ಬೆಳೆದವರು. ಲಿಂ. ಡಾ. ಶಿವಬಸವ ಮಹಾಸ್ವಾಮಿಗಳವರ ಸೇವೆಯನ್ನು ತನು ಮುಟ್ಟಿ, ಮನ ಮುಟ್ಟಿ, ಮಾಡಿದವರು. ಹಾಗೆಯೇ ನಾಗನೂರು ಮಠದ ಭಕ್ತರ ಸೇವೆಯನ್ನೂ ನಿಷ್ಠೆಯಿಂದ ಮಾಡಿದರು. ಇತ್ತೀಚೆಗೆ ಜರುಗಿದ ನೂತನ ಶ್ರೀಗಳ ಪಟ್ಟಾಧಿಕಾರ ಹಾಗು ಲಿಂ. ಪೂಜ್ಯರ ರಜತ ಪುಣ್ಯಸ್ಮರಣೋತ್ಸವದಲ್ಲಿ ಜನರ ಪ್ರತಿಕ್ರಿಯೆಯೇ ಇದಕ್ಕೊಂದು ನಿದರ್ಶನ. ಅವರು ಸೇವೆಯಿಂದ ಶ್ರೀಮಠ, ಸಮಾಜದ ಜನರ ಮನ ಗೆದ್ದವರು. ಅವರ ಸೇವೆಯನ್ನು ನಾಗನೂರು ರುದ್ರಾಕ್ಷಿಮಠದ ಭಕ್ತರು ಎಂದೂ ಮರೆಯುವುದಿಲ್ಲ. ಪೂಜ್ಯರು ಪೀಠ ಬಿಟ್ಟರೂ ಅವರ ಸೇವೆ ಆಶೀರ್ವಾದ ನಮಗಿರುತ್ತದೆ ಎಂಬ ವಿಶ್ವಾಸ ಅವರದು. ಈ ಸಂದರ್ಭದಲ್ಲಿ ಪೂಜ್ಯರಿಗೆ ಭಕ್ತ ಸಮುದಾಯದ ಪರವಾಗಿ ಶರಣು ಶರಣಾರ್ಥಿಗಳು. ನೂತನ ಶ್ರೀಗಳಾದ ಪೂಜ್ಯ ಡಾ. ಅಲ್ಲಮಪ್ರಭು ಸ್ವಾಮಿಗಳೂ ಕೂಡ ನಯ–ವಿನಯ ಸಂಪನ್ನರು, ವಿದ್ಯಾವಂತರು, ಉತ್ಸಾಹಿಗಳು, ಸೇವಾತತ್ಪರರು. ಅವರೂ ನಾಗನೂರು ರುದ್ರಾಕ್ಷಿಮಠದ ಭವ್ಯಪರಂಪರೆಯನ್ನು ಮುನ್ನಡೆಸಿಕೊಂಡು ಹೋಗಬಲ್ಲರು ಎಂಬ ವಿಶ್ವಾಸವೂ ಭಕ್ತರಿಗಿದೆ. ಪೂಜ್ಯರಾದ ಶ್ರೀ ಡಾ. ಅಲ್ಲಮಪ್ರಭು ಸ್ವಾಮಿಗಳಿಗೆ ಹಾರ್ದಿಕ ಅಭಿನಂದನೆಗಳು.

**ಡಾ. ರಾಮಕೃಷ್ಣ ಮರಾಠೆ**

# ಕದಳಿಯ ಬನ

● ಡಾ. ಸಿದ್ಧರಾಮ ಸ್ವಾಮಿಗಳು

'ಕದಳಿ' ಎಂಬುದಕ್ಕೆ ಸಾಮಾನ್ಯಾರ್ಥವು 'ಬಾಳೆ' ಎಂಬುದಾಗಿದ್ದರೂ ಶಿವಶರಣರ ದೃಷ್ಟಿಯಲ್ಲಿ ಅದೊಂದು ಪಾರಿಭಾಷಿಕ ಪದವಾಗಿದೆ. ಆಧ್ಯಾತ್ಮಿಕ ಪರಿಭಾಷೆಯಲ್ಲಿ ಕದಳಿಯನ್ನು ನಾಶವಾಗುವ ಮಾನವ ದೇಹಕ್ಕೂ, ಭವಭವಾಂತರಕ್ಕೆ ಕಾರಣವಾಗುವ ಮಾಯಾ–ಮೋಹಗಳಿಗೂ ಪರ್ಯಾಯವಾಗಿ ಶರಣರು ಬಳಸಿದ್ದಾರೆ. ಶ್ರೀಶೈಲದ ಪರ್ವತಗಳ ಸಾಲಿನಲ್ಲಿ ಕದಳಿಯ ಬನವಿದ್ದು ಪ್ರಾಕೃತಿಕ ಸೌಂದರ್ಯದ ಗಣಿಯಾಗಿದೆ. ಅಲ್ಲಿರುವ ಮರಗಳು ಕಲ್ಪವೃಕ್ಷಗಳಾಗಿವೆ, ಸಂಜೀವಿನಿಗಳಾಗಿವೆ. ಶಿಲೆಗಳೆಲ್ಲ ಪರುಷಮಣಿಗಳಾಗಿದ್ದು, ಜಲವೆಲ್ಲವೂ ನಿರ್ಜರಾಮೃತವಾಗಿದೆ. ಎಡಹುವ ಹರಳುಗಳೆಲ್ಲ ಚಿಂತಾಮಣಿಗಳಾಗಿವೆ. ಭಗವಂತನ ಸಾನ್ನಿಧ್ಯದಿಂದ ಈ ಪ್ರದೇಶವು ಅವಿಮುಕ್ತ ಕ್ಷೇತ್ರವಾಗಿದೆ. ಇಂಥ ಕದಳಿಯ ಬನವನ್ನು ಕಂಡು ಧನ್ಯಳಾದ ಎಂದು ಶರಣೆ ಅಕ್ಕಮಹಾದೇವಿ ತನ್ನ ಸುಂದರ ಶಬ್ದಗಳಲ್ಲಿ ಬಣ್ಣಿಸಿದ್ದಾಳೆ. ಇಂದಿಗೂ ಆ ಪ್ರದೇಶವು ಶ್ರೀಶೈಲದ ಪರ್ವತಗಳ ಸಾಲಿನಲ್ಲಿದ್ದು ನೋಡುಗರ ಕಣ್ಮನ ಸೆಳೆಯುವಂತಿದೆ.

ಭೌತಿಕವಾದ ಈ ಕದಳಿಯು ಬನದಂತೆ ನಮ್ಮಂತರಂಗದಲ್ಲಿಯೂ ಕದಳಿಯ ಬನವಿದೆ. ಭಗವಂತನನ್ನು ಅರಿತು ಅವನೊಡನೆ ಸಾಮರಸ್ಯ ಸಾಧಿಸಲು ಅಂತರಂಗದ ಈ ಕದಳಿಯನ್ನು ಭೇದಿಸಬೇಕಾದುದು ಅತ್ಯವಶ್ಯವಾಗಿದೆ. ಈ ಕದಳಿಯನ್ನು ಕುರಿತು ಅಕ್ಕಮಹಾದೇವಿ– 'ಕದಳಿ ಎಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು ವಿಷಯಂಗಳು, ಕದಳಿ ಎಂಬುದು ಭವಘೋರಾರಣ್ಯ' ಎನ್ನುತ್ತಾಳೆ. ನಶ್ವರವಾಗಿರುವ ಮಾನವ ದೇಹವು ಕದಳಿ. ತನು ಮನಂಗಳು, ರೂಪರಸಾದಿ ವಿಷಯಂಗಳು ನಾಶವಾಗುವುದರಿಂದ ಇವೆಲ್ಲವೂ ಕದಳಿ. ಹಾಗೆಯೇ ಕದಳಿ ಎಂದರೆ ಪುನರ್ಜನ್ಮಕ್ಕೆ ಕಾರಣವಾಗುವ ಅತ್ಯಂತ ಘೋರವಾದ ಭವಾರಣ್ಯ. ಅದೂ ಕೂಡ ನಾಶವುಳ್ಳದ್ದೇ. ಇಂತಹ ಭವಾರಣ್ಯದಿಂದ ಹೊರಬರುವ ಮಾರ್ಗವನ್ನು ಕಂಡುಕೊಳ್ಳಬೇಕು. ಈ ಅರಣ್ಯದಲ್ಲಿ ಮಾಯಾ–ಮೋಹದ ಮೃಗಗಳಿವೆ. ಆದ್ದರಿಂದ 'ಕಾಯ ಕಾಂತಾರವ ಹೊಕ್ಕು ಬೇಂಟೆಯನಾಡಿ ಮಾಯಾಮೋಹದ ಮೃಗಗಳ ಕೊಲ್ಲಿರೋ' ಎಂದು ಅನುಭಾವಿಗಳು ನಮ್ಮನ್ನು ಎಚ್ಚರಿಸಿದ್ದಾರೆ.

'ಕದಳಿಯ ಬನವ ಹೊಕ್ಕು ಹೊಲಬ ತಿಳಿಯದನ್ನಕ್ಕ, ಬಯಲ ಗಾಳಿಯ ಹಿಡಿದು ಗಟ್ಟಿ ಮಾಡದನ್ನಕ್ಕ, ಬರಿದೆ ಬಹುದೆ ಶಿವಜ್ಞಾನ?' ಷಡುವರ್ಗವಳಿಯದನ್ನಕ್ಕ ಬರಿದೆ ಬಹುದೆ?, ಅಷ್ಟಮದವನಳಿಯದನ್ನಕ್ಕ? ಮದಮತ್ಸರವ ಮಾಡಲಿಲ್ಲ, ಹೊದಕುಳಿಗೊಳಲಿಲ್ಲ, ಗುಹೇಶ್ವರಲಿಂಗವು ಕಲ್ಪಿತದೊಳಗಲ್ಲ' ಎನ್ನುತ್ತಾರೆ ಅಲ್ಲಮ ಪ್ರಭುದೇವರು. ಶಿವಜ್ಞಾನವಿಲ್ಲದೆ ಮೋಕ್ಷವಿಲ್ಲ. ಮೋಕ್ಷ ಸಂಪಾದಿಸದೆ ಮಾನವ ಬದುಕು ಸಾರ್ಥಕವಾಗುವುದಿಲ್ಲ. ಬದುಕನ್ನು ಸಾರ್ಥಕ ಪಡಿಸಿಕೊಳ್ಳಲು ಭವಾರಣ್ಯವೆನಿಸಿದ ಕದಳಿಯ ಬನದಿಂದ ಹೊರಬರುವ ಶಿವಪಥವನ್ನು ಕಂಡುಕೊಳ್ಳಬೇಕು. ಇಂತಹ ಶಿವಪಥಗಾಮಿಗಳಾಗಬೇಕಾದರೆ ಜಾತಿ, ವರ್ಣ, ಆಶ್ರಮ, ಕುಲ, ಗೋತ್ರ, ನಾಮವೆಂಬ ಷಡ್ಭ್ರಮೆಗಳಿಂದ ಮುಕ್ತವಾಗಬೇಕು. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರಗಳನ್ನು ದೂರ ಸರಿಸಬೇಕು. ಕುಲ ಛಲ ಮೊದಲಾದ ಅಷ್ಟಮದಗಳನ್ನು ಅಳಿಯಬೇಕು. ಆಗ ಮಾತ್ರ ಈ ಮಾಯಾಮೋಹಗಳಿಂದ ಕೂಡಿದ ಕದಳಿಯ ಬನವನ್ನು ಭೇದಿಸಲು ಸಾಧ್ಯವಾಗುವುದು. ಮದಮತ್ಸರಗಳು ಚಿಂತೆ–ಭ್ರಾಂತಿಗಳಿದ್ದರೆ ಕದಳಿಯ ಬನದಿಂದ ಹೊರಬರುವ ಶಿವಮಾರ್ಗವು ಗೋಚರವಾಗದು.

'ಕದಳಿ ಎಂಬುದ ಗೆದ್ದು, ತವೆ ಬದುಕಿ ಬಂದು, ಕದಳಿಯ ಬನದಲ್ಲಿ ಭವಹರನ ಕಂಡೆನು'– ಎಂದು ಅಕ್ಕಮಹಾದೇವಿಯು ಹೇಳುವಲ್ಲಿ ದೇಹವೇ ನಾನೆಂಬ ಭಾವದಿಂದ ಮುಕ್ತನಾಗಿ ಭವಹರನಾದ ಭಗವಂತನನ್ನು ಕಾಣಬೇಕೆಂಬ ಭಾವವಿದೆ. ನಾನು ದೇಹ, ನಾನು ಬೇರೆ, ಭಗವಂತ ಬೇರೆ ಎಂಬ ದ್ವೈತ ಇರುವವರೆಗೆ ಜ್ಯೋತಿಸ್ವರೂಪನಾದ ಭಗವಂತನನ್ನು ಕಾಣಲಾಗದು. ಆದ್ದರಿಂದ ಅಲ್ಲಮ ಪ್ರಭುಗಳು– 'ನೀನಾನೆಂಬುಭಯ ಸಂಗವಳಿದು, ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ

ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ

ತುಟ್ಟತುದಿಯ ಮೆಟ್ಟಿ ನೋಡಲು ಬಟ್ಟಬಯಲು ಕಾಣಬಹುದು ನೋಡಾ. ಆ ಬಯಲ ಬೆರಸುವರೆ ತ್ರಿಕೂಟ ಗಿರಿಯೊಳಗೊಂದು ಕಾಣಬಾರದ ಕದಳಿಯುಂಟು ನೋಡಾ. ಕದಳಿಯ ಕಳೆದಲ್ಲಿ ಒಳಹೊಕ್ಕು ನೋಡಲು ಬೆಳಗುವ ಜ್ಯೋತಿಯುಂಟು ಕೇಳಾ' ಎನ್ನುತ್ತಾರೆ. ಅಂತಹ ಜ್ಯೋತಿರ್ಲಿಂಗವನ್ನು ದರ್ಶಿಸಿ ಸಮರಸಗೊಳ್ಳುವುದೇ ಬದುಕಿನ ಉದ್ದೇಶ. ಆ ಉದ್ದೇಶದ ಈಡೇರಿಕೆಗಾಗಿ ನಮ್ಮಂತರಂಗದ ಕದಳಿಯ ಬನವನ್ನು ಹೊಕ್ಕು ಶೋಧಿಸಬೇಕು. ಆಶೆ–ಆಮಿಷ, ಮಾಯಾ–ಮೋಹಗಳಿಂದ ಮುಕ್ತನಾಗಿ ನಿರುಪಾಧಿಕ ಪರವಸ್ತುವನ್ನು ಕಾಣಬೇಕು. ಆ ಪರಮ ಸತ್ಯದಲ್ಲಿ ಬೆರೆತು ಒಂದಾಗಬೇಕು.

**ಕಂಡುದ ಹಿಡಿಯಲೊಲ್ಲದೆ ಕಾಣದುದ ಹಿಡಿದಿಹೆನೆಂದಡೆ**
**ಸಿಕ್ಕದೆಂಬ ಬಳಲಿಕೆಯ ನೋಡಾ**
**ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ**
**ಕಾಣದುದ ಕಾಣಬಹುದು ಗುಹೇಶ್ವರಾ.**

ಜಗತ್ತಿನ ಇತರ ಧರ್ಮಗಳಂತೆ ಲಿಂಗಾಯತ ಧರ್ಮದಲ್ಲಿಯೂ ಗುರುವಿಗೆ ಅಗ್ರಸ್ಥಾನವಿದೆ. ಗುರುಕರುಣೆ ಇಲ್ಲದೆ ಯಾವ ವ್ಯಕ್ತಿಯೂ ತನ್ನ ಬದುಕನ್ನು ಹಸನಾಗಿಸಿಕೊಳ್ಳಲಾರ. ಅಧ್ಯಾತ್ಮ ಸಿದ್ಧಿಯನ್ನೂ ಪಡೆಯಲಾರ. ವ್ಯಕ್ತಿಯ ಲೌಕಿಕ ಹಾಗು ಪಾರಲೌಕಿಕ ಬದುಕಿಗೆ ಮಾರ್ಗದರ್ಶನ ಮಾಡುವವನೇ ಗುರು. ಅಂಥ ಗುರುವಿನ ಮಹತಿಯನ್ನು ಬಯಲುದೇಹಿಗಳಾದ ಅಲ್ಲಮಪ್ರಭುದೇವರು ಮೇಲಿನ ವಚನದಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ.

ಜಗತ್ತಿನಲ್ಲಿ ಎಲ್ಲರೂ ಕಣ್ಣಿಗೆ ಕಾಣದ ವಸ್ತುವನ್ನು ಹುಡುಕುತ್ತಾರೆಯೆ ವಿನಾ ಕಾಣುವ ವಸ್ತುವನ್ನು ಯಾರೂ ಹುಡುಕುವುದಿಲ್ಲ. ಏಕೆಂದರೆ ಕಾಣುವ ವಸ್ತುವಿಗಿಂತ ಕಾಣದ ವಸ್ತುವಿಗೆ ಹೆಚ್ಚು ಬೆಲೆ. ಆದುದರಿಂದಲೇ ಕಾಣದ ವಸ್ತುವನ್ನು ಅರಸುವರು. ಆದರೆ ಕಣ್ಣಿಗೆ ಕಾಣುವ ವಸ್ತುವಿನ ಮೂಲಕ ಕಾಣದ ವಸ್ತುವನ್ನು ಕಂಡುಕೊಳ್ಳಬೇಕೆಂಬುದು ಅಲ್ಲಮಪ್ರಭುದೇವರ ಸ್ಪಷ್ಟ ಅಭಿಪ್ರಾಯ.

ಪರಮಾತ್ಮ ಕಣ್ಣಿಗೆ ಕಾಣಲಾರ. ಏಕೆಂದರೆ ಅವನು ಇಂದ್ರಿಯಾತೀತ, ನಿರ್ಗುಣ, ನಿರಾಕಾರ ಸ್ವರೂಪ. ಅವನು ಕೇವಲ ಅನುಭಾವ ವೇದ್ಯ. ಅನುಭಾವ ವೇದ್ಯವಾದುದನ್ನು ಅನುಭವಿಸಬೇಕು. ಅದಕ್ಕಾಗಿ ಗುರುವನ್ನು ಆಶ್ರಯಿಸಬೇಕು. ಶ್ರೀಗುರುವು ಕರುಣೆಯಿಂದ ನಮ್ಮ ಮೋಹವನ್ನು ನಾಶಗೊಳಿಸುತ್ತಾನೆ. ಅಗೋಚರನಾದ ಪರಮಾತ್ಮನನ್ನು ಇಷ್ಟಲಿಂಗ ರೂಪದಲ್ಲಿ ನಮ್ಮ ಕರಸ್ಥಲಕ್ಕೆ ತಂದು ಕೊಡುತ್ತಾನೆ. ಕಾಣದ ವಸ್ತುವೆ ಕರಸ್ಥಲಕ್ಕೆ ಬಂದಾಗ ಮತ್ತೇಕೆ ಹುಡುಕಬೇಕು? ಇಷ್ಟಲಿಂಗವನ್ನು ನಮ್ಮ ಕರಸ್ಥಲಕ್ಕೆ ಕರುಣಿಸುವ ಮೂಲಕ ಗುರು ನಮ್ಮನ್ನು ಲಿಂಗದ ಭಕ್ತರ–ನ್ನಾಗಿಸುತ್ತಾನೆ. ಲಿಂಗದಭಕ್ತ ಗುರುವಿನ ಮಾರ್ಗದರ್ಶನದಲ್ಲಿ ತನ್ನ ಅಧ್ಯಾತ್ಮ ಸಾಧನೆಯನ್ನು ಮುಂದುವರೆಸಿ ಕೊನೆಯಲ್ಲಿ ಶಿವನಲ್ಲಿ ಸಮರಸಗೊಳ್ಳುತ್ತಾನೆ. ಶಿವನೇ ತಾನೆಂಬ, ಶಿವನಿಂದ ಅನ್ಯವಿಲ್ಲವೆಂಬ ಭಾವ ತಾಳುತ್ತಾನೆ. ಜೀವ ಶಿವನಾಗುವ ಪರಿಯನ್ನು ತಿಳಿಸುವವನೇ ಗುರು. ಅವನು ದೃಶ್ಯ ಪರಮಾತ್ಮ ಅಂದರೆ ಕಣ್ಣಿಗೆ ಕಾಣುವ ಪರಮಾತ್ಮ. ಅವನು ಜ್ಞಾನಪಥ ದರ್ಶಕ. ಅನುಭಾವ ವೇದ್ಯವಾದ, ಕಣ್ಣಿಗೆ ಕಾಣದ ಪರಮಾತ್ಮನ ಅನುಭೂತಿ ಗುರುವಿನಿಂದಲೇ ಸಾಧ್ಯವಾಗುತ್ತದೆ. ಗುರುವನ್ನಾಶ್ರಯಿಸದೆ, ಗುರು ಕರುಣೆಯನ್ನು ಪಡೆಯದೆ ಅಗೋಚರನಾದ ಶಿವನನ್ನು ಕಂಡೇ ತೀರುವೆನೆಂಬ ಅಥವಾ ಹಿಡಿದೇ ತೀರುವೆನೆಂಬ ಛಲ ನಿರರ್ಥಕ. ಅದು ಬರೀ ಬಳಲಿಕೆ. ಆದ್ದರಿಂದ ಅಧ್ಯಾತ್ಮ ಸಾಧಕನಿಗೆ ಗುರುಪಾದವೇ ಗತಿ. ಗುರುವಿನಿಂದ ಶಿವಜ್ಞಾನವುಂಟಾಗಿ ಜೀವ ಭಾವ ನಿವಾರಣೆಯಾಗುತ್ತದೆ; ಶಿವಭಾವ ಅಳವಟ್ಟು ಶಿವಾನುಭೂತಿ ಯುಂಟಾಗುತ್ತದೆ. ಹೀಗೆ ಕಣ್ಣಿಗೆ ಕಾಣುವ ಗುರುವನ್ನು ಆಶ್ರಯಿಸಿ ಕಾಣದ ಪರಮಾತ್ಮನನ್ನು ಕಾಣಬೇಕೆಂಬುದು ಈ ವಚನದ ಸ್ಪಷ್ಟ ಸಂದೇಶವಾಗಿದೆ.

■■

# ಶಿವಬಸವ ಸ್ತವನ

● ಚಂದ್ರಶೇಖರ ವಸ್ತ್ರದ

ಹರನ ಕರುಣೆಯ ಕಾಸಿ ಕರಗಿಸಿ
ಎರಕ ಹೊಯ್ದಾ ತೆರದಲಿದ್ದರು
ವರದ ಹಸ್ತದ ಗುರುಗಳವರೀ ಧರೆಗೆ ದೊಡ್ಡವರು
ಪೊರೆದರಿವರನವರತ ಬಾಲರ
ಕರೆದು ಅಶನಾಸರೆಯನೀಯುತ
ಎರೆದರಮೃತ ಜಲವ ಶಿವಬಸವ ಗುರುವರರು

ಒಂದು ವರುಷದ ಕಂದನಾದಿನ
ಬಂದನಂಬೇಗಾಲನಿಡುತಲಿ
ವಂದ್ಯ ಅಥಣಿಯ ಶಿವಯೋಗಿ ಗುರುವರ ಪೂಜೆಗೈವಲ್ಲಿ
ಗಂಧ ಅಕ್ಷತೆಯೊಡನೆ ಆಡುತ
ಅಂದವಹ ಹೂರಾಶಿ ನೋಡುತ
ಚಂದನೆಯ ಕರದಲ್ಲಿ ಗಂಟೆಯ ಹಿಡಿದು ನುಡಿಸಿದನು

ಬಾಲಶಿವನಂತೆ ಹೊಳೆಯುವ
ಎಳೆಯ ಮಗುವಿನ ಲೀಲೆಯಾಟವ
ಕುಳಿತ ನಿಲುವಲ್ಲೆ ನೋಡುತ ಶಿವಯೋಗಿ ನಸುನಕ್ಕ
ಉಳಿದ ಎಳೆಯರು ಬೇರೆ, ಈ ಮಗು
ಬೆಳೆದು ದೊಡ್ಡವನಾಗಿ ಜಗದಾ
ಕೊಳೆಯ ತೊಳೆವನು, ಒಳಿತನ ಬೆಳೆಯ ಬೆಳೆಯುವನು

ಲಿಂಗದಾರೋಗಣೆಯ ವೇಳೆಗೆ
ಲಿಂಗಹಸ್ತದಿ ಗಂಟೆ ನುಡಿಸುತ
ಸಂಗನೊಲುಮೆಯ ಪಡೆದ ಈ ಮಗು ನಿಸ್ಸಂಗಿ ತಾನಹನು
ಅಂಗಗುಣಗಳನಳಿದು ಮುಂದೆ
ಲಿಂಗವೇ ತಾನಾಗಿ ನಿಂತು
ಹಿಂಗಿಸುವನಿವ ಲೋಕ ಹಸಿವೆಯ ಸಂಗನೆ ಸಾಕ್ಷಿ

ಯೋಗಿ ನುಡಿ ಹುಸಿ ಹೋಗದೆಂದಿಗು
ತ್ಯಾಗಿ ಶ್ರೀ ಶಿವಬಸವ ಗುರುವರ
ಸಾಗಿದರು ಸಾಧನೆಯಗೈಯ್ಯಲು ಶಿವಯೋಗ ಮಂದಿರಕೆ
ಬಾಗಿ ನಮಿಸಿದ ಬಾಲಕನ ಶಿರ
ತಾಗಿರಲು ಶಿವಯೋಗಿ ಚರಣವ
ಬಾಗಿ ಮೇಲೆತ್ತಿ ಶಿಷ್ಯನ ಗುರುಗಳಪ್ಪಿದರು

ಗುರು ಕುಮಾರರ ಸೇವೆಗೈಯುತ
ನಿರುತ ಅಷ್ಟಾವರಣ ಷಟ್‌ಸ್ಥಲ
ಅರಿತು ಆಚರಿಸಿ ಪಡೆದರು ಶಿವಯೋಗ ಸಿದ್ಧಿಯನು
ಬರಿದೆ ಸಿದ್ಧಿಯ ಸುಖದಲಿದ್ದರೆ
ತರವೆ? ಎಂದು ಗುರು ಕುಮಾರರು
ಕರೆದು ತಮ್ಮಯ ಕೊರಳ ರುದ್ರಾಕ್ಷಿಯನು ಹಾಕುತಲಿ

ದೇವ ಕೊಟ್ಟಿಹ ಕಾಯ ಜೀವರ
ಸೇವೆಗೈಯಲು ದೇವನೊಲಿವನು
ಭಾವಿಸಲು ಲಿಂಗದ ಮುಖವೆ ಜಂಗಮವು ಶರಣಂ
ಈವನಾವನೋ ಅವನೆ ದೇವನು
ಈವ ದೇವನು ಆಗಿ ನೀ ಜನ
ಸೇವೆ ಗೈಯುತ ಸಾಗು ಎಂದು ಗುರುಗಳರುಹಿದರು

ನಾಗನೂರಿನ ರುದ್ರಾಕ್ಷಿಮಠದ
ಆರನೆಯ ಗುರು ಬಯಲ ಬೆರೆಯಲು
ಊರ ದೈವವು ಸಾರಿ ಬಂದಿತು ಶಿವಬಸವ ಸನ್ನಿಧಿಗೆ
'ಹಿರಿಯಮಠ ಅಲ್ಲ ನಮ್ಮದು
ಕಿರಿದು ಅಲ್ಲವು ನಮ್ಮ ಭಕ್ತಿಯು
ಗುರುವೆ ನೀವುದ್ಧರಿಸಿ ನಮ್ಮನು, ಮಠವ ಕೈಕೊಂಡು'

'ಬೆಳಗು' ಆನಂದಾಶ್ರಮ ರಸ್ತೆ, ಪಂಚಾಕ್ಷರಿ ನಗರ ೫, ಎ ಕ್ರಾಸ್ ಗದಗ-೫೮೨೧೦೧, ಮೊ-೯೪೪೮೬೭೭೪೫೪

ಚಿಕ್ಕದಾದರೇನು ಈ ಮಠ
ಚೊಕ್ಕ ಮನಸಿನ ಭಕ್ತರಿರುವಿರಿ
ಚಿಕ್ಕದಾದರು ಚಿಕ್ಕದಲ್ಲವು ಚಿಕ್ಕೆಯಾ ಹೊಳಪು
ತಕ್ಕುದಹುದಿದೆ ನಿಮ್ಮ ಬಯಕೆಯು
ಅಕ್ಕರೆಯಲಿ ತಕ್ಕೈಸಿಕೊಳುವೆನು
ಮಿಕ್ಕ ಮಾತುಗಳೇಕೆ ಎನುತಲಿ ಪಟ್ಟವೇರಿದರು

ಹಗಲು ಎನ್ನದೆ ಇರುಳು ಎನ್ನದೆ
ಸೊಗಸು ಎನ್ನದೆ ಸೋಲು ಎನ್ನದೆ
ನಗರವೆನ್ನದೆ ಗ್ರಾಮವೆನ್ನದೆ ನಿತ್ಯ ಸಂಚರಿಸಿ
ನಗುತ ನಗುತಲೆ ಭಕ್ತಕೋಟಿಯ
ದುಗುಡ ದುಃಖವ ಹೋಗಲಾಡಿಸಿ
ಜಗದ ಜಂಜಡ ಬಿಡಿಸಿ ಬಸವನ ಮಾರ್ಗ ತೋರಿದರು

ಮಳೆಯು ಎನ್ನದೆ ಚಳಿಯು ಎನ್ನದೆ
ಸುಳಿಯುತಿದೆ ಬಿರುಗಾಳಿ ಎನ್ನದೆ
ಬಳಲಿದೆನು ಬಾಡಿದೆನು ಎನ್ನದೆ ಊರೂರು ತಿರುಗುತಲಿ
ಗಳಿಸಿಕೊಂಡರು ಭಕ್ತರೊಲುಮೆಯ
ಒಲಿಸಿಕೊಂಡರು ಅವರ ಮನಸನು
ಬಳಿಕ ನುಡಿದರು ಭಿಕ್ಷ ನೀಡಿರಿ ಭಕ್ತ ಬಂಧುಗಳೆ

ಗಳಿಸಬೇಕು ಕಾಯಕದಿ ಧನವನು
ಬಳಸಬೇಕು ಲೋಕ ಹಿತಕದ
ಸಲಿಸಬೇಕು ದಾಸೋಹ ಭಾವದಿ ನಮ್ಮ ತನು ಮನವ
ಕಲಿಯುತಿಹ ನೂರಾರು ಬಾಲರು
ಬಳಲುತಿಹರು ಹಸಿವೆಯಿಂದಲಿ
ಅಳಿಸಲೋಸುಗ ಅವರ ಹಸಿವೆಯ ನೀಡಿ ಭಿಕ್ಷವನು

ಬಂದ ಭಿಕ್ಷವನೆಲ್ಲ ಸೇರಿಸಿ
ತಂದುಚಿತ ಪ್ರಸಾದ ನಿಲಯವ
ನಂದು ನಡೆಸಿದ ಪುಣ್ಯ ಫಲವನಿಂದು ಉಣುತಿಹೆವು
ನೊಂದ ಮಕ್ಕಳು ನೋವು ಮರೆತರು
ಚೆಂದದಿಂದಧ್ಯಯನಗೈದರು
ಮುಂದೆ ಬಂದರು ಶಿವಬಸವ ತಂದೆಯನು ನೆನೆಯುತಲಿ

ಮೆಟ್ಟಿದರು ಎಡರುಗಳ ಗುರು
ಕಟ್ಟಿದರು ದಾಸೋಹನಿಲಯವ
ಕಟ್ಟಿದರು ಹಲ ಸಂಘ ಸಂಸ್ಥೆಯ, ಅರಿವಿನಾಲಯವ
ಮಟ್ಟ ಹಾಕುತ ಮರಾಠಿಯಬ್ಬರ
ತಟ್ಟಿದರು ಕನ್ನಡದ ಡಿಂಡಿಮ
ಅಟ್ಟಿದರು ಕೀಳರಿಮೆಯಾಚೆಗೆ ಗಟ್ಟಿ ಘೋಷದಲಿ

ಭಾರತದ ಸ್ವಾತಂತ್ರ್ಯ ವೀರರು
ಧೀರತನದಲಿ ಹೋರುತಿರಲು
ವೀರ ಶಿವಬಸವ ಗುರುವರ ಪೊರೆದರವರನ್ನು
ನೀರು ಅನ್ನವನಿತ್ತು ರಕ್ಷಿಸಿ ಕೈ
ಯಾರೆ ಅಡುಗೆಯ ಮಾಡಿ ಉಣ್ಣಿಸಿ
ಸಾರಿದರು ವಂದೇಮಾತರಂ ಮಂತ್ರ ಘೋಷವನು

ನಾಡ ಜನಗಳ ಹಿತವ ಕಾಯ್ದರು
ನಾಡು ನುಡಿಗಳನೆತ್ತರಕೆ ಒಯ್ದರು
ದೂಡಿದರು ದೂರಕಾಚೆಗೆ ಜನರ ಜಡತನವ
ಕೂಡಿಸುತ ಬಲ್ಲ ಜನಗಳ
ಹಾಡಿದರು ಜಯದ ಗೀತೆಯ ಕಾ
ಪಾಡಿದರು ಕನ್ನಡ ಸಾಹಿತ್ಯ ಸಂಸ್ಕೃತಿಯ

ಗುರುವಿನಾಣತಿ ಪಾಲಿಸುತ ಶಿವ
ಶರಣ ಮಾರ್ಗದಿ ನಡೆದ ಗುರುವರ
ನೂರು ಮೇಲೈದು ವರುಷ ಬದುಕಿ ಬಾಳಿದರು
ನರನ ವೇಷದ ಹರನು ಈ ಗುರು
ಶಿರವ ಬಾಗುವೆ ಪರಮ ಶ್ರೇಷ್ಠನೆ
ಕರುಣೆಯಿಂದಲಿ ಹರಸು ನಮ್ಮನು ಗುರುವೆ ಶಿವಬಸವ.

■■

# ಕರ್ಮತಪಸ್ವಿ

● ಶ್ರೀ ಬಿ. ಎಸ್. ಪಾಟೀಲ

**"ಬಿರುಗಾಳಿ ಬೀಸಿ ಮರ ಮುರಿವಂತೆ,**
**ಸುಳುಹ ಸುಳಿಯದೆ**
**ತಂಗಾಳಿ ಪರಿಮಳದೊಳಗೂಡಿ**
**ಸುಳಿವಂತೆ ಸುಳಿಯಬೇಕು,**
**ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು,**
**ನಿಂದರೆ ನೆಟ್ಟನೆ ಭಕ್ತನಾಗಿ ನಿಲ್ಲಬೇಕು**
**ಸುಳಿದು ಜಂಗಮವಾಗಲರಿಯದ**
**ನಿಂದು ಭಕ್ತನಾಗಲರಿಯದ**
**ಉಭಯ ಭ್ರಷ್ಟರನು ಏನೆಂಬೆ ಗುಹೇಶ್ವರ?"**

ಇಲ್ಲಿ ಜಂಗಮ ಎಂದರೆ ಚೇತನ. ಸಮಾಜವೆಂತಲೂ ಅರ್ಥಮಾಡಿಕೊಳ್ಳಬಹುದು. ಅದು ನಿರಂತರ ಚಟುವಟಿಕೆಯ ಆಗರ. ಚಲಿಸುವ ಜ್ಞಾನದೇವಾಲಯ. ಅಂತಹ ಜಂಗಮನ ಸಂಚಾರ ಬಿರುಗಾಳಿ ಬೀಸಿ ಮರಗಳು ಮುರಿಯುವಂತಿರಬಾರದು. ಆದರೆ ತಂಗಾಳಿ ಪರಿಮಳದೊಡನೆ ಕೂಡಿ ಮಧುರವಾಗಿ ಸುಳಿವಂತೆ ಸುಳಿಯಬೇಕು ಎಂದು ಅಲ್ಲಮ ಪ್ರಭುಗಳು ಹೇಳುತ್ತಾರೆ. ಈ ಮಾತು ಅಕ್ಷರಶಃ ಪೂಜ್ಯ ಶ್ರೀ ಶಿವಬಸವ ಸ್ವಾಮಿಗಳವರಿಗೆ ಅನ್ವಯವಾಗುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ. ಸಮಾಜ ಸೇವೆಯೇ ಅವರಿಗೆ ಶಿವಪೂಜೆ, ಅವರಿಗೆ ವೈರಾಗ್ಯ ಭಾವ ಜನ್ಮತಃ ಪ್ರಾಪ್ತವಾಯಿತು. ಅದು ಕೋಟಿ ಜನ್ಮಗಳ ಪುಣ್ಯವೆನ್ನಬೇಕು. ಇದರಿಂದಾಗಿ ಅವರ ನಡೆ ಶುದ್ಧ, ನುಡಿ ಶುದ್ಧ, ಕಾಯಕ ಸತ್ಯ ಶುದ್ಧ. ಸತ್ಯಶುದ್ಧ ಕಾಯಕದಲ್ಲಿಪ್ಪವರಿಗೆ ಲಕ್ಷ್ಮೀ ತಾನಾಗಿ ಬರುವಳು ಎಂಬುದು ಅವರ ವಿಷಯದಲ್ಲಿ ಸತ್ಯವಾಗಿದೆ.

೧೯೩೨ರಲ್ಲಿ ಮೊಟ್ಟ ಮೊದಲು ಕೋಟೆಯಲ್ಲಿ ೨೫ ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಪ್ರಸಾದ ನಿಲಯ ೫೦ ವಿದ್ಯಾರ್ಥಿಗಳೊಡನೆ ಸ್ಥಳ ಸಾಲದಾಗಿ ಶಹಾಪೂರದ ಬೋಳಮಲ್ಲರ ಮನೆ ಬಾಡಿಗೆ ಪಡೆವುದರ ಮೂಲಕ ಅಲ್ಲಿಗೆ ಸ್ಥಳಾಂತರಗೊಂಡಿತು. ಮುಂದೆ ೧೯೪೦ರ ಸುಮಾರಿಗೆ ಅದೂ ಸಾಲದಾಗಿ ಹೆಚ್ಚು ಪ್ರಶಸ್ತವಾದ ಮತ್ತೊಂದು ಕಟ್ಟಡದ ಅವಶ್ಯಕತೆಯನ್ನು ಸಾರತೊಡಗಿತು. ಶ್ರೀಗಳವರ ಸತ್ಕಾರ್ಯಕ್ಕೆ ಹುಬ್ಬಳ್ಳಿಯ ಮೂರು ಸಾವಿರ ಮಠದ ಪೂಜ್ಯ ಶ್ರೀ ಜಗದ್ಗುರು ಗುರುಸಿದ್ದೇಶ್ವರ ಮಹಾಸ್ವಾಮಿಗಳು ಉದಾರ ಹೃದಯದಿಂದ ಕೊಡುಗೆಗೆ ಮುಂದಾದರು. ಅದನ್ನು ಕಂಡು ಅನೇಕ ಮಹನೀಯರು ನೆರವು ನೀಡಲು ಮುಂದಾದರು. ಆಗ ಶಹಾಪೂರದಿಂದ ಮಾರುತಿಗಲ್ಲಿಯಲ್ಲಿರುವ ಭವ್ಯ ಕಟ್ಟಡಕ್ಕೆ ಈ ಪ್ರಸಾದ ನಿಲಯ ೧೯೪೩ರಲ್ಲಿ ಸ್ಥಳಾಂತರಗೊಂಡಿತು. ಮುಂದೆ ೨.೫ಲಕ್ಷ ರೂ. ಖರ್ಚು ಮಾಡಿ ವಿದ್ಯಾರ್ಥಿಗಳ ವಾಸಕ್ಕೆ ಎಲ್ಲ ರೀತಿಯಿಂದಲೂ ಅನುಕೂಲವಾಗಿರುವ ಭವ್ಯ ಹಾಗೂ ಪ್ರಶಸ್ತವಾಗಿರುವ ಹೊಸ ಕಟ್ಟಡವನ್ನು ನಿರ್ಮಿಸುವ ಏರ್ಪಾಡು ಮಾಡಲಾಯಿತು. ಇದರ ಅಡಿಗಲ್ಲು ಕಾರ್ಯ ನೆರವೇರಿಸಿದ ದಾನಶೂರ ಶ್ರೀ ಬಸರಿಗಿಡದ ವೀರಪ್ಪನವರು ೫.೫ ಸಾವಿರ ರೂ. ದಾನವಾಗಿ ನೀಡಿದರು. ೧೯೫೧ರಲ್ಲಿ ಆಗಿನ ಮೈಸೂರಿನ ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ ಉದ್ಘಾಟಿಸಿದರು. ಈ ಪ್ರಸಾದ ನಿಲಯದ ಕೀರ್ತಿ ಎಲ್ಲೆಡೆಯಲ್ಲಿ ಪಸರಿಸಿತು. ಇದೊಂದು ಮುಕ್ತ ಪ್ರಸಾದ ನಿಲಯ. ನೂರಾರು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಟ್ಟಿತು.

ಸ್ವಾತಂತ್ರ್ಯ ನಂತರ ಸರ್ಕಾರವು ತನ್ನ ಜಾತ್ಯತೀತ ಧೋರಣೆಗೆ ಅನುಗುಣವಾಗಿ ಹಿಂದುಳಿದವರನ್ನು ಪ್ರಸಾದ ನಿಲಯದಲ್ಲಿಟ್ಟುಕೊಂಡರೆ ಅಂಥವುಗಳಿಗೆ ಧನ ಸಹಾಯ ನೀಡುವ ಯೋಜನೆಯನ್ನು ಜಾರಿಗೆ ತಂದಿತು. ಈ ಆಶೆ ಆಮಿಷಗಳ ವಿಚಾರದ ಸುಳಿವು ಕೂಡ ಇಲ್ಲದ ಕಾಲದಲ್ಲಿ ಹರಿಜನ ಗಿರಿಜನರುಗಳಿಗೆ ಪ್ರವೇಶ ಕೊಟ್ಟ ನಾಗನೂರು ಶ್ರೀಗಳು ತಮ್ಮ ಜಾತ್ಯತೀತ ಧೋರಣೆಯನ್ನು ಎತ್ತಿ ತೋರಿಸಿದ್ದರು. ಕೆಲವು ಸಮಾಜದ ಮುಖಂಡರು ಸರಕಾರದ ಧನ ಸಹಾಯ ಯೋಜನೆಯ ಪ್ರಯೋಜನವನ್ನು ಪಡೆಯಲು ತಿಳಿಸಿದರು. ಅದಕ್ಕೆ ಶ್ರೀಗಳವರು ಕೊಟ್ಟ ಉತ್ತರ:

**"ಊರ ಮುಂದೆ ಹಾಲಿನ ಹಳ್ಳ ಹರಿಯುತ್ತಿರಲು**
**ಓರೆಯಾವಿನ ಬೆನ್ನಲ್ಲಿ ಹರಿಯಲೇಕಯ್ಯ?**
**ಲಜ್ಜೆಗೆಡಲೇಕೆ, ನಾಣುಗೆಡಲೇಕೆ, ಎಮಗೆ ಎಮ್ಮ**
**ಕೂಡಲಸಂಗಯ್ಯನುಳ್ಳನ್ನಕ್ಕ,**
**ಬಿಜ್ಜಳನ ಭಂಡಾರ ಎನಗೇಕಯ್ಯಾ"**

ಎಂದು ಇಂಥದೇ ಒಂದು ಸಂದರ್ಭದಲ್ಲಿ ಬಸವಣ್ಣನವರು ಕೊಟ್ಟ ಉತ್ತರವನ್ನು ನೆನಪಿಗೆ ತರುತ್ತದೆ.

ಹೀಗೆ ಮನೆಯಿಂದ ಮನೆಗೆ ಅಲೆದ ಪ್ರಸಾದ ನಿಲಯವು ಶ್ರೀ ಶಿವಬಸವ ಸ್ವಾಮಿಗಳ ಸತ್ಯಶುದ್ಧ ಕಾಯಕದಿಂದ ಉದಾರ ಅಂತಃಕರಣಿಗಳ ಹಾಗೂ ಹಿತಚಿಂತಕರ ಅಮೂಲ್ಯವಾದ ಕೊಡುಗೆ ಕಾಣಿಕೆಗಳಿಂದ ತನ್ನದೇ ಆದ ಭವ್ಯ ಸ್ವಂತ ಕಟ್ಟಡವನ್ನು ಹೊಂದಿ ಬೆಳಗಾವಿ ಕೊಲ್ಹಾಪೂರ ರಸ್ತೆಯ ಪೂರ್ವ ಬದಿಗೆ ಜವಾಹರಲಾಲ ಮೆಡಿಕಲ್ ಕಾಲೇಜಿನ ಎದುರಿಗೆ ಕಾಲಿಟ್ಟಿದೆ. ಈ ಎರಡಂತಸ್ತಿನ ಸುಂದರವಾದ ಕಟ್ಟಡದಲ್ಲಿ ೭೨ ಕೋಣೆಗಳಿವೆ. ೪ ವಿಶಾಲವಾದ ಸಭಾ ಗೃಹಗಳಿವೆ, ವಿಶಾಲವಾದ ಅಂಗಣವಿದೆ ಮತ್ತು ವಿಸ್ತಾರವಾದ ಬಯಲಿದೆ. ಇದಕ್ಕೆ ೧೯೬೩ರಲ್ಲಿ ಆಗಿನ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಉದ್ಘಾಟಿಸಿದರು. ಇದಕ್ಕೆ ೮–೧೦ ಲಕ್ಷ ರೂ. ವೆಚ್ಚ ಮಾಡಲಾಗಿದೆ.

ಪ್ರಸಾದ ನಿಲಯಗಳನ್ನು ನಡೆಸುವುದಾಗಲಿ, ಸಂಸ್ಕೃತ ಪಾಠಶಾಲೆಯನ್ನು ಆರಂಭಿಸುವುದಾಗಲಿ, ಅಖಿಲ ಭಾರತ ಶಿವಾನುಭವ ಸಮ್ಮೇಳನಗಳನ್ನು ಕರೆಯುವುದಾಗಲಿ, ಅಕ್ಕನ ಬಳಗ ಪ್ರಾರಂಭಿಸುವುದಾಗಲಿ, ವಿಜ್ಞಾನ ಕೇಂದ್ರಕ್ಕೆ ಹೊಳಹು ಹಾಕುವುದಾಗಲಿ ಇಂತಹ ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಾಗ ಆಯಾ ಕ್ಷೇತ್ರದಲ್ಲಿ ಆಸಕ್ತಿಯುಳ್ಳವರೊಡನೆ ಸಮಾಲೋಚನೆ ನಡೆಸಿ ಕಾರ್ಯರೂಪಕ್ಕೆ ತರುವಲ್ಲಿ ನಾಗನೂರು ಶ್ರೀಗಳು ಅತ್ಯಂತ ಉದಾರ ಮನೋಭಾವವನ್ನು ತೋರಿಸಿದ್ದಾರೆ.

ಕನ್ನಡ ನಾಡಿನ ಹಲವು ಸಂಸ್ಥಾನಿಕರು, ದೇಸಾಯಿಯರು, ಜಮೀನುದಾರರು, ಶ್ರೀಮಂತರು, ಸ್ತ್ರೀ–ಪುರುಷರೆನ್ನದೆ ತನು, ಮನ, ಧನಗಳನ್ನು ಅರ್ಪಿಸಿ ಶ್ರೀಗಳವರ ಸಮಾಜಹಿತ ಕಾರ್ಯಕ್ರಮಗಳನ್ನು ತುಂಬಾ ಮೆಚ್ಚಿಕೊಂಡಿದ್ದಾರೆ.

ಒಂದು ಸಣ್ಣ ಹಳ್ಳಿಯಲ್ಲಿ ಬಡ ಜಂಗಮ ಕುಟುಂಬದಲ್ಲಿ ಜನಿಸಿ ದೈವಾನುಗ್ರಹದಿಂದ ಬೆಳೆದು, ಅನೇಕ ರೀತಿಯಲ್ಲಿ ಸಮಾಜ ಸೇವೆಯನ್ನು ಮಾಡಿದ ಶ್ರೀಗಳ ವ್ಯಕ್ತಿತ್ವ ಆಕಾಶದೆತ್ತರದಷ್ಟು. ಆಡು ಮುಟ್ಟದ ಗಿಡವಿಲ್ಲ ಎನ್ನುವ ಹಾಗೆ ಅವರು ಕೈಹಾಕದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಸೇವೆ ಎನ್ನುವುದು ಇಲ್ಲ. ಈ ಲೋಕವೆಂಬ ವಿಶ್ವವಿದ್ಯಾಲಯದಿಂದ ಆಳವಾದ ಜ್ಞಾನಾನುಭವಗಳನ್ನು ಸಂಪಾದಿಸಿ, ಯುಗಪುರುಷ ಹಾನಗಲ್ ಶ್ರೀ ಕುಮಾರ ಸ್ವಾಮಿಗಳ ಆಶೀರ್ವಾದ ಅನುಗ್ರಹ ಪಡೆದು, ಶರಣರ ಜೀವನದ ಒಳ–ತಿರುಳನ್ನು ಗ್ರಹಿಸಿ, ತಪೋಜೀವನದ ಸಮಯದ ತೇಜಸ್ಸನ್ನು ಅಳವಡಿಸಿ, ನಿಷ್ಕಾಮ–ಕಾಯಕ ಯೋಗವನ್ನನುಸರಿಸಿ, ಎಲ್ಲವನ್ನು ಒಳಗೊಂಡು–ಎಲ್ಲದರಲ್ಲಿಯೂ ಒಳಗಾಗಿ ಎಲ್ಲವನ್ನೂ ಮೀರಿನಿಂತ ಅವರ ಮಹಾಜೀವನ ಪವಿತ್ರ–ಜೀವನ ಎಂದೇ ಹೇಳಬೇಕು. ಅವರು ತಮ್ಮ ಜೀವನಪರ್ಯಂತ ಲೋಕ ಕಲ್ಯಾಣಕ್ಕಾಗಿ ವಿಶೇಷತಃ ವಿದ್ಯಾರ್ಥಿಗಳ ಉತ್ಕರ್ಷಕ್ಕಾಗಿ ದೇಶದ ಉದ್ದಗಲಗಳಲ್ಲಿ ಸಂಚರಿಸಿದ್ದಾರೆ. ಲೆಕ್ಕವಿಲ್ಲದಷ್ಟು ಜನರ ಸಂಪರ್ಕ ಪಡೆದಿದ್ದಾರೆ. ಅವರು ಇಲ್ಲಿಯವರೆಗೆ ತಮ್ಮ ನಿರಂತರ ಪರಿಶ್ರಮದ ಮತ್ತು ತಪಸ್ಸಿನ ಪ್ರಭಾವದಿಂದ ಸಮಾಜಕ್ಕೆ ವಿವಿಧ ರೀತಿಯಲ್ಲಿ, ವಿವಿಧ ರೂಪದಲ್ಲಿ ಸಂಗ್ರಹಿಸಿ ಬಿಟ್ಟುಕೊಟ್ಟ ಆಸ್ತಿಯು ಕೋಟಿಗಟ್ಟಲೆ ಕಿಮ್ಮತ್ತಿನದಾಗಬಹುದು.

ಅವರ ಅಂತಃಕರುಣೆಯ ಸಂಪತ್ತು, ಅವರ ದಯೆ–ಧರ್ಮದ ಸಂಪತ್ತು, ೧೦೪ ವರ್ಷದ ವೃದ್ಧಾಪ್ಯದಲ್ಲಿಯೂ ಸಹಿತ ಒಪ್ಪಗೆಡದಂತಿದೆ. ಈ ದಿವ್ಯ ಸಂಪತ್ತಿನ ಬಲದಿಂದಲೂ ಅವರು ತಮ್ಮ ಇಡೀ ಜೀವಮಾನದಲ್ಲಿ ಬಿರುಗಾಳಿ ಬೀಸಿದಂತೆ ಎಂದೂ ಬೀಸಲಿಲ್ಲ. ಬದಲಾಗಿ ಪರಿಮಳದಿಂದೊಡಗೂಡಿದ ತಂಗಾಳಿಯಂತೆ ಸುಳಿದಿದ್ದಾರೆ. ಅಂತೆಯೇ ಅವರು ಈವರೆಗೂ ಮಾಡಿದ ತಪಸ್ಸು ಧರ್ಮ–ತಪಸ್ಸಾಗಿದೆ. ಹಾಗೆಯೇ ಅವರು ಕರ್ಮ–ತಪಸ್ವಿಗಳು.

■■

---

## ಪೂಜ್ಯಶ್ರೀ ಡಾ. ಶಿವಬಸವ ಮಹಾಸ್ವಾಮಿಗಳು

ಇಂದಿನ ನಮ್ಮ ಜಗತ್ತಿಗೆ ವೈರಾಗ್ಯ ನಿಧಿಯಾಗಿ, ಕಾಯಕಯೋಗಿಯಾಗಿ ಶ್ರೀ ಮ. ನಿ. ಪ್ರ. ಶಿವಬಸವ ಮಹಾಸ್ವಾಮಿಗಳು ನಮ್ಮ ನಾಡನ್ನು ಪುಣೀತಗೊಳಿಸಿದ್ದಾರೆ. ಅವರು ಶಿಕ್ಷಣ ಕ್ಷೇತ್ರಕ್ಕೆ ಕನ್ನಡ ನಾಡಿನ ಸಾಹಿತ್ಯಕ್ಕೆ ಮತ್ತು ಲಿಂಗಾಯತ ಸಂಸ್ಕೃತಿಗೆ ಅಪಾರವಾದ ರೀತಿಯಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಶ್ರೀಗಳು ಸಮಾಜ, ಸಾಹಿತ್ಯ, ಸಂಸ್ಕೃತಿಗಳ ತ್ರಿವೇಣಿ ಸಂಗಮವಾಗಿ ನಾಡನ್ನು ಹರಸಿದ್ದಾರೆ.

**ಶ್ರೀಮತಿ ಲೀಲಾದೇವಿ ಆರ್. ಪ್ರಸಾದ**

# ಮಧುರ ನೆನಪಿನ ಬಾನಂಗಳದಿಂದ

● ವೀ. ಗ. ಶೀಲವಂತರ

೧೯೭೩ನೇ ವರ್ಷದಲ್ಲಿ ಕರ್ನಾಟಕ ರಾಜ್ಯ ಸರಕಾರದವರು, ಭಾರತೀಯ ಸ್ಟೇಟ ಬ್ಯಾಂಕಿನ ಕೃಷಿ ಅಭಿವೃದ್ಧಿ ಶಾಖೆಗೆ, ನನ್ನನ್ನು ಎರವಲು ಸೇವೆಯ ಮೇರೆಗೆ ತಾಂತ್ರಿಕ ಅಧಿಕಾರಿ ಎಂದು ಬೆಳಗಾವಿಗೆ ವರ್ಗ ಮಾಡಿದರು. ಸ್ಟೇಟ್ ಬ್ಯಾಂಕಿನಲ್ಲಿ ಕೆಲಸ ಮಾಡುವ ಇಚ್ಛೆ ನನಗಿದ್ದರೂ ಬೆಳಗಾವಿಯಲ್ಲಿ ಕೆಲಸ ಮಾಡುವ ಇಚ್ಛೆ ನನಗಿರಲಿಲ್ಲ. ಏಕೆಂದರೆ ಬೆಳಗಾವಿ ನನ್ನ ಕುಟುಂಬದ ಊರು. ಬೀಗರಿಂದ ದೂರ ಇರಬೇಕೆಂಬ ಮನಸ್ಸು ನನಗೆ. ಆದರೆ ಸರಕಾರಿ ಕೆಲಸದಲ್ಲಿ ಇಂಥದಕ್ಕೆಲ್ಲ ಆಸ್ಪದವಿಲ್ಲ. ಹೀಗಾಗಿ ನಿರ್ವಾಹವಿಲ್ಲದೇ, ಬೆಳಗಾವಿಗೆ ಬಂದು ಕೆಲಸಕ್ಕೆ ಹಾಜರಾದೆ.

ಆರೇಳು ತಿಂಗಳುಗಳು ಗತಿಸಿದವು. ಮನಸ್ಸಿನಲ್ಲಿ ಆಗಾಗ ಸಾಧು ಸತ್ಪುರುಷರ ದರುಶನ ಪಡೆಯಬೇಕೆಂಬ ಬಯಕೆ ಆಗುತ್ತಿತ್ತು. ಬೆಳಗಾವಿಗೆ ಬಂದ ನಂತರ ಅಂಥ ಅವಕಾಶ ನನಗೆ ಒದಗಿರಲಿಲ್ಲ. ಅಂದು ಬೆಳಗಾವಿಯ ಅಕ್ಕನ ಮಂದಿರದಲ್ಲಿ ಪುರಾಣ ಕೇಳಿ ಬಂದ ನನ್ನ ತಾಯಿಯ ಮುಂದೆ ಸಾಧು ಸತ್ಪುರುಷರ ದರುಶನ ಪಡೆಯಬೇಕೆಂಬ ನನ್ನ ಬಯಕೆಯನ್ನು ತಿಳಿಸಿದೆ. ನನ್ನ ಬಯಕೆಯನ್ನು ತಿಳಿದ ನನ್ನ ತಾಯಿ ರಾಮದೇವಗಲ್ಲಿಯಲ್ಲಿ ಪೂಜ್ಯತೆಯ ಪ್ರತೀಕದಂತಿರುವ ಶಿವಬಸವ ಸ್ವಾಮಿಗಳ ದರುಶನ ಪಡೆಯಲು ಸೂಚಿಸಿದರು.

ತಾಯಿಯ ಸೂಚನೆಯಂತೆ ಮರುದಿನವೇ ರಾಮದೇವಗಲ್ಲಿಗೆ ಹೋಗಿ ಶಿವಬಸವಸ್ವಾಮಿಗಳ ದರುಶನ ಪಡೆದೆ. ಆಗ ಮಳೆಗಾಲ. ಬೆಳಗಾವಿಯಲ್ಲಿ ಬಿಟ್ಟೂ ಬಿಡದಂತೆ ಮಳೆ ಸುರಿಯುತ್ತಿತ್ತು ಹಾಗು ಸಾಯಂಕಾಲದ ಹೊತ್ತಿಗೆ ವಿಪರೀತ ಚಳಿಯಾಗುತ್ತಿತ್ತು. ಚಳಿಯ ನಿವಾರಣೆಗಾಗಿ ಮಠದಲ್ಲಿ ಅಗ್ನಿ ಕುಂಡವನ್ನು ಹೊತ್ತಿಸುತ್ತಿದ್ದರು.

ಸ್ವಾಮಿಗಳ ಮುಂದೆ ಇರುವ ಅಗ್ನಿ ಕುಂಡದಲ್ಲಿ ಗಂಧದ ಧೂಪವನ್ನು ಉರಿಸುತ್ತಿದ್ದರು. ಅಲ್ಲಿಯ ಗಂಧದ ಧೂಪ, ಮಂತ್ರಮಯ ವಾತಾವರಣದಲ್ಲಿಯ ಪ್ರಸನ್ನ ಪರಿಸರದಲ್ಲಿ ಯೌಗಿಕ ಶಕ್ತಿಯಿಂದ ಕಂಗೊಳಿಸುತ್ತಿದ್ದ ಶಿವಬಸವ ಸ್ವಾಮಿಗಳನ್ನು ಕಂಡ ಮನಸ್ಸು ಪ್ರಸನ್ನವಾಗಿ ಊರ್ಧ್ವಗಾಮಿಯಾಗುತ್ತಿತ್ತು. ಮೊದಲನೆಯ ಭೇಟಿಯಲ್ಲಿಯೇ ಅವರ ದಿವ್ಯ ವ್ಯಕ್ತಿತ್ವ ನನ್ನ ಮೇಲೆ ಅಚ್ಚಳಿಯದ ಪರಿಣಾಮ ಮೂಡಿಸಿತು.

ಮುಂದೆ ಸ್ವಾಮಿಗಳು, ಶಿವಬಸವನಗರದ ಹೊಸಮಠದ ವಾಸ್ತವ್ಯಕ್ಕೆ ದಯಮಾಡಿಸಿದಾಗಲೂ ಇದೇ ಪ್ರಸನ್ನ ಪರಿಸರದ ವಾತಾವರಣವು ಮುಂದುವರಿಯಿತು. ಸ್ವಾಮಿಗಳ ದಿವ್ಯ ತೇಜಸ್ಸಿನ ಯೌಗಿಕ ಶಕ್ತಿಯ ಆಕರ್ಷಣೆಗೆ ಒಳಗಾದ ನಾನು ದಿನಾಲು ಅವರಲ್ಲಿಗೆ ತೆರಳಿ ದರುಶನ ಪಡೆಯಲಾರಂಭಿಸಿದೆ. ಅವರ ದರುಶನದಿಂದ ಮನಸ್ಸಿನ ದುಗುಡ-ದುಮ್ಮಾನಗಳು ದೂರವಾಗಿ ಮನಸ್ಸು ಶಾಂತವಾಗುತ್ತಿತ್ತು. ಅವರ ಸಾನ್ನಿಧ್ಯದಿಂದ, ಒಂದು ತೆರನಾದ ವಿವರಿಸಲ ಸಾಧ್ಯವಾದ ವಿಲಕ್ಷಣ ಸುಖ ದೊರೆಯುತ್ತಿತ್ತು.

ಶ್ರಾವಣ ಮಾಸದ ಒಂದು ದಿನ ಸ್ವಾಮಿಗಳನ್ನು ಕಂಡು, ನಮ್ಮ ಮನೆಗೆ ಪಾದೋದಕ ಪ್ರಸಾದಕ್ಕೆ ಬರಬೇಕೆಂದು ವಿನಂತಿಸಿದೆ. ನನ್ನ ವಿನಂತಿಯನ್ನು ಮನ್ನಿಸಿದ ಸ್ವಾಮಿಗಳು, ನಮ್ಮ ಮನೆಗೆ ಬಂದು ಪಾದೋದಕ ಕೊಟ್ಟು ನಮ್ಮ ಆತ್ಮೀಯ ಆದರಾತಿಥ್ಯ ಭಕ್ತಿ ಹಾಗೂ ಪ್ರಸಾದವನ್ನು ಸ್ವೀಕರಿಸಿ ನಮ್ಮನ್ನು ಪುನೀತರನ್ನಾಗಿಸಿದರು.

೧೯೭೪ರ ಜನೆವರಿ ತಿಂಗಳಿನ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಒಂದು ಲೇಖನ ಮೂಡಿ ಬಂದಿತು. ಆ ಲೇಖನದಲ್ಲಿ ಸಂಕ್ರಾಂತಿಯ ಹಬ್ಬದ ಬಗ್ಗೆ ವಿವರಿಸಿ, ಸಿದ್ಧಗಂಗಾ ಮಠಾಧೀಶರಾದ ಶಿವಕುಮಾರ ಸ್ವಾಮಿಗಳು ತಮ್ಮ ಶಿಷ್ಯಂದಿರ ಮಸ್ತಕದ ಮೇಲೆ ಪಾದವಿಟ್ಟು ಮಂಗಲ ಸ್ನಾನ ಮಾಡಿಸುತ್ತಿರುವ ಫೋಟೋಗಳನ್ನು ಈ ಲೇಖನದಲ್ಲಿ ಮುದ್ರಿಸಿದ್ದರು. ಈ ಪೋಟೋಗಳನ್ನು ನೋಡಿದ ನನ್ನ ಮನದಲ್ಲಿ ಮಿಂಚಿನ

'ಶ್ರೀ ಶಿವಬಸವ ಕೃಪಾ' ಪ್ಲಾಟ ನಂ. ೨೨೬೩, ಮಹಾಂತೇಶನಗರ, ಬೆಳಗಾವಿ-೫೯೦೦೧೭

ಸಂಚಾರವಾದಂತಾಯಿತು. ಜನೇವರಿ ೧೪ ರಂದು ಬರುವ ಸಂಕ್ರಾಂತಿಯ ದಿವಸ ಶಿವಯೋಗಿಗಳಾದ ಶಿವಬಸವ ಸ್ವಾಮಿಗಳ ಪಾದವನ್ನು ಮಸ್ತಕದ ಮೇಲೆ ಇರಿಸಿಕೊಂಡು ಮಂಗಲಸ್ನಾನ ಮಾಡಿಸಿಕೊಳ್ಳಬೇಕೆಂಬ ಬಯಕೆ ಮೂಡಿತು. ಕುಂತರೂ ನಿಂತರೂ ಬಿಡದೇ ಈ ಬಯಕೆ ನನ್ನಲ್ಲಿ ಬೆಳೆದು ಹೆಮ್ಮರವಾಯಿತು. ಶಿವಬಸವ ಸ್ವಾಮಿಗಳನ್ನು ಕಂಡು ಭಕ್ತಿಯಿಂದ ನಮಸ್ಕರಿಸಿ, ನನ್ನ ಬಯಕೆಯನ್ನು ನಿವೇದಿಸಿಕೊಂಡೆ.

ಅದಾವ ಜನ್ಮದ ಪುಣ್ಯದ ಫಲವೋ ಎಂಬಂತೆ ನನ್ನ ನಿವೇದನೆಗೆ ಸ್ವಾಮಿಗಳು ಒಪ್ಪಿದರು. ೧೯೭೫ ರ ಜನೇವರಿ ೧೪ ರಂದು ನನ್ನ ಮನೆಗೆ ಬಂದು, ನನ್ನ ಮಸ್ತಕದ ಮೇಲೆ ತಮ್ಮ ಪಾದವಿಟ್ಟು ನನಗೆ ಮಂಗಲ ಸ್ನಾನ ಮಾಡಿಸಿದರು. ಅವರ ಪರುಷ ಪಾದ ನನ್ನ ಮಸ್ತಕದ ಮೇಲಿರುವಾಗ ನನಗೆ ದಿವ್ಯಾನುಭವವಾಯಿತು. ಅಂಗ ಗುಣಗಳಾದ ಕಾಮ, ಕ್ರೋಧ, ಮೋಹ, ಮದ, ಮತ್ಸರ ಹಾಗು ಲೋಭಗಳಿಂದ ಬಿಗಿಯಾಗಿ ಬಿಗಿಯಲ್ಪಟ್ಟ ನಾನು, ಇವುಗಳ ಬಿಗಿಯನ್ನು ಸಡಿಲುಗೊಳಿಸಿಕೊಳ್ಳಲು ಅಂದಿನಿಂದ ಪ್ರಯತ್ನಿಸತೊಡಗಿದೆ. ಶಿವಬಸವ ಸ್ವಾಮಿಗಳ ದಯೆಯಿಂದ ಅಂಗಗುಣಗಳ ಪ್ರಭಾವ ನನ್ನ ಮೇಲೆ ಕಡಿಮೆಯಾಗತೊಡಗಿತು. ಪಾವಿತ್ರ್ಯತೆ ನೋಟದಲ್ಲಿ, ನುಡಿಯಲ್ಲಿ, ನಡೆಯಲ್ಲಿ ಮೂಡತೊಡಗಿತು.

ಶಿವಬಸವ ಸ್ವಾಮಿಗಳು ಹೊಸಬರನ್ನು ಕೂಡಲೇ ನಂಬುತ್ತಿರಲಿಲ್ಲ. ಅವರ ಪೂರ್ವಾಪರಗಳನ್ನು ವಿಚಾರಿಸಿ, ತೂಗಿ ನೋಡಿ, ಒಡನಾಟಕ್ಕೆ ಯೋಗ್ಯವಾಗಿದ್ದಲ್ಲಿ ಮಾತ್ರ ಅಂಥವರನ್ನು ತಮ್ಮ ಬಳಿಗೆ ಸೇರಿಸಿಕೊಳ್ಳುತ್ತಿದ್ದರು. ಹಾಗೆಯೇ ನನ್ನ ಬಗ್ಗೆಯೂ ವಿಚಾರಿಸಿ, ಪರೀಕ್ಷಿಸಿ ತಮ್ಮ ಬಳಿಗೆ ಸೇರಿಸಿಕೊಂಡರು. ಬರಬರುತ್ತ ನನ್ನನ್ನು ತುಂಬ ವಿಶ್ವಾಸದಿಂದ ಆತ್ಮೀಯವಾಗಿ ಕಾಣಲಾರಂಭಿಸಿದರು. ಸ್ವಾಮಿಗಳು ನನ್ನ ಮೇಲಿಟ್ಟ ಈ ಆತ್ಮೀಯ ವಿಶ್ವಾಸವನ್ನು ನಾನು ಸದಾಕಾಲ ಕಾಯಾ ವಾಚಾ ಮನಸಾ, ಉಳಿಸಿ ಬೆಳಸಿಕೊಂಡ ಬಗ್ಗೆ ಹೆಮ್ಮೆ ಎನಿಸುತ್ತದೆ.

ಶಿವಬಸವ ಸ್ವಾಮಿಗಳು ಸದ್ಗುಣ ಸಂಪನ್ನರು, ತಪೋನಿಷ್ಠರು, ಲಿಂಗಾಂಗ ಸಾಮರಸ್ಯ ಪಡೆದ ಶಿವಯೋಗಿಗಳು. ಶಾಪಾನುಗ್ರಹ ಸಾಮರ್ಥ್ಯವುಳ್ಳವರು, ಕರುಣಾಳುಗಳು, ಸಮಾಜ ಸುಧಾರಕರು ಹಾಗು ಶಿಕ್ಷಣ ಪ್ರೇಮಿಗಳಾಗಿದ್ದರು. ಅವರಲ್ಲಿರುವ ಸರಳತೆ, ಶಾಂತತೆ, ಸೌಜನ್ಯ, ಸತ್ಯಚಾರಿತ್ರ್ಯ, ಸಹನೆ, ಸಂಯಮ, ಆತ್ಮಶಕ್ತಿ, ಆತ್ಮಶ್ರದ್ಧೆ, ದಯೆ, ದೇಶಭಕ್ತಿ, ಗುರುಭಕ್ತಿ, ದೈವಭಕ್ತಿಯುಳ್ಳ, ತಪೋಮಯ ಜೀವನವನ್ನು ಕಂಡ ಬೆಳಗಾವಿ ಜಿಲ್ಲೆಯ ಭಕ್ತರು, ಅವರನ್ನು ತುಂಬು ಗೌರವದಿಂದ ಆದರಿಸುತ್ತಿದ್ದಾರೆ. ಜಿಲ್ಲೆಯ ಲಿಂಗಾಯತರಲ್ಲದೆ ಅವರಿಗೆ ಕ್ರೈಸ್ತ, ಮುಸಲ್ಮಾನ, ಬ್ರಾಹ್ಮಣ, ಮರಾಠಾ ಮುಂತಾದ ಧರ್ಮದ ಲಕ್ಷಾಂತರ ಭಕ್ತರಿರುವರು. ಎಲ್ಲ ಧರ್ಮಗಳಲ್ಲಿ ಹಾಗು ಅವುಗಳನ್ನು ಅನುಸರಿಸುವ ಜನರಲ್ಲಿ ಅವರು ಪರಮಾತ್ಮನನ್ನು ಕಂಡ ಮಹಾನ್ ದಾರ್ಶನಿಕರು. ಅವರು ತಮ್ಮ ಧೀರೋದಾತ್ತ ಜೀವನ ಕ್ರಮದಿಂದ ಸಮಾಜಕ್ಕೆ ಆದರ್ಶಪ್ರಾಯರಾದ ಯುಗಪುರುಷರು. ೨೦ನೆಯ ಶತಮಾನ ಕಂಡ ಅಪರೂಪದ ತಪಸ್ವಿಗಳು. ಇದು ನಾನು ಶಿವಬಸವಸ್ವಾಮಿಗಳನ್ನು ಗುರುವಾಗಿ ಸ್ವೀಕರಿಸುವುದಕ್ಕಿಂತ ಮೊದಲು ಅವರ ಬಗ್ಗೆ ತಿಳಿದುಕೊಂಡ ವಿವರ. ಇಂಥ ಮಹಾತ್ಮರನ್ನು ಗುರುಗಳನ್ನಾಗಿ ಪಡೆದು ಅವರಿಂದ ದೀಕ್ಷೆ ಸ್ವೀಕರಿಸಬೇಕೆಂದು ನಾನು ವಿಚಾರ ಮಾಡಿದೆ.

೧೯೭೬ರಲ್ಲಿ ಶ್ರಾವಣಮಾಸದಲ್ಲಿ ಶಿವಬಸವಸ್ವಾಮಿಗಳಿಂದ ದೀಕ್ಷೆ ಪಡೆಯಬೇಕೆಂಬ ಮಹತ್ತರವಾದ ಬಯಕೆ ನನ್ನನ್ನು ಮುತ್ತಿತು. ನನ್ನ ಈ ಬಯಕೆಯನ್ನು ಅವರಿಗೆ ವಿನಯದಿಂದ ವಿವರಿಸಿದೆ. ನನ್ನ ವಿನಂತಿಯನ್ನು ಆಲಿಸಿದ ಸ್ವಾಮಿಗಳು 'ಶೀಲವಂತರ, ನೀವು ಆಗಾಗ ಪ್ರವಾಸಕ್ಕೆ ಹೋಗಬೇಕಾದವರು, ನಿಮಗೆ ಕ್ರಿಯಾದೀಕ್ಷೆ ಬೇಡ, ಮಂತ್ರದೀಕ್ಷೆ ಕೊಡುತ್ತೇನೆಂದು' ತಿಳಿಸಿದರು.

ನನ್ನ ಜನ್ಮಜನ್ಮಾಂತರದ ಪುಣ್ಯದ ಫಲವೇ ಗುರುವಾಗಿ ಶಿವಬಸವಸ್ವಾಮಿಗಳ ರೂಪದಲ್ಲಿ ಮನೆಗೆ ಬಂದಿತು. ನನ್ನ ಲಿಂಗಯ್ಯನನ್ನು ತಮ್ಮ ಕೈಯಲ್ಲಿ ಪಡೆದು, ಬಹಳಷ್ಟು ಶಿವಚೈತನ್ಯವನ್ನು ಲಿಂಗಯ್ಯನಲ್ಲಿ ಕ್ರೋಢೀಕರಿಸಿ ನನ್ನ ಹಸ್ತದಲ್ಲಿ ಇರಿಸಿದರು. ತಮ್ಮ ಪರುಷ ಹಸ್ತವನ್ನು ನನ್ನ ಮಸ್ತಕಕ್ಕೆ ಮುಟ್ಟಿಸಿ ಪ್ರಣವ ಪಂಚಾಕ್ಷರಿ ಮಂತ್ರೋಪದೇಶ ಮಾಡಿ ನನಗೆ ಮಂತ್ರ ದೀಕ್ಷೆ ಮಾಡಿದರು. ಅಂದಿನಿಂದ ನನ್ನ ಆಧ್ಯಾತ್ಮಿಕ ಸಾಧನೆಗೆ ಹೊಸ ಆಯಾಮ ದೊರೆಯಿತು. ಶಿವಬಸವಸ್ವಾಮಿಗಳು ಗುರುವಾಗಿ, ತಂದೆ, ತಾಯಿ, ಬಂಧು, ಬಳಗ ಹಾಗು ದೈವವಾಗಿ ನನ್ನನ್ನು ಅಧ್ಯಾತ್ಮ ಜೀವನದಲ್ಲಿ ಮುನ್ನಡೆಸಿದರು. ಅಧ್ಯಾತ್ಮ ಜೀವನದಲ್ಲಿ ಮುನ್ನಡೆಯಲಿಚ್ಛಿಸುವವನಿಗೆ ಗುರು ಅಗತ್ಯಬೇಕು. ಗುರುವನ್ನು ಪಡೆದವನು ಗುರುವಿನ ಸೇವೆ ಮಾಡಿ ಅವನ ಒಲುಮೆ ಕರುಣೆ ಪಡೆಯುವುದು ಅಷ್ಟೇ ಅವಶ್ಯವಾಗಿದೆ.

ಶಿವಬಸವ ಸ್ವಾಮಿಗಳ ಸಾಮೀಪ್ಯ ಪಡೆದ ನಾನು ಅವರ ಸೇವೆ ಮಾಡುವ ಭಾಗ್ಯವನ್ನು ಬಯಸತೊಡಗಿದೆ.

ಇದಕ್ಕೆ ಪೂರಕವಾಗಿ ಅವರ ವೈಯಕ್ತಿಕ ಸಣ್ಣ ಪುಟ್ಟ ಕೆಲಸಗಳ ಸೇವೆ ನನಗೆ ದೊರೆಯತೊಡಗಿತು. ಹೀಗೆಯೇ ಮೂರು–ನಾಲ್ಕು ವರುಷಗಳು ಗತಿಸಿದ ನಂತರ ಸ್ವಾಮಿಗಳು ತಮ್ಮ ಆತ್ಮೀಯರಲ್ಲಿ ಒಬ್ಬನನ್ನಾಗಿ ನನ್ನನ್ನು ಸ್ವೀಕರಿಸಿದರು.

ಸಾಯಂಕಾಲ ನನ್ನ ಕಾರ್ಯಾಲಯದ ಕೆಲಸ ಮುಗಿದ ನಂತರ ಸುಮಾರು ಆರು ಗಂಟೆಗೆ ಶಿವಬಸವನಗರದ ಮಠಕ್ಕೆ ಬಂದು, ಶಿವಬಸವಸ್ವಾಮಿಗಳಿಗೆ ಭಕ್ತಿಯಿಂದ ಶಿರಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದೆ. ನನ್ನ ನಮಸ್ಕಾರಗಳನ್ನು ಸ್ವೀಕರಿಸಿದ ದ್ಯೋತಕವಾಗಿ ಅವರ ಮುಖದಿಂದ ಶಿವಾ ಎಂಬ ಶಿವನ ನೆನಹು ಹೊರಹೊಮ್ಮುತ್ತಿತ್ತು. ನಂತರ ಅವರನ್ನು ಅವರದೇ ಆದ ಮಾಧ್ಯಮಿಕ ಶಾಲೆಯ ಮೈದಾನಿನಲ್ಲಿ ಕೈಹಿಡಿದುಕೊಂಡು ತಿರುಗಾಡಿಕೊಂಡು, ಮಠದ ಹೊರಾಂಗಣಕ್ಕೆ ಬರುತ್ತಿದ್ದೆವು. ಆಗ ಸ್ವಾಮಿಗಳು ಖುರ್ಚಿಯ ಮೇಲೆ ಕೂಡ್ರುತ್ತಿದ್ದರು. ಅವರ ಪಾದದ ಸಮೀಪ ನಾನು ಕುಳಿತುಕೊಂಡ ನಂತರ ಅವರ ಸೇವೆಯ ಭಾಗ್ಯ ನನಗೆ ದೊರೆಯುತ್ತಿತ್ತು. ಅವರ ಪಾದಗಳನ್ನು ಒಂದೊಂದಾಗಿ ನನ್ನ ತೊಡೆಯ ಮೇಲೆ ಇಟ್ಟುಕೊಂಡು ಭಕ್ತಿಭಾವದಿಂದ ಒತ್ತುವ ಸೇವೆ ನನ್ನದಾಗಿತ್ತು. ಹೀಗೆ ನಾನು ಅವರ ಸೇವೆಯಲ್ಲಿ ಇರುವಾಗ, ನನಗೆ ಅವರು ವಿವರಿಸಿದ ಅನುಭವಗಳು, ಹಿಂದಿನ ಶರಣರ ವಚನಗಳು ನನ್ನ ಆಧ್ಯಾತ್ಮಿಕ ಜೀವನದ ಉನ್ನತಿಗೆ ದಾರಿ ದೀಪಗಳಾಗಿವೆ.

■■

## ನಾಗನೂರ ಶಿವಬಸವೇಶ

**(ಹಂಬಲ)**

ನಿನ್ನಯ ಸ್ಮಾರಕ ಯಾತ್ರೆಯ ಗೆಯ್ಯಲು
ಕಾಲುಗಳೋಡುವವು !
ನಿನ್ನಯ ಸುಂದರ ಮೂರ್ತಿಯ ಕಾಣಲು
ಕಣ್ಣು ಹವಣಿಸುವವು ! ॥೧॥

ನಿನ್ನಯ ನಗುಮುಖ ಚಿತ್ರವ ಬರೆಯಲು
ಕೈ ಹಾತೊರೆಯುವವು !
ನಿನ್ನಯ ಜೀವನ ಕಥೆಯನು ಕೇಳಲು
ಕಿವಿಗಳು ನಿಮಿರುವವು !! ॥೨॥

ನಿನ್ನಯ ಅಮೃತವಾಣಿಯನರಿಯಲು
ಯೋಚನೆ ಬಲಿಯುವುದು !
ನಿನ್ನಯ ಸತ್ಯದ ಶೋಧನೆ ಸಾರಲು
ನಾಲಗೆ ನಲಿಯುವುದು !! ॥೩॥

ನಿನ್ನಯ ದರ್ಶನ ಸ್ಪರ್ಶನ ಮಾತ್ರಕೆ
ಮೈ ನವಿರೇಳುವುದು !
ನಿನ್ನಯ ಸಾಧನೆ ನೆನಪಿಸಿಕೊಳ್ಳಲು
ಬಗೆ ನೆಗೆದೇಳುವುದು !! ॥೪॥

ನಿನ್ನಯ ಆತ್ಮಕೆ ಶಾಂತಿಯ ಕೋರಲು
ನನ್ನೆದೆ ಕುಣಿಯುವುದು !
ನಿನ್ನಯ ಆತ್ಮವು ನಿನ್ನೊಡಗೂಡಲು
ತಾನೂ ತಣಿಯುವುದು !! ॥೫॥

**ಶ್ರೀ ಹೊಂಡಪ್ಪ ತಲ್ಲೂರ**
ನಾಗನೂರು

# ಇತಿಹಾಸ ಸೃಷ್ಟಿಸಿದ ಮಹಾ ಉತ್ಸವ

● ಡಾ. ರಾಮಕೃಷ್ಣ ಮರಾಠೆ

- ಪರಮಪೂಜ್ಯ ಡಾ. ಶಿವಬಸವ ಮಹಾಸ್ವಾಮಿಗಳವರ ಪುಣ್ಯಸ್ಮರಣೆ
- ಬಸವ ಪುರಾಣ
- ಪೂಜ್ಯಶ್ರೀ ಡಾ. ಸಾವಳಗೀಶ್ವರ ದೇವರ ನಿರಂಜನ ಪಟ್ಟಾಧಿಕಾರ

ಬಹಳಷ್ಟು ಸಲ ಅದ್ವಿತೀಯ, ಅವಿಸ್ಮರಣೀಯ, ಅಭೂತಪೂರ್ವ ಎನ್ನುವ ಪದಗಳನ್ನು ಬರಿ ಮಾತಿನ ಚಪಲಕ್ಕೆ ಬಳಸುತ್ತೇವೆ. ಆದರೆ ಅಪರೂಪಕ್ಕೆ ಅಂಥ ಪದಗಳಿಗೆ ಅರ್ಥ ತುಂಬುವಂಥ ಅನ್ವರ್ಥಕ ಘಟನೆಗಳು ಜರಗುತ್ತವೆ. ಇತ್ತೀಚೆಗೆ ಅಂಥ ಘಟನೆ 'ಮೆಗಾಸಮಾರಂಭ'ವು ನಾಗನೂರಿನ ರುದ್ರಾಕ್ಷಿಮಠದಲ್ಲಿ ಜರುಗಿತು. ಕಾಯಕಯೋಗಿ, ತ್ರಿವಿಧ ದಾಸೋಹಿ ಎಂದೇ ಜನಮಾನಸದಲ್ಲಿ ನಿಂತ ಪರಮಪೂಜ್ಯ ಡಾ. ಶಿವಬಸವ ಮಹಾಸ್ವಾಮಿಗಳ ೨೫ನೆಯ ಪುಣ್ಯಸ್ಮರಣೆ ಅದರ ಅಂಗವಾಗಿ ಬಸವಪುರಾಣ ಮತ್ತು ಪೂಜ್ಯಶ್ರೀ ಸಾವಳಗೀಶ್ವರ ದೇವರ ನಿರಂಜನ ಪಟ್ಟಾಧಿಕಾರ ಕಾರ್ಯಕ್ರಮಗಳು ೨೦೧೯ ಅಕ್ಟೋಬರ್ ೧೦ ರಿಂದ ನವೆಂಬರ್ ೧೧ ರವರೆಗೆ ಅಖಂಡ ಒಂದು ತಿಂಗಳ ಕಾಲ ಬೈಲಹೊಂಗಲ ತಾಲೂಕಿನ ನಾಗನೂರಿನಲ್ಲಿ ಸಂಭ್ರಮ, ಸಡಗರದಿಂದ ನೆರವೇರಿದವು. ಎಲ್ಲಿ ನೋಡಿದಲ್ಲಿ ಪೂಜ್ಯ ಶಿವಬಸವ ಮಹಾಸ್ವಾಮಿಗಳ ಪ್ರಭಾವಳಿ, ಪೂಜ್ಯ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳ ಸಮರ್ಥ ನೇತೃತ್ವ, ಪೂಜ್ಯ ಡಾ. ಸಾವಳಗೀಶ್ವರ ದೇವರ ಪಾದರಸದ ಓಡಾಟ ಎದ್ದು ಕಾಣುತ್ತಿದ್ದವು. ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ನಾಡಿನ ಬೇರೆ ಬೇರೆ ಭಾಗಗಳಿಂದ ಮಠಾಧೀಶರು, ಮರಿದೇವರು, ಧಾರ್ಮಿಕ ಮುಖಂಡರು, ಜನಪ್ರತಿನಿಧಿಗಳು, ಸಚಿವರು, ಸಾಹಿತಿಗಳು, ಕಲಾವಿದರು, ಭಕ್ತರು ತಂಡೋಪತಂಡವಾಗಿ ಬಂದು ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದುದು ಅಪೂರ್ವವಾದ ದೃಶ್ಯ.

ನಾಗನೂರಿನಲ್ಲಿ ಹಬ್ಬದ ವಾತಾವರಣ ಜಾತ್ರೆಯ ಉತ್ಸಾಹ. ಮನೆ ಮನೆಗಳಲ್ಲಿ 'ಶಿವಬಸವ' ಭಕ್ತಿಯ ಅಲೆಗಳು. ಪ್ರತಿಯೊಬ್ಬರೂ ಮನೆಗಳಿಗೆ ಸುಣ್ಣ ಬಣ್ಣ ಹಚ್ಚಿ, ತಳಿರು ತೋರಣಗಳಿಂದ ಅಲಂಕರಿಸಿದ್ದರು. ಬೀದಿ ಬೀದಿಗಳಲ್ಲಿ ರಂಗೋಲಿ, ದೀಪಾಲಂಕಾರಗಳು. ರುದ್ರಾಕ್ಷಿಮಠವಂತೂ ಸ್ವಾಮೀಜಿಗಳಿಂದ, ಸಾಧು ಸಂತರಿಂದ ಭಕ್ತರಿಂದ ತಿಂಗಳ ಪರ್ಯಂತ ಕಿಕ್ಕಿರಿದು ತುಂಬಿತ್ತು.

ಕಾರ್ಯಕ್ರಮಗಳಿಗಾಗಿಯೇ ಭವ್ಯವಾದ ವೇದಿಕೆ. ನಿರ್ಮಾಣಗೊಂಡಿತ್ತು. ಶರಣರ ವಚನ ಗಾಯನದ ಅಲೆಗಳು ಜನರನ್ನು ಮುಗ್ಧಗೊಳಿಸುತ್ತಿದ್ದವು. ವೇದಿಕೆಯಿಂದ ಕೇಳಿ ಬರುತ್ತಿದ್ದ ಪೂಜ್ಯರ ನುಡಿನೈವೇದ್ಯಗಳು, ಅತಿಥಿಗಳ ಉಪನ್ಯಾಸಗಳು, ಪುಷ್ಪವೃಷ್ಟಿಯಲ್ಲಿ ನಡೆಯುತ್ತಿದ್ದ ಗಣ್ಯರ ಗೌರವ ಸನ್ಮಾನಗಳು ನೋಡುವುದೇ ಕಂಗಳ ಭಾಗ್ಯವೆನಿಸಿತ್ತು. ನಿಜಕ್ಕೂ ನಾಗನೂರು ಶರಣ ಕ್ಷೇತ್ರದಂತೆ ಕಂಗೊಳಿಸುತ್ತಿತ್ತು. ಇದೆಲ್ಲದರ ಹಿಂದಿನ ಬಹು ದೊಡ್ಡ ಪ್ರೇರಕ ಶಕ್ತಿಯೆಂದರೆ ಪೂಜ್ಯ ಡಾ. ಶಿವಬಸವ ಮಹಾಸ್ವಾಮಿಗಳ ಪುಣ್ಯಸ್ಮರಣೆ. ಅದರಲ್ಲಿಯೂ ಇದು ಅವರ ೨೫ ನೆಯ ಸ್ಮರಣೆಯಾದ್ದರಿಂದ ಅದಕ್ಕೆ ಸಾಂದರ್ಭಿಕ ಮಹತ್ವ ಪ್ರಾಪ್ತವಾಗಿತ್ತು. ಮೊದಲ ೧೫ ದಿನಗಳ ಕಾರ್ಯಕ್ರಮಗಳು ಭಾರಿ ಮಳೆಯಲ್ಲಿಯೇ ಜರುಗಿದವು. ಮಳೆಯಿಂದ ಯಾವ ವ್ಯತ್ಯಯವೂ ಆಗಲಿಲ್ಲ, ಭಕ್ತರ ಬರವೂ ಕಡಿಮೆ ಆಗಲಿಲ್ಲ. ನಿತ್ಯ ಹತ್ತು ಸಾವಿರ ಜನಗಳ ಮಧ್ಯದಲ್ಲಿ ಜರುಗಿದ ಬಸವಪುರಾಣದ ಆಕರ್ಷಣೆಯೂ ಹಾಗಿತ್ತು.

ಪೂಜ್ಯ ಶಿವಬಸವ ಮಹಾಸ್ವಾಮಿಗಳು ನಾಗನೂರು ರುದ್ರಾಕ್ಷಿಮಠಕ್ಕೆ ಉತ್ತರಾಧಿಕಾರಿಯಾಗಿ ಬಂದುದೇ ಒಂದು ಐತಿಹಾಸಿಕ ಸಂದರ್ಭವೆನ್ನಬೇಕು. ದೇಶದ ಎಲ್ಲ ಕ್ಷೇತ್ರಗಳಲ್ಲಿ ನವೋದಯದ ಹೊಂಗಿರಣಗಳು ಹರಡಿಕೊಳ್ಳುತ್ತಿದ್ದವು. ಸ್ವಾತಂತ್ರ್ಯವನ್ನು ಸತ್ಯಾಗ್ರಹದ ಮೂಲಕ, ಸಮಾನತೆಯನ್ನು ಶಿಕ್ಷಣದ ಮೂಲಕ, ಆರ್ಥಿಕ ಅಭಿವೃದ್ಧಿಯನ್ನು ಶ್ರಮ–

ಶ್ರೀಕಲ್ಪ ಪ್ಲಾಟ ನಂ. ೨೦ ಶಾಂತಿನಿಕೇತನ ಟೀಚರ್ಸ್ ಕಾಲನಿ ಹಿಂಡಲಗಾ ಗಣಪತಿ ಗುಡಿ ಹತ್ತಿರ ದಾಜೀಬಾ ದೇಸಾಯಿ ರಸ್ತೆ ಬೆಳಗಾವಿ

ಸ್ವಾವಲಂಬನೆಯ ಮೂಲಕ ಸಾಧಿಸಬೇಕೆನ್ನುವ ಪ್ರಯತ್ನಗಳು ಭರದಿಂದ ಸಾಗಿದ್ದವು. ಇಂಥ ಅಪೂರ್ವ ಪರಿವರ್ತನೆಯ ಕಾಲದಲ್ಲಿ ಲಿಂಗಾಯತ ಸಮಾಜದ ಸರ್ವಾಂಗೀಣ ಪ್ರಗತಿಗಾಗಿ ಮುಂದಾದವರು ಪೂಜ್ಯ ಹಾನಗಲ್ಲ ಕುಮಾರಸ್ವಾಮಿಗಳು. ಇವರ ಆತ್ಮೀಯ ಶಿಷ್ಯರು ಪೂಜ್ಯ ಶಿವಬಸವ ಸ್ವಾಮಿಗಳು ಪೂಜ್ಯ ಲಿಂ. ಹಾನಗಲ್ಲ ಕುಮಾರ ಸ್ವಾಮಿಗಳ ಕನಸುಗಳನ್ನು ನನಸು ಮಾಡಲು ಇವರು ಗಡಿನಾಡು ಬೆಳಗಾವಿಯನ್ನು ಕೇಂದ್ರವಾಗಿಟ್ಟುಕೊಂಡು, ಕಾರ್ಯ ದಾಸೋಹದ ಮೂಲಕ ರುದ್ರಾಕ್ಷಿಮಠದ ಸೇವೆಯನ್ನು ವಿಸ್ತರಿಸಿದರು. ಅವರ ಅಂದಿನ ಸಾಧನೆಗೆ ಇಂದಿನ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆ ಮತ್ತು ಇಂದಿನ ಬೆಳೆದ ಬೆಳಗಾವಿಯೇ ನಿದರ್ಶನವೆನ್ನಬೇಕು. ಇಂಥ ಮಹಾಗುರುಗಳ ಪುಣ್ಯಸ್ಮರಣೆಯನ್ನು ಅರ್ಥಪೂರ್ಣವಾಗಿ ಸಂಘಟಿಸಿ, ಅನುಷ್ಠಾನಗೊಳಿಸಿದವರು ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳು. ಗುರುಗಳ ಆಶಯದಂತೆಯೇ ಎಲ್ಲವೂ ಅಚ್ಚುಕಟ್ಟಾಗಿ ನೆರವೇರುವಂತೆ ನೋಡಿಕೊಂಡವರು ಪೂಜ್ಯ ಸಾವಳಗೀಶ್ವರ ದೇವರು. ಅಂದರೆ ಇಂದಿನ ನಾಗನೂರು ರುದ್ರಾಕ್ಷಿಮಠದ ಪೀಠಾಧಿಪತಿಗಳಾದ ಪೂಜ್ಯ ಡಾ. ಅಲ್ಲಮಪ್ರಭು ಮಹಾಸ್ವಾಮಿಗಳು.

## ಪುಣ್ಯಸ್ಮರಣೆ

ದಿನಾಂಕ ೧೦-೧೦-೨೦೧೯ ರಂದು 'ಬಸವ ಪುರಾಣ' ಪ್ರಾರಂಭೋತ್ಸವದೊಂದಿಗೆ ರಜತಮಹೋತ್ಸವವು ಉದ್ಘಾಟನೆಯಾಯಿತು. ಅಂದು ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಪೂಜ್ಯಶ್ರೀ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು, ಶ್ರೋ. ಬ್ರ. ಡಾ. ಶಿವಕುಮಾರ ಮಹಾಸ್ವಾಮಿಗಳು ದಿವ್ಯಸಾನಿಧ್ಯವನ್ನು ವಹಿಸಿದ್ದರು. ಒಂದು ತಿಂಗಳ ಕಾಲ ಜರುಗಿದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಪೂಜ್ಯರ ಮತ್ತು ಅತಿಥಿಗಳ ನುಡಿಮುತ್ತುಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.

'ಬಸವಣ್ಣನವರನ್ನು ಇನ್ನೊಬ್ಬರೊಂದಿಗೆ ಹೋಲಿಸಲು ಸಾಧ್ಯವಿಲ್ಲ. ಅವರು ತಮಗಾಗಿ ಏನನ್ನೂ ಬಯಸಲಿಲ್ಲ. ಯಾವುದಕ್ಕೂ ಆಶೆ ಮಾಡಲಿಲ್ಲ. ಸಮಾಜದಲ್ಲಿರುವ ಪ್ರತಿಯೊಬ್ಬರೂ ಸುಖವಾಗಿರಬೇಕೆಂಬುದೇ ಅವರ ಆಶಯವಾಗಿತ್ತು. ಅದಕ್ಕಾಗಿಯೇ ಬದುಕನ್ನು ಧಾರೆಯೆರೆದ ಮಹಾತ್ಮರು ಅವರು. ನಾಗನೂರು ರುದ್ರಾಕ್ಷಿಮಠದ ಪೂಜ್ಯ ಶಿವಬಸವ ಸ್ವಾಮಿಗಳ ಕಾಯಕವಾದರೂ ದೇಶಕ್ಕೇ ಮಾದರಿಯಾದುದು. ಅವರಿಗೆ ಕಾಯಕ, ಪ್ರಸಾದ ಬಿಟ್ಟರೆ ಬೇರೆ ಧ್ಯಾನವೇ ಇರಲಿಲ್ಲ. ಹಳ್ಳಿಯ ಮಕ್ಕಳು, ಬಡಮಕ್ಕಳು ಓದಿ ವಿದ್ಯಾವಂತರಾಗಬೇಕು ಅನ್ನುವುದು ಅವರ ಕಾಳಜಿಯಾಗಿತ್ತು. ಅವರ ಉತ್ತರಾಧಿಕಾರಿಯಾಗಿ ಬಂದ ಪೂಜ್ಯ ಸಿದ್ಧರಾಮ ಸ್ವಾಮಿಗಳಿಗೆ ಈಗ ೬೨ ವರ್ಷ. ಅಧ್ಯಯನ ಮತ್ತು ಸೇವೆಯಲ್ಲಿಯೇ ಸಂತೋಷದ ಪಡುವಂಥ ಸ್ವಾಮಿಗಳು. ಡಾ. ಸಾವಳಗೀಶ್ವರರಿಗೆ ಪಟ್ಟ ಕಟ್ಟಿ ಅಧಿಕಾರವನ್ನು ಹಸ್ತಾಂತರಿಸುವುದಕ್ಕಾಗಿ ಸಂತೋಷದಿಂದ ಮುಂದಾಗಿದ್ದಾರೆ. ಅವರು ನಿಷ್ಕಾಮರು.'

**ಶ್ರೀ ಸಿದ್ಧೇಶ್ವರ ಸ್ವಾಮೀಜಿ, ವಿಜಯಪುರ**

'ಡಾ. ಶಿವಬಸವ ಸ್ವಾಮೀಜಿ ನಿತ್ಯ ಸ್ಮರಣೀಯರು. ಶಿವಬಸವ ಸ್ವಾಮೀಜಿ ಮತ್ತು ಡಾ. ಸಿದ್ಧರಾಮ ಸ್ವಾಮೀಜಿ ಈ ಭಾಗವನ್ನು ಸ್ವರ್ಗವನ್ನಾಗಿಸಿದ್ದಾರೆ. ನಮ್ಮ ಮಧ್ಯ ಮಹಾತ್ಮರು ಇರುತ್ತಾರೆ. ಸಾಮಾನ್ಯರ ಕಷ್ಟವನ್ನು ದೂರ ಮಾಡುತ್ತಾರೆ. ಶಕ್ತಿಯನ್ನು ಸೃಷ್ಟಿ ಮಾಡುವದಕ್ಕಾಗಲಿ, ನಾಶ ಮಾಡುವದಕ್ಕಾಗಲಿ ಬರುವುದಿಲ್ಲ. ಆದರೆ ಅದನ್ನು ಪರಿವರ್ತನೆ ಮಾಡಲು ಬರುತ್ತದೆ. ಶಕ್ತಿಯನ್ನು ಪರಿವರ್ತಿಸಿಕೊಂಡ ಮಠಗಳು ಬಡತನ ನಿರ್ಮೂಲನೆಗೆ ಶ್ರಮಿಸಿವೆ'.

**ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ**

ಎರಡು ನೂರು ವರ್ಷಗಳ ಇತಿಹಾಸ ಹೊಂದಿದ ನಾಗನೂರು ರುದ್ರಾಕ್ಷಿಮಠದ ಡಾ. ಶಿವಬಸವ ಸ್ವಾಮೀಜಿ, ಡಾ. ಸಿದ್ಧರಾಮ ಸ್ವಾಮೀಜಿಗಳಿಂದ ಶ್ರೀಮಠಕ್ಕೆ ಒಳ್ಳೆಯ ಕೊಡುಗೆ ಸಿಕ್ಕಿದೆ.

**ಪೂಜ್ಯಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಸುತ್ತೂರು**

ನಾಗನೂರ ಭಕ್ತರದು ಭಕ್ತಿಯ ದಾಸೋಹ, ಶ್ರಮದ ದಾಸೋಹ, ಬಸವಣ್ಣ ದೇಶದ ಎಲ್ಲ ಜನರನ್ನು ಆಕರ್ಷಿಸಿದಂತೆ ಈ ಭಕ್ತ ಸಮೂಹವು ನಾಡಿನ ಜನರನ್ನು ನಾಗನೂರಕ್ಕೆ ಆಕರ್ಷಿಸಿ ಮರಿಕಲ್ಯಾಣವನ್ನೇ ಸೃಷ್ಟಿ ಮಾಡಿದೆ. ಡಾ. ಶಿವಬಸವ ಸ್ವಾಮಿಗಳು ತಪೋನಿಧಿಗಳು, ಸನ್ಯಾಸಿಗಳಲ್ಲೇ ಶ್ರೇಷ್ಠರು. ಅಂತಹ ಪೂಜ್ಯರ ಭವ್ಯಪರಂಪರೆಯ ಶ್ರೀಮಠವನ್ನು ಡಾ. ಸಿದ್ಧರಾಮ ಸ್ವಾಮಿಗಳವರು ಉನ್ನತ ಸ್ಥಾನಕ್ಕೇರಿಸಿದ್ದಾರೆ. ಡಾ. ಸಾವಳಗೀಶ್ವರರು ಕೂಡ ಅದನ್ನು ಮುಂದುವರೆಸಿಕೊಂಡು ಹೋಗುವರೆಂಬ ನಂಬಿಕೆ ನಮಗಿದೆ.

**ಜಗದ್ಗುರು ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಗಳು, ಹುಬ್ಬಳ್ಳಿ**

ಈ ಭಕ್ತರ ಸಮೂಹ ನೋಡಿದರೆ ನಾವು ನಾಗನೂರ ಗ್ರಾಮದಲ್ಲಿದ್ದೇವೆಯೊ ಅಥವಾ ಪ್ರಯಾಗದಲ್ಲಿ ನಡೆದಿರುವ ಕುಂಭಮೇಳದ ಪುಣ್ಯಸ್ಥಾನದಲ್ಲಿ ಭಾಗಿಯಾಗಿದ್ದೇವೆಯೊ

ಎಂಬ ಭಾವನೆ ಬರುತ್ತದೆ. ಡಾ. ಶಿವಬಸವ ಮಹಾಸ್ವಾಮಿಗಳು ಜ್ಯೋತಿಯಾಗಿ ಬೆಳಗಿದವರು; ಸಮಾಜಕ್ಕೆ ವಿದ್ಯೆ, ಅನ್ನ ಕೊಡುವ ಕಾರ್ಯ ಮಾಡಿದರು. ಗಡಿ ಭಾಗದಲ್ಲಿ ಕನ್ನಡ ಉಳಿಸುವ ಕಾರ್ಯ ಮಾಡಿದರು.

**ಜಗದ್ಗುರು ಶ್ರೀ ಫಕೀರ ಸಿದ್ಧರಾಮ ಸ್ವಾಮಿಗಳು, ಶಿರಹಟ್ಟಿ**

ಇಲ್ಲಿ ನಡೆದಿರುವ ಡಾ. ಸಾವಳಗೀಶ್ವರ ದೇವರ ಪಟ್ಟಾಧಿಕಾರ ಮಹೋತ್ಸವ ನಾಡಿಗೆ ಮಾದರಿಯಾಗಿದೆ. ನಾಗನೂರ ಗ್ರಾಮ ದೇಶದಲ್ಲಿ ಮಾದರಿ ಗ್ರಾಮವಾಗಿದೆ. ಇದಕ್ಕೆ ಕಾರಣ ಪೂಜ್ಯಶ್ರೀ ಡಾ. ಶಿವಬಸವ ಸ್ವಾಮಿಗಳು.

**ಪೂಜ್ಯಶ್ರೀ ಗುರುಮಹಾಂತ ಸ್ವಾಮಿಗಳು, ಇಳಕಲ್ಲ**

ಅಥಣಿ ಶಿವಯೋಗಿಗಳು ಹಾಗು ಹಾನಗಲ್ಲ ಕುಮಾರ ಶಿವಯೋಗಿಗಳ ಕೃಪೆಗೆ ಪಾತ್ರರಾದ ಏಕೈಕ ಪೂಜ್ಯರೆಂದರೆ ಪೂಜ್ಯಶ್ರೀ ಡಾ. ಶಿವಬಸವ ಮಹಾಸ್ವಾಮಿಗಳು. ಈ ನಾಡಿನ ಮಕ್ಕಳ ಶಿಕ್ಷಣಕ್ಕಾಗಿ ಅನ್ನದಾಸೋಹ ನೀಡಿದ ಕರುಣಾಮೂರ್ತಿ ಪೂಜ್ಯರು ಅವರು. ತಿಂಗಳ ಪರ್ಯಂತ ಸಾಹಿತಿಗಳು, ರಾಜಕೀಯ ಧುರೀಣರು, ಸ್ವಾಮೀಜಿಗಳನ್ನು ಕರೆಸಿ ಯಶಸ್ವಿ ಸಮಾರಂಭ ಮಾಡಿದ ಕೀರ್ತಿ ನಾಗನೂರಿನ ಜನತೆಗೆ ಸಲ್ಲುತ್ತದೆ.

**ಪೂಜ್ಯಶ್ರೀ ಜಗದ್ಗುರು ಡಾ. ಮುರುಘಾ ಶರಣರು, ಚಿತ್ರದುರ್ಗ**

ಪೂಜ್ಯಶ್ರೀ ಡಾ. ಶಿವಬಸವ ಸ್ವಾಮಿಗಳು ಪ್ರಸಾದ ನಿಲಯ ಸ್ಥಾಪನೆ ಮಾಡುವ ಮುಖಾಂತರ ಶಿಕ್ಷಣದ ಜೊತೆ ಸಂಸ್ಕಾರವನ್ನು ಕೊಟ್ಟರು. ಮಳೆಯ ನಡುವೆಯೂ ನಾಗನೂರ ಭಕ್ತರು ಯಶಸ್ವಿಯಾಗಿ ಈ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ಇದು ಅಭಿಮಾನದ ಸಂಗತಿ.

**ಪೂಜ್ಯಶ್ರೀ ಜಗದ್ಗುರು ಪಂಚಮ ಶಿವಲಿಂಗೇಶ್ವರ ಸ್ವಾಮಿಗಳು, ನಿಡಸೋಸಿ**

ಶ್ರೀ ಶಿವಬಸವ ಸ್ವಾಮಿಗಳು ದೇವಾಲಯವನ್ನು ನಿರ್ಮಿಸಿ ಶಿಖರವನ್ನು ಕಟ್ಟಿಸಿದರೆ, ಪೂಜ್ಯಶ್ರೀ ಡಾ. ಸಿದ್ಧರಾಮ ಮಹಾಸ್ವಾಮಿಗಳು, ಆ ಶಿಖರಕ್ಕೆ ಕಳಸವನ್ನು ಇಟ್ಟಿದ್ದಾರೆ. ಶಿವಬಸವ ಸ್ವಾಮಿಗಳವರ ಬಸವ ರಥವನ್ನು ಸಾವಳಗೀಶ್ವರ ದೇವರು ಆನೂಚಾನವಾಗಿ ಎಳೆಯಲಿ.

**ಪೂಜ್ಯಶ್ರೀ ಜಗದ್ಗುರು ಡಾ. ಸಾರಂಗಧರ ದೇಶಿಕೇಂದ್ರ ಸ್ವಾಮಿಗಳು, ಶ್ರೀಶೈಲ**

ಭಕ್ತರನ್ನು ದೇವರನ್ನಾಗಿ ಮಾಡಿದ ಕೀರ್ತಿ ರಾಜ್ಯದ ವಿರಕ್ತ ಮಠಗಳಿಗೆ ಸಲ್ಲುತ್ತದೆ. ಸಿದ್ಧಗಂಗಾ ಶ್ರೀ, ಸುತ್ತೂರು ಸ್ವಾಮೀಜಿ, ನಾಗನೂರು ಮಠಾಧೀಶರು ಪ್ರಸಾದನಿಲಯ ಸ್ಥಾಪಿಸದಿದ್ದರೆ ಜನರು ಬದುಕು ಕಟ್ಟಿಕೊಂಡು ಉನ್ನತ ಹುದ್ದೆಯಲ್ಲಿರಲು ಆಗುತ್ತಿರಲಿಲ್ಲ. ಕರ್ನಾಟಕದಲ್ಲಿ ಮಾದರಿ ಲಿಂಗಾಯತ ಮಠವೆಂದರೆ ನಾಗನೂರು ರುದ್ರಾಕ್ಷಿಮಠ, ಸ್ವಾಮೀಜಿಯೆಂದರೆ ಶಿವಬಸವ ಸ್ವಾಮಿಗಳು.

**ಪೂಜ್ಯಶ್ರೀ ನಿಜಗುಣ ಸ್ವಾಮೀಜಿ, ಮುಂಡರಗಿ**

ನಾಗನೂರಿನಲ್ಲಿ ನಡೆಯುತ್ತಿರುವ ಕಾರ್ಯಕ್ರಮವು ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದ ಶರಣರು ನಡೆಸುತ್ತಿದ್ದ ಅನುಭವ ಮಂಟಪವನ್ನು ನೆನಪಿಸುತ್ತದೆ'.

**ಪೂಜ್ಯಶ್ರೀ ಶಿವಾನಂದ ಸ್ವಾಮಿಗಳು, ಹಂದಿಗುಂದ**

ನಾಗನೂರು ಗ್ರಾಮದಲ್ಲಿ ನಡೆದಿರುವ ಬಸವಪುರಾಣ ಐತಿಹಾಸಿಕ ಸಮಾರಂಭವಾಗಿದೆ. ಬಸವಣ್ಣನವರ ಸಮಾಜೋಧಾರ್ಮಿಕ ಕೆಲಸಗಳನ್ನು ನಾಡವರಿಗೆ ನಿಷ್ಠೆಯಿಂದ ತಲುಪಿಸುವ ಕಾರ್ಯವನ್ನು ನಾಗನೂರ ಶ್ರೀಮಠ ಮಾಡುತ್ತಿದೆ. ಡಾ. ಶಿವಬಸವ ಮಹಾಸ್ವಾಮಿಗಳವರು ಬೆಳಗಾವಿ ಕರ್ನಾಟಕದಲ್ಲಿ ಉಳಿಯಲಿಕ್ಕೆ ಮುಖ್ಯ ಕಾರಣೀಕರ್ತರು ಎಂದರೆ ಅತಿಶಯೋಕ್ತಿಯಲ್ಲ.

**ಪೂಜ್ಯಶ್ರೀ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮಿಗಳು ಕೂಡಲಸಂಗಮ**

ಈ ನಾಡಿನಲ್ಲಿ ಎಲ್ಲ ರೀತಿಯ ಬರಗಳು ಬಂದಿವೆ. ಆದರೆ ನಾಗನೂರಿನ ಭಕ್ತರ ಭಕ್ತಿಗೆ ಯಾವತ್ತೂ ಬರಬಂದಿಲ್ಲ. ಅವರು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡ ರೀತಿಯನ್ನು ನೋಡಿದರೆ ಅವರು ಶಿವಬಸವ ಶ್ರೀಗಳ ಮೇಲಿಟ್ಟಿರುವ ಭಕ್ತಿಯ ಅರಿವಾಗುತ್ತದೆ.

**ಸಪೂಜ್ಯಶ್ರೀ ಜಗದ್ಗುರು ವಚನಾನಂದ ಸ್ವಾಮಿಗಳು ಹರಿಹರ**

'ದೇಶದಲ್ಲಿ ಮಠದ ಪರಂಪರೆ ಇಲ್ಲದಿದ್ದರೆ ಬಹುತೇಕ ಜನರು ಅನಕ್ಷರಸ್ಥರಾಗಿರುತ್ತಿದ್ದರು. ನಾಗನೂರು ರುದ್ರಾಕ್ಷಿಮಠದ ಪೂಜ್ಯ ಡಾ. ಶಿವಬಸವ ಮಹಾಸ್ವಾಮಿಗಳು ಬೆಳಗಾವಿ ಭಾಗದ ಜನರಿಗೆ ಕಲ್ಪವೃಕ್ಷವಾಗಿದ್ದಾರೆ. ಡಾ. ಸಾವಳಗೀಶ್ವರರು ಅವರಿಗೆ ಸಾಟಿಯಾಗಿ ಕೆಲಸ ಮಾಡಲಿ'

**ಡಾ. ವಿಶ್ವಪ್ರಭು ಸ್ವಾಮೀಜಿ, ಕೋಣ್ಣೂರಮಠ**

'ಸಮಾಜಕ್ಕೆ ಒಳ್ಳೆಯ ಸ್ವಾಮೀಜಿಗಳ ಅವಶ್ಯಕತೆ ಇದೆ. ಇವತ್ತು ಸಂಸ್ಕಾರ ಸಂಸ್ಕೃತಿ ಉಳಿದಿದ್ದರೆ, ಅದು ಕೇವಲ ಗ್ರಾಮೀಣ ಪ್ರದೇಶದಲ್ಲಿ ಮಾತ್ರ. ಅದೂ ಮಠಗಳಿಂದ ಮಾತ್ರ'

**ಶ್ರೀಗಳು ದೇಗುಲಮಠ, ಕನಕಪುರ**

**ಅತಿಥಿ ನುಡಿಗಳು:**

'ಜಗತ್ತಿಗೆ ಪ್ರಜಾಪ್ರಭುತ್ವದ ಮಹತ್ವ ಸಾರಿದವರು ಬಸವಣ್ಣನವರು. ನಾನು ಈ ಸ್ಥಾನದಲ್ಲಿರಲು ಡಾ. ಶಿವಬಸವ ಮಹಾಸ್ವಾಮಿಗಳ ಆಶೀರ್ವಾದವೇ ಕಾರಣ'.

**ಮಾನ್ಯ ಶ್ರೀ ಸುರೇಶ ಅಂಗಡಿ**

೧೦ ವರ್ಷಗಳ ಹಿಂದೆ ಕದಳಿ ವೇದಿಕೆಯ ಜಿಲ್ಲಾಘಟಕದ ಅಧ್ಯಕ್ಷೆಯಾಗಿ ನನ್ನನ್ನ ಗುರುತಿಸಿದವರು ಪೂಜ್ಯಶ್ರೀ ಡಾ. ಸಿದ್ಧರಾಮ ಸ್ವಾಮಿಗಳು. ಅವರ ಆಶೀರ್ವಾದದಿಂದಲೇ ಇವತ್ತು ನಾನು ಇಷ್ಟು ಎತ್ತರಕ್ಕೆ ಬೆಳೆದಿದ್ದೇನೆ. ನಾಗನೂರು ಮಠವು ನನ್ನಂತಹ ಹಲವಾರು ಮಹಿಳೆಯರನ್ನ ಗುರುತಿಸಿದೆ; ಬೆಳೆಸಿದೆ.

**ಶ್ರೀಮತಿ ಶಶಿಕಲಾ ಜೊಲ್ಲೆ**

ಈ ನಾಡಿನಲ್ಲಿ ಲಿಂಗಾಯತ ಮಠಾಧೀಶರು ಮಾಡಿದಷ್ಟು ಸಮಾಜ ಸೇವೆಯನ್ನು ಯಾರೂ ಮಾಡಿಲ್ಲ. ಪೂಜ್ಯಶ್ರೀ ಡಾ. ಶಿವಬಸವ ಮಹಾಸ್ವಾಮಿಗಳವರು ಆ ಎಲ್ಲ ಮಠಾಧೀಶರಲ್ಲಿ ಅಗ್ರಗಣ್ಯರಾಗಿದ್ದಾರೆ. ಕೆ. ಎಲ್. ಇ. ಸಂಸ್ಥೆ ಹಾಗು ನಾಗನೂರಮಠ ಬೆಳಗಾವಿಯಲ್ಲಿ ಶಿಕ್ಷಣ ಕ್ರಾಂತಿಯನ್ನು ಮಾಡಿವೆ.

**ಡಾ. ಪ್ರಭಾಕರ ಕೋರೆ**

'ವಿರಕ್ತ ಮಠಗಳೆಂದರೆ ಚಿಂತನಶೀಲ, ಕ್ರಿಯಾಶೀಲ ಚಟುವಟಿಕೆಗಳ ಕೇಂದ್ರಗಳು. ಇಂಥ ಕೇಂದ್ರಗಳಲ್ಲಿ ನಾಗನೂರು ರುದ್ರಾಕ್ಷಿಮಠ ಅಗ್ರಸ್ಥಾನದಲ್ಲಿದೆ. ಡಾ. ತೋಂಟದ ಸಿದ್ಧರಾಮ ಸ್ವಾಮಿಗಳ ಸಾಧನೆ ಶ್ಲಾಘನೀಯ'.

**ಶ್ರೀ ಮಹಾದೇವಪ್ಪ, ಮೈಸೂರು**

ಬೆಳಗಾವಿಯಲ್ಲಿ ಕನ್ನಡ ಉಳಿದಿದ್ದರೆ ಅದಕ್ಕೆ ಮೂಲ ಕಾರಣ ನಾಗನೂರು ರುದ್ರಾಕ್ಷಿಮಠ. ಬಸವಣ್ಣನ ತತ್ತ್ವಗಳನ್ನು ನೂರಕ್ಕೆ ನೂರರಷ್ಟು ಪಾಲಿಸಿಕೊಂಡು ಬಂದ ಮಠ ನಾಗನೂರು ಮಠ.

**ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿ**

ಕರ್ನಾಟಕದಲ್ಲಿ ಎರಡು ಮಠಗಳು ದಾಸೋಹಕ್ಕೆ ಮಹತ್ವ ಕೊಟ್ಟಿವೆ. ಸಿದ್ಧಗಂಗಾಮಠ ಹಾಗು ನಾಗನೂರುಮಠ ಬಸವ ಸಾಹಿತ್ಯವನ್ನು, ಕನ್ನಡ ಸಾಹಿತ್ಯವನ್ನು ಉಳಿಸಿದ ಮಠ ನಾಗನೂರು ಮಠ. ಫ. ಗು. ಹಳಕಟ್ಟಿಯವರ ಸಮಗ್ರ ಸಾಹಿತ್ಯವನ್ನು ಪ್ರಕಟಿಸಬೇಕು ಎಂದು ಬಿ. ಎಲ್. ಡಿ. ಇ. ಸಂಸ್ಥೆಯವರು ನಿರ್ಧರಿಸಿದಾಗ ಹಳಕಟ್ಟಿಯವರ 'ಶಿವಾನುಭವ' ಪತ್ರಿಕೆಯ ಎಲ್ಲ ಸಂಚಿಕೆಗಳನ್ನು ಒದಗಿಸಿಕೊಟ್ಟದ್ದು ನಾಗನೂರು ರುದ್ರಾಕ್ಷಿಮಠ.

**ಸನ್ಮಾನ್ಯ ಶ್ರೀ ಎಂ. ಬಿ. ಪಾಟೀಲ**

'ಮಠಗಳು ಕೇವಲ ಧಾರ್ಮಿಕ ಕ್ಷೇತ್ರಕ್ಕೆ ಮೀಸಲಾಗಿರದೆ, ಅವು ಶೈಕ್ಷಣಿಕ, ಸಾಮಾಜಿಕ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿವೆ. ಮಠಗಳು ಬಿದ್ದವರನ್ನು ಎತ್ತುವ ಕೇಂದ್ರಗಳು. ಆಲೋಚನೆ, ಆಚರಣೆಯಿಂದ ಬದುಕಿನಲ್ಲಿ ಬದಲಾವಣೆ ಸಾಧ್ಯ. ೧೨ನೆಯ ಶತಮಾನದ ಬಸವಾದಿ ಶಿವಶರಣರ ಪರಂಪರೆಯನ್ನು ನಾಗನೂರು ಮಠದ ಗುರುವರ ಮುಂದುವರೆಸಿಕೊಂಡು ಬಂದಿರುವುದು ಶ್ಲಾಘನೀಯ'.

**ಪ್ರೊ. ಎಸ್. ವಿ. ಹೆಗಡಾಳ, ಧಾರವಾಡ**

'ಶರಣ ಸಂಸ್ಕೃತಿ ವಿಶ್ವಧರ್ಮವನ್ನು ಸಾರುತ್ತದೆ. ಇವನಾರವ, ಇವನಾರವ ಎನ್ನದೆ 'ಇವ ನಮ್ಮವ, ಇವ ನಮ್ಮವ' ಎಂದು ಎಲ್ಲರನ್ನೂ ಒಟ್ಟಾಗಿ ಬಾಳಲು ತಿಳಿಸುತ್ತದೆ. ಶರಣರ ವಚನಗಳು ಮನುಷ್ಯನ ಧರ್ಮದ ಸರಳ ಸೂತ್ರಗಳಾಗಿವೆ. ಅವುಗಳನ್ನು ಪ್ರಯೋಗ, ಪ್ರಸಾರ ಮಾಡಿದ ಶ್ರೇಯಸ್ಸು ನಾಗನೂರು ರುದ್ರಾಕ್ಷಿಮಠದ್ದು.'

**ಡಾ. ಶ್ರೀರಾಮ ಇಟ್ಟಣ್ಣವರ, ಬೀಳಗಿ**

'ಇಲಕಲ್ಲ ಮಹಾಂತ ಸ್ವಾಮಿಗಳು ಜೋಳಿಗೆ ಹಿಡಿದು ಜನರ ಬಳಿಗೆ ಹೋದದ್ದು ಧನ ದಾನ್ಯಗಳನ್ನು ಕೇಳಲು ಅಲ್ಲ. ಅವರು ಜನರ ದುಶ್ಚಟಗಳ ಭಿಕ್ಷೆ ಕೇಳಿದರು. ಅವರ ಪ್ರಯೋಗ ಇಲಕಲ್ಲ ಪರಿಸರದಲ್ಲಿ ಮಾತ್ರವಲ್ಲ ನಾಡಿನಲ್ಲಿ ದೊಡ್ಡ ಸಂಚಲನ ಉಂಟುಮಾಡಿತು. ಇಂದಿನ ಮಠಾಧೀಶರಾದರೂ ಇಂಥ ಪ್ರಯೋಗಗಳನ್ನು ಮಾಡುವ ಅವಶ್ಯಕತೆ ಇದೆ. ಮಠಗಳು ತಮ್ಮ ಸುತ್ತಲಿರುವ ಹಳ್ಳಿಗಳನ್ನು ದತ್ತು ತೆಗೆದುಕೊಂಡು ಅಲ್ಲಿಯ ಜನರನ್ನು ವ್ಯಸನಮುಕ್ತ ಮಾಡಿದರೆ, ಅದೊಂದು ದೊಡ್ಡ ಕಲ್ಯಾಣದ ಕಾಯಕವೆನಿಸುತ್ತದೆ'.

**ಡಾ. ಬಸವರಾಜ ಸಾದರ, ಬೆಂಗಳೂರು**

ಈ ಪಟ್ಟಾಭಿಷೇಕಕ್ಕೆ ಸಾಕ್ಷಿಯಾದ ನಾನೇ ಧನ್ಯ. ಭಾರತ ದೇಶವನ್ನು ವಿಶ್ವವು ಗುರುತಿಸುವುದು ಧರ್ಮದ ಕಾರಣಕ್ಕಾಗಿ. ಅಂತಹ ಧರ್ಮವನ್ನು ಉಳಿಸಿದ್ದು ನಮ್ಮ ಲಿಂಗಾಯತ ಮಠಗಳು. ಅವುಗಳಲ್ಲಿ ಮೊದಲನೇ ಸಾಲಿನಲ್ಲಿರುವುದು ನಮ್ಮ ನಾಗನೂರು ಮಠ.

**ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರ**

### ಬಸವ ಪುರಾಣ

ಈ ಪುರಾಣವನ್ನು ಹಂದಿಗುಂದದ ಪೂಜ್ಯಶ್ರೀ ಶಿವಾನಂದ ಮಹಾಸ್ವಾಮಿಗಳು ಹೇಳುತ್ತಿದ್ದರು. ಅನೇಕ ದೃಷ್ಟಾಂತಗಳಿಂದ ಬಸವಣ್ಣನವರ ವ್ಯಕ್ತಿತ್ವವನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತಿದ್ದರು. ಅವರ ಮಾತಿನ ಶೈಲಿಗೆ ಬಸವಣ್ಣನವರ ಈ ವಚನ ನಿದರ್ಶನವಾಗಿತ್ತು.

**ನುಡಿದಡೆ ಮುತ್ತಿನ ಹಾರದಂತಿರಬೇಕು**
**ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು**
**ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು**
**ನುಡಿಯೊಳಗಾಗಿ ನಡೆಯದಿದ್ದಡೆ**
**ಕೂಡಲಸಂಗಮದೇವನೆಂತೊಲಿವನಯ್ಯಾ**

ಬಸವನ ಬಾಗೇವಾಡಿ ಸಮೀಪದ ಇಂಗಳೇಶ್ವರದಲ್ಲಿ ಜನಿಸಿದ ಬಸವಣ್ಣನವರು ವಿದ್ಯಾಭ್ಯಾಸಕ್ಕೆಂದು ಕೂಡಲಸಂಗಮಕ್ಕೆ ಹೇಗೆ ಬಂದರು? ಅಲ್ಲಿಂದ ಮಂಗಳವೇಡೆಗೆ, ಅಲ್ಲಿಂದ ಕಲ್ಯಾಣಕ್ಕೆ ಹೋಗಿ ಹೇಗೆ ಸಚಿವ ಪದವಿಯನ್ನು ಅಲಂಕರಿಸಿದರು. ಕಲ್ಯಾಣದಲ್ಲಿ ಲೋಕಕಲ್ಯಾಣಕ್ಕಾಗಿ ಹೇಗೆ ಶರಣರನ್ನು ಸಂಘಟಿಸಿದರು? ಹೇಗೆ ಅನುಭವ ಮಂಟಪವನ್ನು ಕಟ್ಟಿದರು? ಹೇಗೆ ಕಾಯಕಜೀವಿಗಳ ಚಳುವಳಿಯನ್ನು ರೂಪಿಸಿದರು? ಯಾವ ರೀತಿಯಾಗಿ ಜನರ ಅಂತರಂಗದಲ್ಲಿದ್ದ ಪ್ರಳಯದ ಕಸವನ್ನು ಕಿತ್ತು ಒಗೆಯಲು ಪ್ರಯತ್ನಿಸಿದರು. ಜಾತಿಭೇದದ ಕೇಡು, ಲಿಂಗಭೇದದ ಕೇಡು, ವರ್ಗಭೇದದ ಕೇಡುಗಳನ್ನೆಲ್ಲ ತೊಡೆದು ಹಾಕಲು ಜ್ಯೋತಿಯಾಗಿ ಹೇಗೆ ಬೆಳಗಿದರು? ಅಂಥ ಕಾರ್ಯ ಚಟುವಟಿಕೆಗಳಿಂದ ಬಸವಣ್ಣನವರು ಹೇಗೆ ವಿಶ್ವಗುರುಗಳೆನಿಸಿದ್ದಾರೆ. ಅವರು ನಮಗೆ ಇಂದು ಯಾಕೆ ಅವಶ್ಯವೆನಿಸಿದ್ದಾರೆ. ಈ ಪ್ರಶ್ನೆಗಳಿಗೆ ಸರಳ ಉತ್ತರಗಳಾಗಿ ಬಸವ ಪುರಾಣದ ಪ್ರಸಂಗಗಳನ್ನು ಪೂಜ್ಯ ಶಿವಾನಂದ ಸ್ವಾಮಿಗಳು ಒಂದು ತಿಂಗಳ ಕಾಲ ನಡೆಸಿಕೊಟ್ಟರು. ಜನರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಮಾಡಿದರು. ಬದುಕಿನಲ್ಲಿ ಆಶಾಭಾವನೆ ಇಟ್ಟುಕೊಳ್ಳಬೇಕು ನಿರಾಶಾಭಾವನೆ ಇರಬಾರದು. ಕಾಯಕ–ದಾಸೋಹ–ಸಮಾನತೆ ಇವು ಬಸವಾದಿ ಶಿವಶರಣರು ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿಗೆ ನೀಡಿದ ಅಮೂಲ್ಯ ಕೊಡುಗೆಗಳು.

'ದಯೆ ಇಲ್ಲದ ಧರ್ಮವದೇವುದಯ್ಯ? ಎಂಬ ಶ್ರೇಷ್ಠ ವಾಕ್ಯವನ್ನು ಇಡೀ ವಿಶ್ವವೇ ತಲೆ ಬಾಗಿ ಒಪ್ಪಿಕೊಂಡಿದೆ. ಬಸವಣ್ಣನವರ ತತ್ತ್ವ ನಿಜಕ್ಕೂ ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಇಂದಿಗೂ ಪ್ರಸ್ತುತ.'

'ಧರ್ಮದಿಂದ ಅಪಾಯವಿಲ್ಲ; ಧರ್ಮದ ಒಳಗಿರುವ ಕಳ್ಳರಿಂದ ಅಪಾಯವಿದೆ. ಬಸವಣ್ಣನವರ ವಿಚಾರಗಳ ಪರಿಪಾಲನೆಯಿಂದ ಎಲ್ಲರೂ ಪೂರ್ಣರಾಗುತ್ತಾರೆ.'

'ಬಸವಣ್ಣ ವಿಶ್ವದ ಅಮೂಲ್ಯ ಆಸ್ತಿ. ಅವರ ವಚನಗಳನ್ನು ತಿಳಿಯುವುದು ಅವಶ್ಯವಾಗಿದೆ. ವಚನಗಳು ಬದುಕಿನ ದಿಕ್ಸೂಚಿಗಳಾಗಿವೆ.'

ಇಂಥ ನುಡಿಮುತ್ತುಗಳಿಂದ ಪೂಜ್ಯರ ಪುರಾಣ ಕೇಳುಗರ ಮನದ ಮೇಲೆ ಗಾಢ ಪರಿಣಾಮ ಬೀರಿದ್ದು ಜನರು ಸ್ಮರಿಸುತ್ತಿದ್ದಾರೆ. ದಿನಾಂಕ ೯–೧೧–೨೦೧೯ ರಂದು ಬಸವ ಪುರಾಣದ ಮಂಗಲ ಸಮಾರಂಭ ನೆರವೇರಿತು.

### ನಿರಂಜನ ಪಟ್ಟಾಧಿಕಾರ

ಅದುವರೆಗೆ ಶಿಷ್ಯರಾಗಿದ್ದವರು ಗುರುಗಳಾಗುವ, ದೇಶಿಕರಾಗಿದ್ದವರು ನಿರಂಜನ ಮೂರ್ತಿಗಳಾಗುವ, ಪೂಜ್ಯಶ್ರೀ ಸಾವಳಗೀಶ್ವರರೆಂದು ಹೆಸರಾದವರು ಪೂಜ್ಯಶ್ರೀ ಅಲ್ಲಮಪ್ರಭು ಸ್ವಾಮಿಗಳೆಂದು ನಾಮಾಂಕಿತರಾಗುವ, ಶ್ರೀಮಠದ ಪೀಠಾಧಿಪತಿಗಳಾಗುವ ಮತ್ತು ಜನ್ಮ ಕೊಟ್ಟ ತಂದೆ ತಾಯಿಗಳು ಅವರ ಭಕ್ತರಾಗುವ ಅಪೂರ್ವ ಹೃದಯಸ್ಪರ್ಶಿ ಚಟುವಟಿಕೆಗಳು ದಿನಾಂಕ ೧೧–೧೧–೨೦೧೯ ರಂದು 'ನಿರಂಜನ ಪಟ್ಟಾಧಿಕಾರ' ಸಂದರ್ಭದಲ್ಲಿ ಜರುಗಿದವು. ಅಂದು ಬೆಳಗಿನಿಂದಲೇ ಪ್ರಾರಂಭವಾದ ಚಟುವಟಿಕೆಗಳು ಮುಖ್ಯವಾದ ಎರಡು ಹಂತಗಳಲ್ಲಿ ನಡೆದವು. ಮೊದಲ ಹಂತದ ಕಾರ್ಯಕ್ರಮ ಶ್ರೀಮಠದ ಒಳಗಡೆ ಆರಂಭವಾಯಿತು. ಎಲ್ಲವೂ ಶರಣ ಸಂಸ್ಕೃತಿ, ಬಸವತತ್ತ್ವದ ಅನುಗುಣವಾಗಿಯೇ ಜರುಗಿದ್ದು ವಿಶೇಷ. ಬಹಳಷ್ಟು ವಿರಕ್ತ ಮಠಗಳಲ್ಲಿ ಇನ್ನೂ ವೈದಿಕ ಸಂಪ್ರದಾಯದ ಪ್ರಕಾರವೆ ನಿರಂಜನ ಪಟ್ಟಾಧಿಕಾರದ ವಿಧಿ ವಿಧಾನಗಳು ಜರಗುತ್ತವೆ. ಆದರೆ ಇಲ್ಲಿ ಮಾತ್ರ ಬಸವತತ್ತ್ವದ ಪ್ರಕಾರವೇ ನಡೆಯಿತು. ಷಟ್‌ಸ್ಥಲ ಸಾಕ್ಷಿಯಾಗಿ, ಒಂದೊಂದು ಸ್ಥಲವನ್ನು ಪ್ರತಿನಿಧಿಸುವ ಕ್ರಿಯಾಮೂರ್ತಿಗಳಿದ್ದರು, ನಾಗನೂರಿನ ಗಣ್ಯರಿದ್ದರು, ಪೂಜ್ಯ ಸಾವಳಗೀಶ್ವರರ ಪೂರ್ವಾಶ್ರಮದ ತಂದೆ–ತಾಯಿಗಳಿದ್ದರು. ಇವರ ಸಮ್ಮುಖದಲ್ಲಿ ನಾಗನೂರು ರುದ್ರಾಕ್ಷಿಮಠದ ಒಂಭತ್ತನೆಯ ಪೀಠಾಧಿಪತಿಗಳಾದ ಪರಮಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳು ನೂತನ ಪೀಠಾಧಿಪತಿಗಳಾಗಲಿರುವ ಪೂಜ್ಯ ಸಾವಳಗೀಶ್ವರರಿಗೆ ವಚನೋಪದೇಶ ಮಾಡಿದರು. ಸಂಸಾರದ ಬಂಧನಗಳಿಂದ ಬಿಡಿಸಿಕೊಂಡು ಸಮಾಜದ ಸಂಬಂಧಗಳಿಗೆ ಅರ್ಪಿಸಿಕೊಳ್ಳುವ 'ಅರಿವಿನ ಗುರುಕೀಲಿ'ಯನ್ನು ತಿಳಿಸಿಕೊಟ್ಟರು. ಅದಾದ ಮೇಲೆ

ನಾಗನೂರು ಶ್ರೀಮಠದ ಭಕ್ತರು ಅವರನ್ನು ನೋಡಿಕೊಳ್ಳಬೇಕಾದ ರೀತಿಯನ್ನು, ಅವರ ಹೊಣೆಯನ್ನು ಪುರ ಪ್ರಮುಖರಿಗೆ ಒಪ್ಪಿಸಿದರು. ಅವರೆಲ್ಲ ಹೃತ್ಪೂರ್ವಕ ಒಪ್ಪಿಗೆ ಸೂಚಿಸಿದರು. ಆಗ ಪೂಜ್ಯ ಸಾವಳಗೀಶ್ವರರು ಜನ್ಮಕೊಟ್ಟ ತಂದೆ ತಾಯಿಗಳಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿ 'ಇಲ್ಲಿಯವರೆಗೆ ನಿಮ್ಮ ಮಗನಾಗಿದ್ದೆ, ಇನ್ನು ಮುಂದೆ ಸಮಾಜದ ಮಗ, ಇನ್ನು ಮುಂದೆ ನಮ್ಮ ನಿಮ್ಮ ಸಂಬಂಧ ಗುರು ಶಿಷ್ಯರದು. ಇದು ನನ್ನ ಕೊನೆಯ ನಮಸ್ಕಾರ' ಎಂದು ಹೇಳಿದರು. ಇದಾದ ಮೇಲೆ ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳು ಅವರ ಬೆನ್ನಿಗೆ ವಚನಗಳ ಕಟ್ಟನ್ನು ಕಟ್ಟಿದರು ಜೋಳಿಗೆ, ಬೆತ್ತ, ಕಂಬಳಿ, ಪ್ರಸಾದ ಬಟ್ಟಲು, ಕ್ರಿಯಾ ಬಟ್ಟಲು ಕೊಟ್ಟು ಶ್ರೀಮಠದ ಗುರುಪರಂಪರೆಯನ್ನು ಮುನ್ನಡೆಸಲು ಬೋಧಿಸಿದರು. ಚಿನ್ಮಯದೀಕ್ಷೆ ಅನುಗ್ರಹಿಸಿದರು ಮತ್ತು ಶ್ರೀ ಅಲ್ಲಮಪ್ರಭು ಎಂಬ ನಾಮವನ್ನು ಕೊಟ್ಟರು. ಪೂರ್ವಾರ್ಧದ ಈ ಚಟುವಟಿಕೆಗಳ ನಂತರ ಎರಡನೆಯ ಹಂತದ ಚಟುವಟಿಕೆಗಳು ಸಾರ್ವಜನಿಕರ ಸಮ್ಮುಖದಲ್ಲಿ, ವೇದಿಕೆಯ ಮೇಲೆ ಜರುಗಿದವು.

ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳು ತಾವು ಕುಳಿತಿದ್ದ ಗುರುಪೀಠದಲ್ಲಿ ಪೂಜ್ಯ ಡಾ. ಅಲ್ಲಮಪ್ರಭು ಸ್ವಾಮಿಗಳನ್ನು ಕುಳ್ಳಿರಿಸಿದರು. 'ಇನ್ನು ನೀವು ಶಿಷ್ಯರಲ್ಲ ಗುರುಗಳು' ಎಂದು ಅವರಿಗೆ ನಮಸ್ಕರಿಸಿದರು. ಜನ್ಮಕೊಟ್ಟ ತಂದೆ ತಾಯಿಗಳೂ ನೂತನ ಶ್ರೀಗಳಿಗೆ ಶಿರಸಾಷ್ಟಾಂಗ ನಮಸ್ಕಾರ ಸಲ್ಲಿಸಿದರು. ವೇದಿಕೆಯ ಎದುರು ಮೈಯೆಲ್ಲಾ ಕಣ್ಣಾಗಿ ನೋಡುತ್ತಿದ್ದ ಭಕ್ತರ ಕಣ್ಣುಗಳು ತುಂಬಿ ಬಂದಿದ್ದವು. ಇಂಥ ಭಾವಪೂರ್ಣ ಸಮಾರಂಭದಲ್ಲಿ ಪೂಜ್ಯ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಮಾತನಾಡಿದರು. ನಾಡಿನ ಲಿಂಗಾಯತ ಮಠಗಳಲ್ಲಿ ನಾಗನೂರು ರುದ್ರಾಕ್ಷಿಮಠದ ಹಿರಿಮೆ ಹೆಚ್ಚಿದೆ. ಡಾ. ಶಿವಬಸವ ಸ್ವಾಮಿಗಳು ಈ ಭಾಗದ ಜನರಲ್ಲಿದ್ದ ಮೂಢನಂಬಿಕೆಗಳನ್ನು ದೂರ ಮಾಡಿದ್ದಾರೆ. ಶರಣ ತತ್ತ್ವಗಳನ್ನು ಬೆಳೆಸಿದ್ದಾರೆ. ಒಂಭತ್ತನೆಯ ಪೀಠಾಧಿಪತಿಯಾಗಿ ನಾನು, ಅವರ ಪರಂಪರೆಯನ್ನು ಮುನ್ನಡೆಸಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಹದಿಮೂರನೆಯ ವಯಸ್ಸಿಗೆ ಬೀಳಗಿ ಕಲ್ಮಠದ ಪೀಠಾಧಿಪತಿಯಾದೆ. ಅಲ್ಲಿಂದ ರುದ್ರಾಕ್ಷಿಮಠದ ಪೀಠಾಧಿಪತಿಯಾದೆ ಇತ್ತೀಚೆಗೆ ಗದಗಿನ ತೋಂಟದಾರ್ಯಮಠದ ಪೀಠಾಧಿಪತಿಯಾಗಬೇಕಾಯಿತು. ಎಲ್ಲವೂ ಸೇವೆಗೆ ಸಂದ ಸ್ಥಾನಗಳು. ಬಯಸದೇ ಬಂದ ಭಾಗ್ಯ'

ನಾಗನೂರು ಶ್ರೀಮಠದ ಭಕ್ತರು ನನಗೆ ಅತ್ಯುತ್ತಮ ಸಹಕಾರ ನೀಡಿದ್ದಾರೆ. ನಾನು ಸಹ ಅಷ್ಟೇ ಅನ್ಯೋನ್ಯತೆಯಿಂದ ಸೇವೆ ಮಾಡಿದ್ದೇನೆ. ನಾಗನೂರು ಮಠವು ಗದಗ ತೋಂಟದಾರ್ಯ ಮಠಕ್ಕಿಂತ ಘನತೆಯಲ್ಲಿ ಕಡಿಮೆ ಇಲ್ಲ. ಡಾ. ಅಲ್ಲಮಪ್ರಭು ಸ್ವಾಮಿಗಳು ರುದ್ರಾಕ್ಷಿಮಠದ ಉತ್ತರೋತ್ತರ ಅಭಿವೃದ್ಧಿಗಾಗಿ ಶ್ರಮಿಸುತ್ತಾರೆಂಬ ಭರವಸೆ ನನಗಿದೆ. ಇದೊಂದು ಅಪೂರ್ವವಾದ ಗಳಿಗೆ ಶ್ರೀಮಠದ ಸಮಸ್ತ ಅಧಿಕಾರವನ್ನು ಅವರಿಗೆ ವಹಿಸಿಕೊಟ್ಟಿದ್ದೇನೆ' ಎಂದು ಮನದುಂಬಿ ಮಾತನಾಡಿದರು. ತಾವು ನಿರಾಭಾರಿಯಾದ ಬಗ್ಗೆ ಧನ್ಯತೆಯನ್ನು ವ್ಯಕ್ತಪಡಿಸಿದರು.

ಆಮೇಲೆ ನೂತನ ಶ್ರೀಗಳಾದ ಪೂಜ್ಯ ಡಾ. ಅಲ್ಲಮಪ್ರಭು ಸ್ವಾಮಿಗಳು ಮಾತನಾಡಿದರು. ಪೂಜ್ಯ ನಾಗನೂರು ಶ್ರೀಗಳ ಸಹವಾಸ ಸಿಕ್ಕಿದ್ದು ನನ್ನ ಭಾಗ್ಯ ಅವರ ಮಾರ್ಗದರ್ಶನದಲ್ಲಿಯೇ ಬೆಳೆದಿದ್ದೇನೆ. ಅವರ ಪರಂಪರೆಯನ್ನೇ ನಾನು ಮುನ್ನಡೆಸಿಕೊಂಡು ಹೋಗಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಹೂವಿನ ಜೊತೆಗೆ ದಾರವೂ ಸ್ವರ್ಗಕ್ಕೆ ಹೋಗುವಂತೆ ಅವರಿಂದ ನನಗೆ ದೊಡ್ಡ ಸ್ಥಾನ, ದೊಡ್ಡ ಜವಾಬ್ದಾರಿ ಸಿಕ್ಕಿದೆ. ಪೂಜ್ಯರ ಸೇವೆ ಮರೆಯಲಾರದ್ದು. ನಾನು ನಾಗನೂರು ಭಕ್ತರ ಭಕ್ತಿ ಕಂಡು ಬೆರಗಾಗಿದ್ದೇನೆ, ಮೂಕವಿಸ್ಮಿತನಾಗಿದ್ದೇನೆ. ಅಂಥವರ ಸೇವೆ ಮಾಡುವ ಅವಕಾಶ ಸಿಕ್ಕಿದ್ದು ನಿಜಕ್ಕೂ ಸಂತೋಷದ ಸಂಗತಿ ಎಂದು ನೂತನ ಶ್ರೀಗಳು ಹೃದಯ ತುಂಬಿದ ಕೃತಜ್ಞತೆಗಳನ್ನು ಅರ್ಪಿಸಿದರು.

ಇದೇ ಕಾರ್ಯಕ್ರಮ ಫೇಸಬುಕ್‌ನಲ್ಲಿ ನೇರ ಪ್ರಸಾರವಿತ್ತು. ಇದುವರೆಗೆ ಎರಡುವರೆ ಲಕ್ಷ ಜನರು ಫೇಸಬುಕ್‌ನಲ್ಲಿ ನೋಡಿದ್ದು ವಿಶೇಷ. ದೇಶ ವಿದೇಶಗಳಲ್ಲಿಯ ಭಕ್ತರು ಅದನ್ನು ನೋಡಿ ತಾವು ಕಾರ್ಯಕ್ರಮದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದಂಥ ಅನುಭವವನ್ನು ಹೊಂದಿರುವುದಾಗಿ ಸಂತೋಷದಿಂದ ತಿಳಿಸಿದ್ದಾರೆ. ಸತತ ಮೂವತ್ತೆರಡು ದಿನಗಳವರೆಗೂ ಪ್ರತಿದಿನ ಆಗಮಿಸಿದ ಹತ್ತು ಸಾವಿರಕ್ಕೂ ಮಿಕ್ಕಿದ ಸದ್ಭಕ್ತರಿಗೆ ನಾಗನೂರಿನ ಭಕ್ತರು ಶುಚಿ-ರುಚಿಯಾದ ಪ್ರಸಾದ ವ್ಯವಸ್ಥೆ ಮಾಡಿದ್ದರು. ಕಾರ್ಯಕ್ರಮಗಳೆಲ್ಲವೂ ಅಚ್ಚುಕಟ್ಟಾಗಿ ನಡೆದು ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಟ್ಟ ಸಮಾರಂಭವೆನಿಸಿತು.

■■

# ನಿಜಲಿಂಗ ಚಿಕ್ಕಯ್ಯ

● ಶ್ರೀ ಶ್ರೀಶೈಲ ಪ. ಕಳಸದ

ಹಿಮಾಲಯದ ದಕ್ಷಿಣಕ್ಕೆ ಕಾಶ್ಮೀರವೂ ಒಳಗೊಂಡಂತೆ ೧ಲಕ್ಷ ೨೫ಸಾವಿರ (ಸವಾಲಕ್ಷ) ಚಿಕ್ಕ ಚಿಕ್ಕ ಗುಡ್ಡಗಳಿರುವ ವಿಶಾಲವಾದ ಪರ್ವತ ಶ್ರೇಣಿ ಇದೆ. ಕಾಶ್ಮೀರ ಪ್ರದೇಶದಲ್ಲಿ ಮಾಂಡವ್ಯಪುರ ಎಂಬ ಒಂದು ಮಂಡಲ ಅಥವಾ ಚಿಕ್ಕ ರಾಜ್ಯವಿತ್ತು. ೧೨ನೇ ಶತಮಾನದಲ್ಲಿ ಮಹಾದೇವ ಭೂಪಾಲ ಎಂಬ ರಾಜ ಆಳುತ್ತಿದ್ದ. ಆತನ ರಾಣಿ ಮಹಾದೇವಿ. ಅವರು ವೀರಶೈವರು. ರಾಜ ವಿಲಾಸಿಯಾಗಿದ್ದ. ಆದರೂ ತಾನೊಬ್ಬ ಮಹಾ ಶಿವಭಕ್ತ, ಜಂಗಮಪ್ರೇಮಿ ಎನಿಸಿಕೊಳ್ಳಲು ಪ್ರತಿದಿನ ಸಾವಿರಾರು ಜಂಗಮರಿಗೆ ಅನ್ನದಾಸೋಹ ಮಾಡುತ್ತಿದ್ದ. ಅದಕ್ಕಾಗಿಯೇ ಆರು ಸಾವಿರ ಜಂಗಮರನ್ನು ಸಾಕಿಕೊಂಡಿದ್ದ. ಆ ಸಮಯ ನಮ್ಮ ದೇಶದಲ್ಲಿ ೫೬ ರಾಜ್ಯಗಳಿದ್ದವು. 'ನಮಸ್ತೆ ಶಾರದಾದೇವಿ ಕಾಶ್ಮೀರ ಪುರವಾಸಿನೀ ತ್ವಾಮಹಮ್ ಪ್ರಾರ್ಥಯೇ ನಿತ್ಯಮ್ ವಿದ್ಯಾಮ್ ಲಕ್ಷ್ಮೀಮ್ ಚ ದೇಹಿಮೆ' ವಿದ್ಯಾಧಿದೇವತೆಯಾದ ಸರಸ್ವತಿಯೇ ಕಾಶ್ಮೀರದಲ್ಲೆ ನೆಲೆಸಿದ್ದಾಳೆ. ಅಂತಲೇ ಅಲ್ಲಿ ವಿದ್ವಾಂಸರೇ ಹೆಚ್ಚು. ಕಾಶ್ಮೀರಿ ಪಂಡಿತರು ಬೇರೆ ಬೇರೆ ರಾಜ್ಯಗಳ ರಾಜಾಸ್ಥಾನಗಳಲ್ಲಿ ತಮ್ಮ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿ ರಾಜಮನ್ನಣೆಯನ್ನೂ ಬಿರುದು, ಬಾವಲಿಗಳನ್ನು ಪಡೆದುಕೊಂಡು ಹೋಗುತ್ತಿದ್ದರು. ಹಾಗೆಯೇ ಬೇರೆ ಬೇರೆ ರಾಜ್ಯಗಳ ವ್ಯಾಪಾರಸ್ಥರು ಕಾಶ್ಮೀರಕ್ಕೆ ಹೋಗಿ ವ್ಯಾಪಾರ ಮಾಡಿಕೊಂಡು ಬರುತ್ತಿದ್ದರು.

ಆ ಕಾಲದಲ್ಲಿ ನಮ್ಮ ಭಾಗದಲ್ಲಿ 'ಕಲ್ಯಾಣ'ವೆಂಬ ರಾಜ್ಯವಿತ್ತು. ಕಲಚೂರಿ ವಂಶದ ಬಿಜ್ಜಳ ಎಂಬವನು ಅದರ ರಾಜನಾಗಿದ್ದ. ಜಗನ್ಮಾನ್ಯ ಬಸವೇಶ್ವರರು ಪ್ರಧಾನ ಮಂತ್ರಿಗಳಾಗಿದ್ದರು. ಅವರು ಪುರೋಹಿತಶಾಹಿಯ ವಿರುದ್ಧ ಬಂಡೆದ್ದು, ಸರ್ವ ಸಮಾನತೆಯ ತಳಹದಿಯ ಮೇಲೆ ಶರಣ ತತ್ವಗಳನ್ನು ರೂಪಿಸಿದ್ದರು. ಅವುಗಳ ಪ್ರಕಾರ ಸಮಾಜದಲ್ಲಿ ಮೇಲು-ಕೀಳು, ಬಡವ-ಬಲ್ಲಿದ, ಉಚ್ಚ-ನೀಚ, ಸ್ತ್ರೀ-ಪುರುಷ ಎಂಬ ಭೇದ ಭಾವಗಳಿಗೆ ಆಸ್ಪದವಿರಲಿಲ್ಲ. ಇಂಥ ಅಮೂಲ್ಯವಾದ ತತ್ವಗಳ ಪ್ರಚಾರಕ್ಕೆ ಬಸವೇಶ್ವರರು ತಮ್ಮ ಅನುಯಾಯಿಗಳನ್ನು ಕಳುಹಿಸುತ್ತಿದ್ದರು. ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ ಮುಂತಾದವರನ್ನು ಮುಂದು ಮಾಡಿಕೊಂಡು 'ಅನುಭವ ಮಂಟಪ' ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಹಿರಿಯ ಶರಣ ತತ್ವಜ್ಞಾನಿ ಅಲ್ಲಮಪ್ರಭುಗಳನ್ನು ಆ ಮಂಟಪಕ್ಕೆ ಅಧ್ಯಕ್ಷರನ್ನಾಗಿ ಮಾಡಿದರು. ಸ್ವತಃ ಅಲ್ಲಮಪ್ರಭುಗಳೇ ಮುಂದಾಗಿ ಶರಣತತ್ವ ಪ್ರಚಾರಕ್ಕೆ ಹೊರಟರು. ಹಿಮಾಲಯ, ಕಾಶ್ಮೀರದವರೆಗೂ ಹೋಗಿಬಂದರು. ಬಸವೇಶ್ವರರೂ ವ್ಯಾಪಾರಿ ಸೆಟ್ಟಿಯಂತೆ ವೇಷ ಧರಿಸಿ ಕಾಶ್ಮೀರ ಪ್ರದೇಶದಲ್ಲೆಲ್ಲ ಅಲೆದಾಡುತ್ತ ಮಾಂಡವ್ಯಪುರಕ್ಕೂ ಹೋದರು. ಅಲ್ಲಿಯ ಜಂಗಮರ ಕೈದಿಯಂಥ ಪರಿಸ್ಥಿತಿಯನ್ನು ಕಂಡು ಮರುಗಿದರು. ಆ ಜಂಗಮರನ್ನು ಗುಂಪು ಗುಂಪಾಗಿ ಸೇರಿಸಿ ಶರಣತತ್ವಗಳನ್ನು ಉಪದೇಶಿಸಿದರು. ರಾಜಾ ಮಹಾದೇವನ ಕಣ್ಗಾವಲಿನಲ್ಲಿದ್ದ ಆರು ಸಾವಿರ ಜಂಗಮರಲ್ಲಿ ಎಷ್ಟೋ ಜನ ಬಸವಣ್ಣನವರ ಜೊತೆಗೆ ಕಲ್ಯಾಣಕ್ಕೆ ಹೊರಟರು. ರಾಜರ ಆಜ್ಞೆಯನ್ನು ಮೀರುವದು ಸಣ್ಣ ತಪ್ಪಲ್ಲ. ಆದುದರಿಂದ ಚಿಕ್ಕ ಚಿಕ್ಕ ಗುಂಪುಗಳನ್ನಾಗಿ ಮಾಡಿ ಒಂದೊಂದಾಗಿ ಕಲ್ಯಾಣದ ಕಡೆಗೆ ರವಾನಿಸಿದರು.

ರಾಜರ ದಾಸೋಹಕ್ಕೆ ಜಂಗಮರು ದಿನೇ ದಿನೆ ಕಡಿಮೆಯಾಗುತ್ತಿರುವುದು ಮಹಾದೇವ ಭೂಪಾಲನ ಲಕ್ಷ್ಯಕ್ಕೆ ಬಂತು. ವಿಚಾರಿಸಿದಾಗ ಕರ್ನಾಟಕದವ ಯಾರೋ ಬಸವೇಶ್ವರ ಅಂತೆ ಅವನ ಬೋಧನೆಗೆ ಮನಸೋತು ದಕ್ಷಿಣ ಭಾರತಕ್ಕೆ ಹೋದರೆಂದು ತಿಳಿದುಬಂತು. ಆಗ ಭೂಪಾಲ-ಆ ಬಸವೇಶ ಎಲ್ಲಿದ್ದರೂ ಹಿಡಿದು ತನ್ನಿರಿ ಎಂದು ಭಟರಿಗೆ ಆಜ್ಞಾಪಿಸಿದ. ಆದರೆ ಆಗಲೇ ಬಸವೇಶ್ವರರು ಕಲ್ಯಾಣ ಸೇರಿದ್ದರು. ಆಗ ಭೂಪಾಲ ಮತ್ತಷ್ಟು ರೋಷಗೊಂಡು ತನಗೆ ನಂಬಿಗಸ್ತರಾಗಿದ್ದ ಚೋರ ಚಿಕ್ಕಯ್ಯ, ನಿಜಲಿಂಗ ಚಿಕ್ಕಯ್ಯ ಎಂಬ ಇಬ್ಬರು ರಾಜಭಟರನ್ನು ಕರೆದು-ಆ ಚೋರ ಬಸವ ಕರ್ನಾಟಕದ

ಶ್ರೀಶೈಲ ಪ. ಕಳಸದ, ಬಸವನಗರ, ಹಿರೇಬಾಗೇವಾಡಿ ಮೊ-೯೯೦೨೨೦೫೫೫೦

ಕಲ್ಯಾಣದವನಂತೆ ನೀವು ಮಾರುವೇಷದಿಂದ ಹೋಗಿ ಆ ಬಸವನನ್ನು ಕೊಂದು ನಮ್ಮ ಜಂಗಮರನ್ನು ಕರೆದುಕೊಂಡು ಬನ್ನಿರಿ ಎಂದು ಕಟ್ಟಪ್ಪಣೆ ಮಾಡಿದ.

ಆ ಭಟರು ಕಲ್ಯಾಣಕ್ಕೆ ಬಂದು ಬಸವಣ್ಣನವರ ಮಹಾಮನೆಯನ್ನು ಹೊಕ್ಕರು. ಶರಣ ಸಂದೋಹದಲ್ಲಿ ಬಸವಣ್ಣ ಯಾರು ಎಂಬುದನ್ನು ಪತ್ತೆ ಹಚ್ಚಿದರು. ಅಲ್ಲಿ ಪ್ರತಿಯೊಬ್ಬರ ಕೊರಳಲ್ಲಿ ಇಷ್ಟಲಿಂಗ, ರುದ್ರಾಕ್ಷಿಸರ, ನೊಸಲಿಗೆ ವಿಭೂತಿ, ಮೈ ಮೇಲೆ ಶುಭ್ರ ವಸ್ತ್ರ ಇರುವದನ್ನು ನೋಡಿ, ತಾವೂ ಕಲ್ಯಾಣದ ಜಂಗಮರಂತೆ ವೇಷಧರಿಸಿದರು. ಅಲ್ಲಿಯೇ ದೊರೆತ ಎರಡು ಚಿಕ್ಕ ಚಿಕ್ಕ ಬದನೇಕಾಯಿಗಳನ್ನು ಶುಭ್ರವಸ್ತ್ರದಲ್ಲಿಟ್ಟು ಕಟ್ಟಿ ತಮ್ಮ ಕೊರಳಲ್ಲಿ ಧರಿಸಿದರು. ಬಸವಣ್ಣನವರನ್ನು ಕೊಲ್ಲಲಿಕ್ಕೆಂದು ತಂದಿದ್ದ ಚಿಕ್ಕ ಚಿಕ್ಕ ಕಠಾರಿಗಳನ್ನು ವಸ್ತ್ರದಲ್ಲಿ ಮುಚ್ಚಿಟ್ಟುಕೊಂಡು, ಬಸವಣ್ಣನವರ ಸಮೀಪಕ್ಕೆ ಹೋಗಲು ಅವಕಾಶಕ್ಕಾಗಿ ಕಾಯುತ್ತ ನಿಂತರು. ಅಷ್ಟರಲ್ಲಿ ಅಣ್ಣನವರೇ ಅವರ ಸಮೀಪಕ್ಕೆ ಬಂದರು. ಅವರ ಪರುಷ ದೃಷ್ಟಿ ಭಟರ ಮೇಲೆ ಬೀಳುತ್ತಲೇ ಅವರ ದುಷ್ಟ ಭಾವನೆಗಳೆಲ್ಲ ತೊಲಗಿ ಶಿವಭಾವಾಸನ್ನವಾದವು. ಅವರ ಮನಸ್ಸಿನಲ್ಲಿ ಅದ್ಭುತ ಪರಿವರ್ತನೆಯಾಯಿತು. ತಮಗೆ ತಾವೇ ಚಕಿತರಾಗಿ ಬಸವಣ್ಣನವರಿಗೆ ದೀರ್ಘದಂಡ ನಮಸ್ಕಾರ ಹಾಕಿದರು. ತಾವು ಕಾಶ್ಮೀರದ ಮಾಂಡವ್ಯಪುರದವರೆಂದು ಹೇಳಿ, ರಾಜಾಜ್ಞೆಯಂತೆ ತಮ್ಮನ್ನು ಕೊಲ್ಲಲು ಬಂದಿದ್ದೆವೆಂದೂ ಹೇಳಿದರು. ಅದಕ್ಕಾಗಿ ಕ್ಷಮೆ ಬೇಡಿದರು. ಅಣ್ಣನವರು– ಆಯಿತು. ನೀವು ನಿಮ್ಮ ರಾಜಾಜ್ಞೆಯನ್ನು ಪಾಲಿಸಿರಿ. ಈಗ ಮೊದಲು ಲಿಂಗಪೂಜೆ ಮಾಡಿಕೊಂಡು ಭೋಜನ ಮಾಡಿರಿ ಎಂದು ಹೇಳಿದರು. ಇಬ್ಬರೂ ಚಿಕ್ಕಯ್ಯಗಳು ಲಿಂಗಪೂಜೆ ಮಾಡಿಕೊಳ್ಳಲು ಲಿಂಗಗಳನ್ನು ತೆಗೆದರು. ಅವರಿಗೊಂದು ಆಶ್ಚರ್ಯ ಕಾದಿತ್ತು. ವಸ್ತ್ರದಲ್ಲಿ ಕಟ್ಟಿದ್ದ ಬದನೇಕಾಯಿಗಳು ಇಷ್ಟಲಿಂಗಗಳಾಗಿ ಮಾರ್ಪಟ್ಟಿದ್ದವು ! ಈ ವಿಷಯವನ್ನು ಅಣ್ಣನವರಿಗೆ ತಿಳಿಸಿ ತಮಗೆ ವಿಧ್ಯುಕ್ತವಾಗಿ ಲಿಂಗದೀಕ್ಷೆ ನೀಡಬೇಕೆಂದು ಬೇಡಿಕೊಂಡರು. ಅದಕ್ಕೆ ಬಸವೇಶ್ವರರು ಈಗ ನಿಮ್ಮ ಕೊರಳಲ್ಲಿದ್ದ ಲಿಂಗಗಳನ್ನೇ ಪೂಜಿಸಿರಿ ಎಂದು ಹೇಳಿದರು. ಅದೇ ಪ್ರಕಾರ ಚಿಕ್ಕಯ್ಯಗಳು ಲಿಂಗಪೂಜೆ ಮಾಡಿಕೊಂಡರು. ಅವರಿಗೆ ಅತ್ಯಾನಂದವಾಯಿತು. ತಮ್ಮ ರಾಜನ ಆಜ್ಞೆಯನ್ನು ಮರೆತೇ ಬಿಟ್ಟರು. ಕಲ್ಯಾಣದಲ್ಲೇ ನೆಲೆ ನಿಂತರು. ಉದರಂಭರಣಕ್ಕಾಗಿ ಯಾವುದಾದರೂ ಕಾಯಕ ಮಾಡಲೇಬೇಕು. ಅಣ್ಣನವರ ಸಲಹೆಯಂತೆ ನಿಜಲಿಂಗ ಚಿಕ್ಕಯ್ಯ ಅಡವಿಯಿಂದ ತಾಡ ಓಲೆಯ ಎಲೆಗಳನ್ನು ತಂದು ಬಿಚ್ಚೋಲೆಗಳನ್ನು ಮಾಡಿ ಮಾರತೊಡಗಿದನು. ಅದರಿಂದ ಬಂದ ಪ್ರಾಪ್ತಿಯಲ್ಲಿ ಕೆಲ ಭಾಗವನ್ನು ದಾಸೋಹಕ್ಕೆ ಸಲ್ಲಿಸಿ ಉಳಿದಿದ್ದರಲ್ಲಿ ಜೀವನ ಸಾಗಿಸತೊಡಗಿದನು. ಈ ಮಧ್ಯೆ ಚೋರ ಚಿಕ್ಕಯ್ಯ ಎತ್ತ ಹೋದನೋ ಗೊತ್ತೇ ಆಗಲಿಲ್ಲ.

ನಿಜಲಿಂಗ ಚಿಕ್ಕಯ್ಯ ದಿನಾಲು ಅನುಭವ ಮಂಟಪಕ್ಕೆ ಹೋಗಿ, ಅಲ್ಲಿ ನಡೆಯುವ ಗೋಷ್ಠಿಗಳಲ್ಲಿ ಹಾಗೂ ಇತರ ಕೈಂಕರ್ಯಗಳಲ್ಲಿ ಭಾಗವಹಿಸತೊಡಗಿದನು ಅದರಿಂದ ಅವನಲ್ಲಿ ಶಿವಾನುಭವಜ್ಞಾನ ತಂತಾನೇ ಉಂಟಾಯಿತು. ಅಲ್ಲಿ ಶರಣ–ಶರಣೆಯರು ತಮ್ಮ ತಮ್ಮ ಅನಿಸಿಕೆ ಅನುಭವಗಳನ್ನು ವಚನ ರೂಪದಲ್ಲಿ ಪ್ರಸ್ತುತ ಪಡಿಸುತ್ತಿದ್ದರು. ಚಿಕ್ಕಯ್ಯನೂ ವಚನಗಳನ್ನು ರಚಿಸತೊಡಗಿದ. ಈತನ ಅಂಕಿತ 'ವುಳಿಯುಮೇಶ್ವರ'

**ಅಂದಲಿ ಕಲ್ಯಾಣದಲಿ ಹುಸಿಯನೇ ದಿಟ ಮಾಡಿ**
**ಬದನೇಕಾಯಿಯ ಲಿಂಗವ ಮಾಡಿ**
**ಸಲಹನೇ ನಮ್ಮ ಬಸವೇಶ್ವರನು?**
**ಇವರೆಲ್ಲರೂ ನಿಮ್ಮ ಭಜಿಸಿ ನಿಮ್ಮಂತೆ ಆದರು**
**ನಾನು ನಿಮಗೇನು ಮಾಡಿಹೆನಯ್ಯ ವುಳಿಯುಮೇಶ್ವರ**

ಚಿಕ್ಕಯ್ಯ ತನ್ನ ಅನುಭವಗಳನ್ನು ವಚನದ ಮೂಲಕ ಹೇಳುವಾಗ ಬದನೇಕಾಯಿ ಲಿಂಗವಾದ ಪವಾಡವನ್ನು ಉಲ್ಲೇಖಿಸಿದ್ದಾನೆ. ಮತ್ತು ಆ ಲಿಂಗವನ್ನು ಕುರಿತು ಪ್ರಾರ್ಥಿಸುತ್ತಾನೆ:

**ಎನ್ನ ಮನವ ಮಂಚವ ಮಾಡಿ**
**ತನುವ ಪಚ್ಚಡಿಸುವೆ ಬಾರಯ್ಯ**
**ಎನ್ನ ಶಿವಲಿಂಗವೇ ಬಾರಯ್ಯ**
**ಎನ್ನ ಭಕ್ತವತ್ಸಲನೇ ಬಾರಯ್ಯ**
**ಎನ್ನ ಅಂತರಂಗದೊಳಗಿರು ಬಾರಯ್ಯ**
**ಎನ್ನ ಬಹಿರಂಗದೊಳಗಿರು ಬಾರಯ್ಯ**
**ಓಂ ನಮಃಶಿವಾಯ ಎಂದು ಕರೆವೆನಯ್ಯ**
**ವುಳಿಯುಮೇಶ್ವರಾ ನೀ ಬಾರಯ್ಯ**

ನಿಜಲಿಂಗ ಚಿಕ್ಕಯ್ಯ ಪ್ರತಿದಿನ ಅನುಭವ ಮಂಟಪಕ್ಕೆ ಹೋಗುತ್ತಿದ್ದರೂ ಶಿವಾನುಭವದ ನಿಲುವನ್ನು ಇನ್ನೂ ತಲುಪದ್ದರಿಂದ ಅದರ ಹಂಬಲ ಹೆಚ್ಚಿತು. ತಾನು ಶಿವಾನುಭವವನ್ನು ಅರಿಯದ್ದರಿಂದ ಹಿರಿಯರಿಂದ ಅದನ್ನು ಅರಿಯಬೇಕೆಂದು ಬಸವಣ್ಣ, ಅಲ್ಲಮಪ್ರಭು, ಮಡಿವಾಳ

ಮಾಚಿದೇವ ಮೊದಲಾದ ಶರಣ ಗಣಂಗಳಿಗೆ ತಾನು ಅನುಭವ ಮಂಟಪಕ್ಕೆ ಬಂದಿದ್ದ ವಾರ್ತೆಯನ್ನ ಕೈಲಾಸದ ಗಣಂಗಳ ಸಾಕ್ಷಿಯಾಗಿ ಅರುಹಿದ್ದಾನೆ. ಚಿಕ್ಕಯ್ಯ ಲೌಕಿಕ ಅನುಭವಿಯಾಗಿ ಶಿವಾನುಭವ ಪಡೆಯಲು 'ಶಿವಾಯ ನಮಃ' ಮಂತ್ರ ಜಪದಲ್ಲಿ ಮಗ್ನನಾಗುವನು. ಅನೇಕ ಸಲ ಕಲ್ಯಾಣದ ಹೊರಗೆ ಏಕಾಂತ ಪ್ರಶಾಂತ ಸ್ಥಳದಲ್ಲಿ ಕುಳಿತು ಮಂತ್ರ ಸಾಧನೆ ಮಾಡುತ್ತ ಪ್ರಾಣಲಿಂಗಿ ಸ್ಥಲವನ್ನು ತಲುಪಿದನು:

**ಆದಿನಾಥ, ಬೃಂಗಿನಾಥ, ವೀರಭದ್ರ, ಗಣಂಗಳೆಲ್ಲ ನೀವು ಹೇಳಿರೆ, ನಿಮ್ಮ ಲೆಂಕ ಬಂದಿದ್ದಾನೆಂದು ನೀವು ಹೇಳಿರೆ, ನಿಮ್ಮ ದಾಸ ಬಂದಿದ್ದಾನೆಂದು ನೀವು ಹೇಳಿರೆ, ಎನ್ನ ದೇವ ವುಳಿಯುಮೇಶ ಪಿಗದ ಚಿಕ್ಕ ಬಂದಿದ್ದಾನೆಂದು ನೀವು ಹೇಳಿರೆ**

ಒಂದು ದಿನ ಸಾಯಂಕಾಲ ಚಿಕ್ಕಯ್ಯ ರಸ್ತೆಯಲ್ಲಿ ಹೋಗುತ್ತಿರುವಾಗ ಗಂಗಯ್ಯನೆಂಬ ಶಿವಭಕ್ತ ತಳವಾರ ಚಿಕ್ಕಯ್ಯನಿಗೆ ಶರಣಾರ್ಥಿ ಎಂದು ನಮಿಸಿ, ಇಂದು ನಮ್ಮ ಮನೆಯಲ್ಲಿ ಭೋಜನ ಮಾಡಿಕೊಂಡು ಹೋಗಬಹುದು; ಬನ್ನಿರಿ ಎಂದು ಕರೆದನು. ಚಿಕ್ಕಯ್ಯ ಸಂತೋಷದಿಂದ ಒಪ್ಪಿದನು. ಗಂಗಯ್ಯ ಮೊದಲು ಚಿಕ್ಕಯ್ಯನಿಗೆ ಲಿಂಗಪೂಜೆಗೆ ಅನುವು ಮಾಡಿಕೊಟ್ಟನು. ನಂತರ ಇನ್ನು ಪ್ರಸಾದ ಮಾಡಿಸಬೇಕೆನ್ನುವಷ್ಟರಲ್ಲಿ ರಾಜಾಬಿಜ್ಜಳನ ಕರೆ ಬಂತು. ಬಿಜ್ಜಳನ ಅರಮನೆಗೆ ಕಳ್ಳರು ಕನ್ನ ಹಾಕಿ ಅಪಾರ ದ್ರವ್ಯವನ್ನು ದೋಚಿಕೊಂಡು ಹೋಗಿದ್ದರು. ಅದರ ಬಗ್ಗೆ ಮಾತನಾಡಲು ರಾಜ ಗಂಗಯ್ಯನನ್ನು ಕರೆಸಿದ. ಗಂಗಯ್ಯ ಚಿಕ್ಕಯ್ಯನಿಗೆ– ಸ್ವಾಮಿ, ಏನೋ ಅವಸರದ ಕೆಲಸವಂತೆ ರಾಜರು ತುರ್ತಾಗಿ ನನ್ನನ್ನು ಕರೆಕಳುಹಿಸಿದ್ದಾರೆ. ಈಗಾಗಲೆ ತಡರಾತ್ರಿಯಾಗಿದೆ. ಈ ದಿನ ನಮ್ಮ ಮನೆಯಲ್ಲೇ ಉಳಿಯಬೇಕೆಂದು ಆಗ್ರಹದಿಂದ ಬಿನ್ನವಿಸಿಕೊಂಡನು. ಚಿಕ್ಕಯ್ಯ ಒಪ್ಪಿಕೊಂಡನು. ಗಂಗಯ್ಯ ಅರಮನೆಗೆ ಧಾವಿಸಿದನು.

ಗಂಗಯ್ಯ ಸಜ್ಜನ, ಭಕ್ತ, ಹೃದಯವಂತ. ಆತನ ಪತ್ನಿ ಚನ್ನಾಜಿ ರೂಪವತಿ; ಆದರೆ ಜಾರಿಣಿ. ಆಕೆ ಮಧ್ಯರಾತ್ರಿಯಲ್ಲಿ ಚಿಕ್ಕಯ್ಯನನ್ನು ವ್ಯಭಿಚಾರಕ್ಕೆ ಕರೆದಳು; ಚಿಕ್ಕಯ್ಯ ಒಪ್ಪಿಕೊಳ್ಳಲಿಲ್ಲ. ಚನ್ನಾಜಿ ಬಲವಂತ ಮಾಡಿದಳು. ಚಿಕ್ಕಯ್ಯ–ಅಂತಹ ಪಾಪದ ಕೆಲಸ ನನ್ನಿಂದಾಗದು. ನೀನು ನನಗೆ ತಾಯಿಯ ಸಮಾನ ಎಂದು ತಿರಸ್ಕರಿಸಿದ. ಅಷ್ಟೇಅಲ್ಲ ನಾನು ಇಲ್ಲಿ ಇರಲೇಬಾರದು ಎಂದು ಹೊರಟು ನಿಂತ. ಚನ್ನಾಜಿ ನಿರಾಶಳಾಗಿ ಆತನ ಮೇಲೆ ಕಿಡಿ ಕಾರಿದಳು. ತನ್ನ ಲಿಂಗ ಮತ್ತು ಕೆಲವು ಆಭರಣಗಳನ್ನು ಚಿಕ್ಕಯ್ಯನಿಗೆ ಕಾಣದಂತೆ ಆತನ ಹಡಪದಲ್ಲಿ ಇರಿಸಿದಳು. ಚಿಕ್ಕಯ್ಯ ತನ್ನ ಹಡಪವನ್ನು ತೆಗೆದುಕೊಂಡು ಹೊರಟುಬಿಟ್ಟ. ಅಲ್ಲಿಯೇ ಹತ್ತಿರದಲ್ಲಿದ್ದ ಐನಾಳಿ ಎಂಬ ಗ್ರಾಮಕ್ಕೆ ಹೋದ. ಎಲ್ಲೋ ಮಲಗಿ, ನಸುಕಿನಲ್ಲಿಯೇ ಎದ್ದು ಒಂದು ಹೂದೋಟಕ್ಕೆ ಹೋದ. ಅಲ್ಲಿ ಲಿಂಗಪೂಜೆ ಮಾಡಿಕೊಂಡು ಧ್ಯಾನ ಮಗ್ನನಾದ.

ಬೆಳಗಿನ ಜಾವಕ್ಕೆ ಗಂಗಯ್ಯ ಮನೆಗೆ ಬಂದ. ಚಿಕ್ಕಯ್ಯ ಕಾಣದಿರಲು ಪತ್ನಿಯನ್ನು ವಿಚಾರಿಸಿದ. ಆಕೆ–ಆತ ಬಹಳ ಕೆಟ್ಟ ಮನುಷ್ಯ ನನ್ನ ಮೈ ಮುಟ್ಟಲು ಬಂದ. ನಾನು ಒಪ್ಪಲಿಲ್ಲ. ಆಗ ಬಲಾತ್ಕಾರ ಮಾಡಿ ನನ್ನ ಲಿಂಗ ಮತ್ತು ಆಭರಣಗಳನ್ನು ಕಿತ್ತುಕೊಂಡು ಹೋದ ಎಂದು ಹೇಳಿದಳು. ಆದರೆ ಗಂಗಯ್ಯ– ಚಿಕ್ಕಯ್ಯ ಅಂಥ ಮನುಷ್ಯನೇ ಅಲ್ಲ. ಸಜ್ಜನ, ಶರಣ. ಆತನ ಮೇಲೆ ಅಪವಾದ ಹೊರೆಸುವದು ಸರಿಯಲ್ಲ ಎಂದ. ಚನ್ನಾಜಿ ತನ್ನ ಪತಿಯ ಧೋರಣೆ ತಿಳಿದು, ತಾನು ಚಿಕ್ಕಯ್ಯನನ್ನು ಹಾಗೆಯೇ ಬಿಡುವದಿಲ್ಲ ಎಂದು ರಾಜಾ ಬಿಜ್ಜಳನ ಬಳಿಗೆ ದೂರು ಕೊಟ್ಟಳು–ಚಿಕ್ಕಯ್ಯ ಎಂಬವ ರಾತ್ರೆ ನಮ್ಮ ಮನೆಯಲ್ಲೇ ಉಳಿದಿದ್ದ. ತಾವು ನನ್ನ ಗಂಡನನ್ನು ಕರೆಸಿಕೊಂಡಿದ್ದಿರಿ. ಆ ದುಷ್ಟ ಉಳಿದಿದ್ದ. ರಾತ್ರೆ ನನ್ನ ಮೇಲೆ ಬಲಾತ್ಕಾರ ಮಾಡಿದ. ನಾನು ಒಪ್ಪಲಿಲ್ಲ. ಆಗ ನನ್ನ ಲಿಂಗ ಮತ್ತು ಆಭರಣಗಳನ್ನು ಕಿತ್ತುಕೊಂಡು ಹೋದ. ದಯವಿಟ್ಟು ಆತನನ್ನು ಹುಡುಕಿಸಿ ನನ್ನ ವಸ್ತುಗಳನ್ನು ನನಗೆ ಕೊಡಿಸಿರಿ. ಅವನಿಗೆ ತಕ್ಕ ಶಿಕ್ಷೆಯನ್ನು ಕೊಡಬೇಕೆಂದು ಅಂಗಲಾಚಿ ಬೇಡಿಕೊಂಡಳು. ಆಗ ಬಿಜ್ಜಳ– ಆ ಚಿಕ್ಕಯ್ಯ ಎಲ್ಲಿದ್ದರೂ ಹುಡುಕಿ, ಹಿಡಿದು ತನ್ನಿರಿ ಎಂದು ಚಾರರಿಗೆ ಆಜ್ಞೆ ಮಾಡಿದನು. ಆ ಚಾರರು, ಚಿಕ್ಕಯ್ಯ ಇರಬಹುದಾದ ಸ್ಥಳಗಳಲ್ಲಿ ವಿಚಾರಿಸಿದರು. ಚಿಕ್ಕಯ್ಯ ಪಟ್ಟಣದ ಹೊರಗೆ ಹೂದೋಟದಲ್ಲಿ ಧ್ಯಾನ ಮಗ್ನನಾಗಿ ಕುಳಿತಿರುವುದು ತಿಳಿಯಿತು. ಚಾರರು ತಡ ಮಾಡದೆ ಚಿಕ್ಕಯ್ಯನಿದ್ದಲ್ಲಿಗೆ ಹೋಗಿ ಆತನನ್ನು ಹೆಡಮುರಿಗೆ ಕಟ್ಟಿ ಎಳೆದು ತಂದು ರಾಜರ ಮುಂದೆ ನಿಲ್ಲಿಸಿದರು. ಚನ್ನಾಜಿಯೂ ಬಂದಳು. ಚಿಕ್ಕಯ್ಯನನ್ನು ಶೋಧಿಸಿದರು. ಅವನ ಚಿಕ್ಕ ಪಟ್ಟಿಗೆಯಲ್ಲಿ ಲಿಂಗ ಮತ್ತು ಆಭರಣಗಳು ಇದ್ದುದು ತಿಳಿಯಿತು. ಅವುಗಳನ್ನು ಚನ್ನಾಜಿಗೆ ತೋರಿಸಿ ವಿಚಾರಿಸಿದಾಗ ಆಕೆ, ಇವು ನನ್ನವೇ ಅಂದಳು. ಬಿಜ್ಜಳ ಚನ್ನಯ್ಯನಿಗೆ ಇಂಥ ದುಷ್ಕೃತ್ಯವನ್ನು ಏಕೆ ಮಾಡಿದೆ ಎಂದು ಕೇಳಿದ. ಚಿಕ್ಕಯ್ಯ ತನಗೇನೂ ಗೊತ್ತಿಲ್ಲವೆಂದನು. ಅದರಿಂದ ಚಿಕ್ಕಯ್ಯ ಕಳ್ಳ ಮತ್ತು ವ್ಯಭಿಚಾರಿ ಎನ್ನುವದು ಸಾಬೀತಾಯಿತು. ಆಗ ರಾಜನು ಈ ನೀಚನ ಶಿರಚ್ಛೇದನ ಮಾಡಿರೆಂದು ಆಜ್ಞಾಪಿಸಿದನು.

ರಾಜನ ಆಜ್ಞೆಯಂತೆ ಚಿಕ್ಕಯ್ಯನ ಕತ್ತು ಕತ್ತರಿಸಿದರು. ಚಿಕ್ಕಯ್ಯನ ಶಿರಸ್ಸು ಮೇಲೆ ಎಗರಿದರೂ 'ಶಿವಾಯ ನಮಃ' ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತಲೇಇತ್ತು. ಕೆಳಗೆ ಬಿದ್ದ ಧಡವು ಕೈ ಬೆರಳುಗಳಿಂದ ರುದ್ರಾಕ್ಷಿ ಸರವನ್ನು ತಿರುವುತ್ತಲೇ ಇತ್ತು. ಅದನ್ನು ಕಂಡ ಚಾರರು ಬೆರಗಾಗಿ, ಸೋಜಿಗದ ಸಂಗತಿಯನ್ನು ರಾಜನಿಗೆ ತಿಳಿಸಿದರು. ಆಗ ಅಲ್ಲಿಯೇ ಇದ್ದ ಬಸವೇಶ್ವರರು– ಚಿಕ್ಕಯ್ಯ ಶ್ರೇಷ್ಠ ಶರಣ, ಶಿವಾನುಭವಿ ಇಂಥವನನ್ನು ಕೊಲ್ಲಿಸಿದ್ದು ತಪ್ಪು; ಪಾಪದ ಕೆಲಸ ಎಂದರು. ರಾಜಾ ಬಿಜ್ಜಳನು–ಚಿಕ್ಕಯ್ಯ ಲಿಂಗ ಹಾಗೂ ಆಭರಣಗಳನ್ನು ಕದ್ದಿದ್ದಾನೆ. ಮುದ್ದೇಮಾಲು ಸಹಿತ ಸಿಕ್ಕಿಬಿದ್ದಿದ್ದಾನೆ. ಅವನು ಅಪರಾಧಿ. ಅದಕ್ಕೆ ತಕ್ಕ ಶಿಕ್ಷೆ ವಿಧಿಸಿದ್ದೇನೆ ಎಂದನು. ಆಗ ಬಸವಣ್ಣನವರು–ಚಿಕ್ಕಯ್ಯ ಸತ್ತಿಲ್ಲ. ಕತ್ತು ಕೊಯ್ದರೂ ರುಂಡ ಮುಂಡ ಬೇರ್ಪಟ್ಟರೂ ಮಂತ್ರ ಜಪ ಮಾಡುತ್ತಿದ್ದಾನೆಂದರೆ ಆತ ಸಾಮಾನ್ಯನಲ್ಲ. ಬನ್ನಿರಿ ಆ ಪುಣ್ಯಾತ್ಮನ ಲೀಲೆಯನ್ನು ಕಣ್ಣಾರೆ ಕಂಡು ಧನ್ಯರಾಗೋಣ ಎಂದು ರಾಜಾ ಬಿಜ್ಜಳನನ್ನೂ ಕರೆದುಕೊಂಡು ಚಿಕ್ಕಯ್ಯ ಬಿದ್ದಿರುವ ವಧಾಸ್ಥಾನಕ್ಕೆ ಹೋದರು. ಅಲ್ಲಿ ಚಿಕ್ಕಯ್ಯನ ಶಿರಸ್ಸು ಧಡದಿಂದ ದೂರ ಬಿದ್ದಿದ್ದರೂ ಜಪ ಮಾಡುತ್ತಿರುವದನ್ನು ಮತ್ತು ಕೈಯಿಂದ ರುದ್ರಾಕ್ಷಿ ಮಾಲೆಯನ್ನು ತರುವುತ್ತಿರುವುದನ್ನೂ ಕಂಡು ಬಿಜ್ಜಳರಾಜ ಬೆಪ್ಪಾದನು. ಹೌದು, ಚಿಕ್ಕಯ್ಯ ಸಾಮಾನ್ಯನಲ್ಲ. ಶ್ರೇಷ್ಠ ಶಿವಾನುಭವಿ, ಮಂತ್ರಶರೀರಿ ಇಂಥವನಿಗೆ ಶಿಕ್ಷೆ ಕೊಟ್ಟು ತಪ್ಪು ಮಾಡಿದೆ ಎಂದು ಪಶ್ಚಾತಾಪ ಪಟ್ಟನು. ಆಗ ಬಸವೇಶ್ವರರು ಶಿವಗಣಂಗಳನು ಸ್ಮರಿಸುತ್ತ ಚಿಕ್ಕಯ್ಯನ ಶಿರಸ್ಸನ್ನು ಮುಂಡಕ್ಕೆ ಹೊಂದಿಸಿಟ್ಟರು. ತಕ್ಷಣ ಚಿಕ್ಕಯ್ಯ ನಿದ್ದೆಯಿಂದ ಎದ್ದವರಂತೆ ಎದ್ದು ಕುಳಿತನು.

ನಿಜಲಿಂಗ ಚಿಕ್ಕಯ್ಯ ಸಾಮಾನ್ಯರ ಕಣ್ಣಿಗೆ ಓರ್ವ ಬಿಚ್ಚೋಲೆ ಕಾಯಕದ ಸಾಮಾನ್ಯ ಮನುಷ್ಯನಂತೆ ಕಂಡರೂ ಅಂತರಂಗದಲ್ಲಿ ಶಿವಾನುಭವಿ, ಮಂತ್ರಸಿದ್ಧಿ ಪುರುಷ, ಶ್ರೇಷ್ಠ ಶರಣನಾಗಿದ್ದ. ಆತ ತನ್ನ ಕಾಯಕವಾದ ಬಿಚ್ಚೋಲೆ ತಂದು ಮಾರಾಟ ಮಾಡುತ್ತ, ದಾಸೋಹ ಮಾಡುತ್ತ, ಮಂತ್ರ ಸಾಧನೆಯಲ್ಲಿದ್ದು–

**ಎಲುಒಡೆದು ತನು ಕರಗಿ ಮನವು ಜಜ್ಜರಂಬೋಗಿ**
**ಲಿಂಗದಲ್ಲಿ**
**ನೀರು ನೀರಾಗಿ ಬೆರೆಸಲು ಬೇಕು ಜಂಗಮದಲ್ಲಿ ಆಲಿಕಲ್ಲಾಗಿ**
**ಕರಗಲು ಬೇಕು**
**ಸರ್ವಾಂಗದಲ್ಲಿ ಪುಳಕಂಗಳೊಗೆದು ಕಡಲುಗಳಾಗಿ**
**ನಿರ್ವಾಣ ನಿಜಪದವೆನಗೆ**
**ಎಂದಪ್ಪುದೊ ವುಳಿಯುಮೇಶ್ವರ**

ನಿಜನಿರ್ವಾಣ ಯಾವಾಗ ಲಭಿಸುವದೋ ಎಂದು ಚಿಂತನೆ ಮಾಡುತ್ತ ಒಂದು ದಿನ ಕಲ್ಯಾಣದಲ್ಲೇ ಲಿಂಗೈಕ್ಯನಾದ.

■■

---

**ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ಥಿ**
**ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ**
**ಶಿವಭಕ್ತಿಮತಿಕ್ರಮ್ಯ ಯದ್ದಾನಂ ಚ ವಿಧೀಯತೇ।**
**ನಿಷ್ಫಲಂ ತು ಭವೇದ್ದಾನಂ ರೌರವಂ ನರಕಂ ವ್ರಜೇತ್॥**
**ಇಂತೆಂದುದಾಗಿ, ಕೂಡಲಸಂಗನ ಶರಣರನರಿಯದೆ**
**ಕೀರ್ತಿವಾರ್ತೆಗೆ ಮಾಡಿದವನ ಧನವು ವೃಥಾ ಹೋಯಿತ್ತಲ್ಲಾ.**

**–ಬಸವಣ್ಣ**

ಫಲಾಪೇಕ್ಷೆಯಿಂದ ಮತ್ತು ಅಹಂಕಾರದಿಂದ ಧನದಾಸೋಹ (ದಾನ) ಮಾಡಬಾರದು. ಬಲಿ ಚಕ್ರವರ್ತಿ, ಕರ್ಣ, ಖಚರ ಮತ್ತು ಶಿಬಿ ಮುಂತಾದವರು ಫಲಾಪೇಕ್ಷೆ, ಅಹಂಕಾರದಿಂದ ಮಾಡಿದ ದಾನ ನಿರರ್ಥಕವಾಯಿತು. ಸತ್ಯ ಶುದ್ಧ ಕಾಯಕ ಮಾಡಿ ಗಳಿಸಿದುದನ್ನು ಕೀರ್ತಿ ವಾರ್ತೆಗಳಿಗಾಗಿ ಮಾಡದೆ ಶರಣರಿಗೆ ಭಕ್ತಿ ಮತ್ತು ನಿರಪೇಕ್ಷ ಭಾವದಿಂದ ಸಮರ್ಪಿಸಬೇಕು. ಹಾಗೆ ಮಾಡದೇ ಕೀರ್ತಿಗಾಗಿ ಮಾಡುವ ದಾಸೋಹವು (ದಾನ) ನಿರರ್ಥಕವಾಗುತ್ತದೆ ಎಂಬ ಭಾವ.

# ಇಳೆಯಲ್ಲಿ ಲಿಂಗಸಸಿ ಬೆಳೆಸಿ, ಅರಿವಿನ ಪ್ರಸಾದವನ್ನು ಜಂಗಮವಾಗಿಸಿದಾತ

● ವೆಂಕಟೇಶ ಕೆ. ಜನಾದ್ರಿ

ನಮಗೆಲ್ಲ ಅನ್ನ ಕೊಡುವ ರೈತ ತಾ ನಂಬಿಕೊಂಡ ಭೂಮಿಯಲ್ಲಿ ಬೀಜ ಬಿತ್ತಿ ಬೆಳೆ ಬೆಳೆದು ಅದರಿಂದ ಬರುವ ಫಲವನ್ನು ಎಲ್ಲರಿಗೂ ಜಂಗಮವಾಗಿಸಿ ತಾನದರ ಪ್ರಸಾದವನ್ನು ಪಡೆಯುವ ಬಹುದೊಡ್ಡ ಕಾಯಕಯೋಗಿ. ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರ ಪರಂಪರೆಯಲ್ಲಿಯ ಹಲವಾರು ಶರಣರಲ್ಲಿ ರೈತರ ಪ್ರತಿನಿಧಿಯಾಗಿ ಒಕ್ಕಲುತನದ ರೂವಾರಿಯಾಗಿ ಒಕ್ಕಲುತನದ ಪ್ರಕ್ರಿಯೆಯ ಪವಿತ್ರ ಕಾಯಕದಲ್ಲಿ ತೊಡಗಿಸಿಕೊಂಡ ಒಕ್ಕಲಿಗ ಮುದ್ದಣ್ಣ ನನಗೆ ಬಹುಪ್ರೀಯನಾಗಿದ್ದಾನೆ. ೧೧೬೦ರ ಕಾಲದಲ್ಲಿದ್ದ ಈತ ಒಕ್ಕಲುತನದ ಸತ್ಯ ಶುದ್ಧ ಕಾಯಕದಲ್ಲಿಯೇ ತನ್ನ ಅಂಗದಿಂದ ಕಾಯಕ ಮಾಡಿ ತನ್ನ ಅಂಗವನ್ನೇ ಲಿಂಗವನ್ನಾಗಿ ಪರಿವರ್ತಿಸಿಕೊಂಡಿರುವ ಶರಣನೀತ. ತನ್ನ ಈ ಲಿಂಗಾಂಗದಿಂದ ಶ್ರಮಿಸಿದ ಫಲವಾಗಿ ದೊರೆತ ಪ್ರಸಾದವನ್ನು ದಾಸೋಹ ಮಾಡಿ ಜಂಗಮನಾದಾತ.

ಭೌತಿಕವಾಗಿ ತನ್ನ ಕಾಯಕದಿಂದ ಆಹಾರ ಧಾನ್ಯವನ್ನು ಬೆಳೆದು, ಬಳಸಿ, ಹಂಚುವುದರ ಜೊತೆಗೆ ತಾನು ತನ್ನ ಕಾಯಕದ ಅನುಭವದಲ್ಲಿ ಕಂಡುಕೊಂಡ ವಿಚಾರವನ್ನು ಶರಣರ ಸಂಕುಲಕ್ಕೆ ಮತ್ತು ಸಮಾಜಕ್ಕೆ ಬಿತ್ತಿ, ಆಚಾರವನ್ನು ಬೆಳೆದು, ಸಮಾಜಕ್ಕೆ ಅನುಭಾವ ಮಾಡುವ ಮೂಲಕ ತಾನೇ ಜಂಗಮವಾಗುತ್ತಿದ್ದ. ಬಿತ್ತಿ, ಬೆಳೆದು, ಹಂಚುವುದೇ ಈತನ ಒಡಲ ಹಸಿವು. ಇನ್ನೊಬ್ಬರ ಒಡಲ ಹಸಿವಿನ ತಣಿಕೆಗೆ ತಾನು ಬೀಜವಾಗುತ್ತಿದ್ದ. ಹೀಗೆ ಒಕ್ಕಲುತನದ ಕಾಯಕದ ಕಲಿಯಾಗಿ, ದಾಸೋಹ ಸಂಪನ್ನನಾಗಿದ್ದ ಈತನನ್ನು ಅನುಭವ ಮಂಟಪದಲ್ಲಿ "ಮುಗ್ದಯ್ಯ" ಎಂತಲೂ ಕರೆಯುತ್ತಿದ್ದರು.

ಒಕ್ಕಲಿಗ ಮುದ್ದಣ್ಣನವರು ಮುಗ್ಧ ಒಕ್ಕಲಿಗನಾಗಿ ಹಲವಾರು ವಚನಗಳನ್ನು ರಚಿಸಿರಬಹುದಾದರೂ ಪ್ರಸ್ತುತ ಇವರು ರಚಿಸಿದ ಸುಮಾರು ಹನ್ನೆರಡು ವಚನಗಳು ಲಭ್ಯವಿವೆ. "ಕಾಮಭೀಮ ಜೀವಧನದೊಡೆಯ" (ಅಂದರೆ ಮದನಾರಿಯಾದ ಪಶುಪತಿ) ಎಂಬ ವಚನಾಂಕಿತದಲ್ಲಿ ರಚಿಸಿರುವ ಇವರ ವಚನಗಳ ಆಳ ಮತ್ತು ಎತ್ತರ-ಬಿತ್ತರವೆಲ್ಲವೂ ಅಗಮ್ಯ. ಅಪ್ರತಿಮ. ಕೃಷಿ ಮತ್ತು ಬದುಕಿನೊಂದಿಗೆ ಸಮ್ಮಿಲಿತಗೊಂಡು ವಿಭಿನ್ನವಾಗಿ ಅರ್ಥೈಸಿಕೊಳ್ಳುವಂಥವುಗಳಾಗಿವೆ. ಮುದ್ದಣ್ಣನವರು ಜೋಳದ ಹಾಳಿನವರು ಎಂದು ನಂಬಲಾಗಿದೆ. ಒಕ್ಕಲುತನ ಮಾಡುತ್ತಲೇ ಗುರು-ಲಿಂಗ-ಜಂಗಮ ಪ್ರೇಮಿಯಾಗಿದ್ದ ಇವರು ಪ್ರತಿ ವರ್ಷ ಡಿಸೆಂಬರ್ ಅಥವಾ ಜನೇವರಿ ಮಾಹೆಯಲ್ಲಿ ಬರುವ ಎಳ್ಳು ಅಮವಾಸೆಯ ದಿವಸ ಜನಿಸಿರಬಹುದೆಂಬ ಅಂದಾಜಿನ ಪ್ರಕಾರ ಅಂದು ಇವರ ಜಯಂತಿಯನ್ನು ಆಚರಿಸುತ್ತಾರೆ. ಅಂದು ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಚೆರಗ ಚೆಲ್ಲುವ ಕಾರ್ಯಕ್ರಮವನ್ನು ಆಯೋಜಿಸಿ ತಮ್ಮ ಹೊಲದಲ್ಲಿ ಬಂಧು-ಬಾಂಧವರನ್ನು ಆಮಂತ್ರಿಸಿ ಪ್ರಸಾದದ ವ್ಯವಸ್ಥೆಯನ್ನು ಮಾಡಿ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶರಣ ತತ್ವದ ವಿಚಾರ ವಿನಿಮಯವನ್ನು, ಚರ್ಚೆಯನ್ನು ಆಯೋಜಿಸಿ ಅರ್ಥಪೂರ್ಣ ಕಾರ್ಯಕ್ರಮವನ್ನು ಮಾಡುತ್ತಾರೆ. ಭೂಮಿಯಿಂದ ಪಡೆದ ಪ್ರಸಾದವನ್ನು ಭೂಮಿಗೊಂದಿಷ್ಟು (ಚರಗ ಚೆಲ್ಲಿ) ಸಾಂಕೇತಿಕವಾಗಿ ದಾಸೋಹ ಮಾಡಿ, ಉಣ್ಣುವ ನಿಜ ಜೀವಿಗಳಿಗೆ ತನ್ನ ಕಾಯಕದಿಂದ ಪಡೆದ ಪ್ರಸಾದದಲ್ಲೊಂದಿಷ್ಟು ಆಪ್ತ ಪ್ರೀತಿಯಿಂದ ದಾಸೋಹ ಮಾಡುವ ವಿಶಿಷ್ಠ ಬಗೆಯಿದು. ರೈತನ ಸಂಭ್ರಮವಿದು. ಆತನ ವಿಜಯೋತ್ಸವವಿದು. ಮಣ್ಣಿನ ಮಕ್ಕಳ ಹಬ್ಬವಿದು.

ಶರಣರು ಒಕ್ಕಲುತನವನ್ನು ಬಹಳ ಪ್ರಮುಖವಾದ ಕಾಯಕವೆಂದೇ ಪರಿಗಣಿಸಿದ್ದರು. "ಆರಂಬ ಮಾಡುವೆ ಗುರುಪೂಜೆಗೆಂದು, ವ್ಯವಹಾರ ಮಾಡುವೆ ಲಿಂಗಾರ್ಚನೆಗೆಂದು" ಇದು ಹನ್ನೆರಡನೇ ಶತಮಾನದ ಶರಣರ ವಾಣಿ. ಇಲ್ಲಿ "ಆರಂಬ"ವೆಂದರೆ ಸಾಮಾನ್ಯ ಅರ್ಥದಲ್ಲಿ ಪ್ರಾರಂಭವೆಂಬ ಅರ್ಥ ಕೊಡುತ್ತದೆಯಾದರೂ ಶರಣರ ವಚನದಂತರಾರ್ಥದಲ್ಲಿ "ಆರಂಬ" ಎಂದರೆ ಕೃಷಿ ಕಾಯಕವೆಂಬ ಧ್ವನಿ ಇರುವುದನ್ನು ಗಮನಿಸಬೇಕು. ಶರಣರ

ಲೆಕ್ಕಪತ್ರ ಅಧೀಕ್ಷಕ, ಈಕರಸಾ ಸಂಸ್ಥೆ , ಕೇಂದ್ರ ಕಛೇರಿ, ಕಲಬುರ್ಗಿ-೫೮೫೧೦೨ ಮೊ: ೯೪೪೫೬೬೦೪೯೨

ದೃಷ್ಟಿಯಲ್ಲಿ ಎಲ್ಲದಕ್ಕೂ ಮೂಲ ಕೃಷಿ. ಕೃಷಿ ಕಾಯಕ ಮಾಡುವ ರೈತ ಶ್ರಮವಹಿಸಿ, ಬೆವರ ಹನಿಸಿ ಭೂ ತಾಯಿಯನ್ನು ನಂಬಿ ಕಾಯಕ ಮಾಡಿದರೆ ಆ ರೈತನ ಅಮ್ಮನಾದ ಭೂ ತಾಯಿ ತನ್ನ ರೈತ ಮಗನನ್ನು ಎಂದಿಗೂ ಕೈ ಬಿಡುವುದಿಲ್ಲ. ಆತನ ಶ್ರಮಕ್ಕೆ ತಕ್ಕ ಫಲ ನೀಡಿಯೇ ನೀಡುತ್ತಾಳೆ. ಆತನ ಕಾಯಕಕ್ಕೆ ಪ್ರಸಾದ ಕೊಟ್ಟೇ ಕೊಡುತ್ತಾಳೆ. ಭೂ ತಾಯಿ ಕೊಟ್ಟ ಪ್ರಸಾದವನ್ನು ರೈತ ಎಲ್ಲರಿಗೂ ನೀಡುವ ಮೂಲಕ ಆತ ನಿಜಕ್ಕೂ ಅನ್ನದಾತ ಎನಿಸಿಕೊಂಡಿದ್ದಾನೆ. ಒಂದು ನಾಡನ್ನೇ ಕಟ್ಟಿ ಬೆಳೆಸಬಲ್ಲ ತಾಕತ್ತು ಒಬ್ಬ ರೈತನಿಗಿದೆ. ಒಂದು ದೇಶಕ್ಕೆ ಸೈನಿಕ ಕಾವಲಾಗಿರುವ ಮೂಲಕ ದೇಶದ ರಕ್ಷಣೆ ಮಾಡಲು ಎಷ್ಟು ಅವಶ್ಯವೋ ಅಷ್ಟೇ ಅವಶ್ಯಕತೆ ಇರುವುದು ಆ ದೇಶದ ರೈತನದ್ದು. ಏಕೆಂದರೆ ಆತ ತನ್ನ ಕಾಯಕದಿಂದ ಎಲ್ಲರ ಒಡಲನ್ನು ತುಂಬಿಸಿ ತಣಿಸುವ ತಂದೆ. ಅನ್ನ ಕೊಡುವ ಅಮ್ಮನಾಗಿರುತ್ತಾನೆ. ಶರಣ ಒಕ್ಕಲಿಗ ಮುದ್ದಣ್ಣ ತನ್ನ ಕಾಯಕದಿಂದ ಹಸಿದ ಹೊಟ್ಟೆಗಳನ್ನು ತುಂಬಿಸುವ ಜೊತೆಗೆ ತನ್ನ ಅನುಭಾವಿಕ ನೆಲೆಯಲ್ಲಿ ರಚಿಸಿದ ವಚನಗಳ ವಿಚಾರದಿಂದ ನಮ್ಮೊಳಗೇ ಇರುವ ಅರಿವನ್ನು ಜಾಗೃತಗೊಳಿಸಿದವರು.

ಮುದ್ದಣ್ಣ ತನ್ನ ಹೊಲದಲ್ಲಿ ಕಾಯಕನಿರತನಾದಾಗೊಮ್ಮೆ ಆತನ ನೇಗಿಲ ತುದಿಗೆ ಸಿಕ್ಕ ವಸ್ತುವೊಂದನ್ನು ತೆಗೆದು ನೋಡಿ ನಿಜಕ್ಕು ಬೆರಗಾಗುತ್ತಾರೆ ಅಲ್ಲಿದ್ದದ್ದೊಂದು ಸ್ವಯಂಲಿಂಗ. ಈ ಲಿಂಗ ಆದಿನಾಥವೆಂದು ತಿಳಿದು ಅವರು ಪೂಜಿಸುತ್ತಿದ್ದರಂತೆ. ವೈಚಾರಿಕ ನೆಲೆಯಲ್ಲಿ ನಂಬಿಕೆಯ ಕುರಿತು ಯೋಚಿಸಿದಾಗ ಭೌತಿಕವಾದ ಲಿಂಗ ಸಿಕ್ಕಿರುವುದನ್ನು ಅದನ್ನೇ ತನ್ನ ದೇವರೆಂದು ಪೂಜಿಸುವುದು ಅವರವರ ಭಕ್ತಿಭಾವನೆಗಳಿಗೆ ಬಿಡೋಣ. ಈ ಪ್ರಸಂಗವನ್ನು ಒಂದಿಷ್ಟು ವಿಭಿನ್ನವಾಗಿ ಯೋಚಿಸಿದಾಗ ಕಾಯಕ ನಿರತ ಒಕ್ಕಲಿಗನಿಗೆ ತನ್ನ ನೇಗಿಲ ತುದಿಯಲ್ಲಿ ದೇವರಿದ್ದಾನೆಂಬ ನಂಬಿಕೆಯನ್ನು ಅಂದರೆ ಕಾಯಕ ಮತ್ತು ಕಾಯಕದ ಪರಿಕರಗಳಲ್ಲಿಯೇ ದೇವನಿರುವ ಕೈಲಾಸವೆಂಬ ನಿಲುವನ್ನು ಇಲ್ಲಿ ಕಂಡುಕೊಳ್ಳಬಹುದಾಗಿದೆ.

ಆಡುವ ಮಾತು ಮಂತ್ರವಾಗಿ, ಮಾಡುವ ಕಾಯಕ ಪೂಜೆಯಾಗಿ, ಸರ್ವಸಮರ್ಪಣ ಭಾವವೇ ದಾಸೋಹವನ್ನಾಗಿಸಿಕೊಂಡು ಬದುಕಿದ ಇವರು ಬದುಕನ್ನೇ ಯೋಗವನ್ನಾಗಿಸಿಕೊಂಡು ಬಹಿರಂಗದಲ್ಲಿ ಬೇಸಾಯದ ಕಸುಬು, ಅಂತರಂಗದಲ್ಲಿ ಇಹದಲ್ಲಿದ್ದೇ ಪರವನ್ನು ಸಾಧಿಸಿದ ಇವರು 'ಮಾಡುವ ಮಾಟದಿಂದ ಮತ್ತೊಂದನರಿಯಬೇಕು' ಎಂಬ ಅಲ್ಲಮರ ಮಾತಿಗೆ ಬದ್ಧರಾಗಿದ್ದರು. ಅಂದಿನ ರಾಜ ಶಕ್ತಿಯನ್ನು ಪ್ರಶ್ನಿಸುವ, ಪ್ರತಿಭಟಿಸುವ ಮೂಲಕ ರಾಜಶಾಹಿಯನ್ನು ಎದುರಿಸಿ ಮಣ್ಣಿನ ಮಗನ ಪ್ರತೀಕವಾಗಿ ಪ್ರಾಮಾಣಿಕ ಬದುಕಿಗೆ ಲಿಂಗಸಾಕ್ಷಿ ಮಾಡಿ ಐಕ್ಯರಾದರೆಂಬುದು ಇವರ ಜೀವನದಲ್ಲಿ ತಿಳಿಯುತ್ತದೆ. ಇಂದಿಗೂ ರೈತರ ಚಳವಳಿ ಅಥವಾ ಹೋರಾಟದ ಅಂತ್ಯವೂ ಸಹ ಹೀಗೆಯೇ ಆಗುತ್ತಿದೆಯಲ್ಲವೇ? ಮುದ್ದಣ್ಣ ಆಗಿನ ರಾಜ ವಿಧಿಸಿದ ಹೆಚ್ಚುವರಿ ತೆರಿಗೆಯನ್ನು ಪಾವತಿಸದೇ ಅದೇ ಹಣವನ್ನು ದಾಸೋಹಕ್ಕಾಗಿ ವಿನಿಯೋಗಿಸಿದ ಶರಣರಿವರು. ಅದಕ್ಕಾಗಿಯೇ ಇಂದಿಗೂ ಒಕ್ಕಲುತನ ಉತ್ಪನ್ನಕ್ಕೆ ತೆರಿಗೆ ವಿಧಿಸಬಾರದೆಂಬ ನೀತಿ ಇದೆಯೇನೋ? ಈ ಅಂಶವನ್ನು ಗಮನಿಸಿದಾಗ ನಮ್ಮ ಇಂದಿನ ಕಾನೂನು ವ್ಯವಸ್ಥೆಯಲ್ಲಿರುವ ಹಲವಾರು ಅಂಶಗಳನ್ನು ಅಂದೇ ಶರಣರು ಕಂಡುಕೊಂಡು ಆಡಳಿತ ವ್ಯವಸ್ಥೆಯಲ್ಲಿ ತರುವಂತೆ ಪ್ರಯತ್ನಿಸುತ್ತಿದ್ದರು ಎಂಬ ವಿಷಯವಿಲ್ಲಿ ಸ್ಪಷ್ಟವಾಗುತ್ತದೆ. ಅವರ ಕೆಲವು ವಚನಗಳ ವಿಶೇಷತೆ ಹೀಗಿದೆ,

"ಅಂಗವೇ ಭೂಮಿಯಾಗಿ, ಲಿಂಗವೇ ಬೆಳೆಯಾಗಿ, ವಿಶ್ವಾಸವೆಂಬ ಭತ್ತ ಒಲಿದು ಉಂಡು, ಸುಖಿಯಾಗಿರಬೇಕೆಂದ ಕಾಮಭೀಮ ಜೀವಧನದೊಡೆಯ." ಇಡೀ ಒಕ್ಕಲುತನದ ಪ್ರಕ್ರಿಯೆಯನ್ನು ಮುದ್ದಣ್ಣ ಈ ವಚನದಲ್ಲಿರಿಸಿದ ಬಗೆ ನೋಡಿ, ಭೂಮಿಯನ್ನೇ ಅಂಗವಾಗಿಸಿಕೊಂಡು ಬೆಳೆಯುವ ಬೆಳೆಯಿಂದ ಅಂಗವಾಗಿದ್ದ ಭೂಮಿಯನ್ನು ಲಿಂಗಮಯ ಮಾಡುತ್ತಾರೆ. ಬೆಳೆದ ವಿಶ್ವಾಸವೆಂಬ ಭತ್ತವನ್ನು ಪ್ರೀತಿಯಿಂದ ಉಂಡು ಜಂಗಮ ದಾಸೋಹ ಮಾಡಿ ಸುಖಿಯಾಗಿರಬೇಕೆಂಬ ಸರಳ ಬದುಕಿನ ಸೂತ್ರವನ್ನು ಮತ್ತು ಕಾಯಕದ ಮಹತ್ವದ ಜೊತೆಗೆ ಆಂತರ್ಯದ ಅರಿವನ್ನು ಜಾಗೃತ ಮಾಡಿಕೊಂಡು ಭತ್ತದ ಜೊತೆಗೆ ಆವಿರ್ಭವಿಸಿದ ಆಂತರ್ಯದ ಅರಿವನ್ನು ಸಹ ದಾಸೋಹ ಮಾಡಿದ ಶರಣರಿವರು.

**"ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು, ಕ್ರಿಯೆಗೆ ಅರಿವು ಬೇಕೆಂದಲ್ಲಿ ಉಭಯವನರಿದು ಘಟಿಸಬೇಕು, ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೇ ಮೀರಿದವರುಂಟೆ? ಕ್ರಿಯೆ ಬಿಡಲಿಲ್ಲ, ಅರಿವ ಮರೆಯಲಿಲ್ಲ, ಬೆಳೆಯ ಕೊಯಿಂದ ಮತ್ತೆ ಹೊಲಕ್ಕೆ ಕಾವಲುಂಟೆ? ಫಲವ ಹೊತ್ತ ಪೈರಿನಂತೆ, ಪೈರಿನೊಳಗೊಂಡ ಫಲದಂತೆ ಅರಿವು ಆಚರಣೆಯಲ್ಲಿ ನಿಂದು, ಆಚರಣೆ ಅರಿವಿನಲ್ಲಿ ಲೇಪನಾದ ಮತ್ತೆ ಕಾಮಭೀಮ**

**ಜೀವಧನದೊಡೆಯನೆಂಬುವ ಭಾವಿಸಲಿಲ್ಲ".** ಈ ವಚನದ ವಿಶೇಷವೆಂದರೆ ಕೃಷಿ ಕಾಯಕವನ್ನು ಮಾಡುವ ಪರಿಯ ಜೊತೆಗೆ ಅರಿವು ಮತ್ತು ಕ್ರಿಯೆಯ ಕುರಿತು ಶರಣ ಜೀವನದ ದೃಷ್ಟಿಕೋನವನ್ನು ಗಮನಿಸಬಹುದು. ಕೃಷಿ ಕಾಯಕ ಕೈಕೊಂಡ ಒಕ್ಕಲಿಗ ತನ್ನ ಪೈರಿಗೆ ಅವಶ್ಯವಿರುವಷ್ಟು ಮಾತ್ರ ನೀರನ್ನು ಹರಿಸಬೇಕು, ಆತ ಬಿಡುವ ನೀರು ಕಡಿಮೆಯಾದರೆ ಪೈರು ಒಣಗುತ್ತದೆ, ಹೆಚ್ಚಾದರೆ ಕೊಳೆತು ಬಿಡುತ್ತದೆ. ಹಾಗೆಯೇ ಬದುಕಿನಲ್ಲಿ ಅರಿವು ಮತ್ತು ಕ್ರಿಯೆಗಳು ಒಂದಕ್ಕೊಂದು ಪೂರಕವಾಗಿರಬೇಕಾಗುತ್ತದೆ. ಕ್ರಿಯೆಗಿಂತ ಅರಿವು ಹೆಚ್ಚಾದಲ್ಲಿ ಅಥವಾ ಅರಿವಿಗಿಂತ ಬರೀ ಕ್ರಿಯೆ ಹೆಚ್ಚಾದರೂ ಅಸಮತೋಲನವಾಗುತ್ತದೆ ಅರಿವು ಮತ್ತು ಕ್ರಿಯೆ ಸಮನಾಗಿದ್ದರೆ, ಕಾಯಕವನ್ನು ಅವಶ್ಯವಿರುವಷ್ಟು ಅರಿವಿನೊಂದಿಗೆ ಮಾಡಿದಲ್ಲಿ ಬದುಕು ಸಾರ್ಥಕತೆಯನ್ನು ಪಡೆಯುತ್ತದೆ ಎನ್ನುತ್ತಾರೆ. ಬೆಳೆದು ನಿಂತ ಪೈರಿನ ಬೆಳೆ ಕೊಯ್ದು ಮೇಲೆ ಹೊಲವನ್ನು ಕಾಯಬೇಕಾಗಿಲ್ಲ. ಕೊಯ್ಯುವವರೆಗೆ ಕ್ರಿಯೆ ಮತ್ತು ಅರಿವು ಒಂದಾಗಿರಲೇಬೇಕು ಹಾಗೆಯೇ ಬದುಕಿನುದ್ದಕ್ಕೂ ಜೀವನವಿರುವವರೆಗೂ ಅರಿವು ಮತ್ತು ಕಾಯಕ ಪೂರಕವಾಗಿರಲೇಬೇಕಾಗುತ್ತದೆ. ಫಲ ಹೊತ್ತ ಪೈರಿನ ಜೊತೆ ಫಲದ ಸಂಬಂಧವನ್ನು ಬಹಳ ವಿಶಿಷ್ಟವಾಗಿ ಬಿಂಬಿಸಿರುವುದು ಇಲ್ಲಿ ಕಾಣುತ್ತದೆ. ಪೈರಿನೊಂದಿಗೇ ಇರುವ ಫಲದ ಹಾಗೆ ಅರಿವಿನೊಂದಿಗೆ ಆಚರಣೆ ಇರಬೇಕೆನ್ನುತ್ತಾರೆ. ಪೈರು ಅರಿವಾದರೆ ಆಚರಣೆ ಫಲವಾಗಿದೆ. ಬರೀ ಅರಿವೆಂಬ ಪೈರು ಅಷ್ಟೇ ಇದ್ದು ಆಚರಣೆ ಎಂಬ ಫಲ ಇಲ್ಲದಿದ್ದರೆ ಆ ಪೈರಿಗೆ ಯಾವ ಬೆಲೆಯುಂಟು? ಆಚರಣೆ ಇಲ್ಲದ ಅರಿವಿಗೆ ಬೆಲೆ ಇರುವುದಿಲ್ಲ. ಆಚರಣೆ ಅರಿವಿನೊಂದಿಗಿರಬೇಕು ಹಾಗಾದಾಗ ಪೈರು ಮತ್ತು ಫಲವೆರಡಕ್ಕೂ ಸಾರ್ಥಕತೆ ಬರುತ್ತದೆ. ಪೈರೆಂಬ ಅರಿವಿದ್ದಲ್ಲಿ ಫಲವೆಂಬ ಆಚರಣೆಯ ಮೂಲಕ ಅದು ದಾಸೋಹ ರೂಪದಲ್ಲಿ ಸಮರ್ಪಿತಗೊಂಡಾಗ ರೈತ ಮತ್ತು ರೈತನ ಪರಿಶ್ರಮದ ಅರಿವು ಮತ್ತು ಆಚರಣೆಗಳೆರಡರ ಫಲವೂ ಒಡಲಿನ ಹಸಿವನ್ನು ಮತ್ತು ಜ್ಞಾನದ ಹಸಿವನ್ನು ತಣಿಸುತ್ತದೆ. ಇದೆಲ್ಲವೂ ಸತ್ಪಾತ್ರಕ್ಕೆ ಸಲ್ಲಿಕೆಯಾಗುತ್ತದೆ ಎಂಬುದು ಈ ವಚನದಂತರಾರ್ಥವೆಂದು ತಿಳಿದುಕೊಂಡೆ.

**"ನೀ ಕೊಟ್ಟ ಭೂಮಿಗೆ ಮುಂದೆ ಕರಲು, ಹಿಂದೆ ಇಗ್ಗರಲು, ಅಲ್ಲಿಂದ ಆಚೆ ಮಧ್ಯಭೂಮಿ, ಮೂರು ನೆಲದ ಭೂಮಿಯ ಆರೈದು ಬೆಳೆದೆಹೆನೆಂದಡೆ, ಇದಾರ ವಶವೂ ಅಲ್ಲ, ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ."** ಬೆಳೆ ಬೆಳೆಯಲು ಭೂಮಿ ಮುಖ್ಯ, ಭಕ್ತಿ ಬೆಳೆಯಲು ಮನ ಮುಖ್ಯ. ದೇವರು ನನಗೆ ಕೊಟ್ಟ ಭೂಮಿ ಕರಲು, ಬೇರೆಡೆ ಇನ್ನೂ ಕರಲು, ಮುಂದೆ ಹೋದರೆ ಮಧ್ಯಮ ತರದ್ದು ಯಾವುದರಲ್ಲಿ ಏನು ಬೆಳೆ ಬೆಳೆಯಲಿ? ಈ ಮೂರು ಬಗೆಯ ಭೂಮಿಯನ್ನು ಪರೀಕ್ಷಿಸಿ ಬೆಳೆಯೋಣವೆಂದರೆ ಅಸಾಧ್ಯ. ಏಕೆಂದರೆ ಬೆಳೆಯೆಂಬುದು ನೈಸರ್ಗಿಕ ಕೊಡುಗೆ ಅದು ಯಾರ ಕೈವಶವಾಗಿಲ್ಲವಾದರೂ ಒಕ್ಕಲಿಗನ ವಿವೇಚನೆ ಮತ್ತು ಶ್ರಮಭರಿತ ಕಾಯಕದಿಂದ ಭಗವಂತ ಕೊಟ್ಟ ಯಾವುದೇ ಭೂಮಿಯನ್ನು ಕೃಷಿಯೋಗ್ಯ ಭೂಮಿಯನ್ನಾಗಿಸಿಕೊಂಡು ಬೆಳೆ ಬೆಳೆಯಬಹುದಾಗಿದೆ ಎಂಬ ಅರಿವನ್ನೂ ಸಹ ಭಗವಂತ ಒಕ್ಕಲಿಗನಿಗೆ ನೀಡಿದ್ದಾನೆಂದು ತಿಳಿಸುತ್ತಾರೆ. ಹೀಗೆ ಭೌತಿಕ ವಿಚಾರವನ್ನು ತಿಳಿಸುವ ಜೊತೆ ಮನುಷ್ಯನ ಮನಸ್ಸಿನ ಕುರಿತು ಸಹ ಇಲ್ಲಿ ಚಿಂತಿಸುತ್ತಾರೆ. ಮನಸೆಂಬ ಭೂಮಿಯಲ್ಲಿ ತಾನು ಮಾಡಬೇಕಾಗಿರುವ ನೈಜ ಕೃಷಿಯ ಬಗೆಗೆ ಸೂಚನೆ ನೀಡುತ್ತಾನೆ. ನಮಗೆ ಭಗವಂತ ಕೊಟ್ಟ ಸ್ಥೂಲ ದೇಹವು ಅಜ್ಞಾನದಿಂದ ಕರಲಾಗಿರಬಹುದು. ಮತ್ತೊಂದೆಡೆ ಇನ್ನೂ ಕೆಟ್ಟದ್ದಾಗಿ ಇಗ್ಗರಲಾಗಿರಬಹುದು, ಕೆಲವೆಡೆ ಜ್ಞಾನ ಮತ್ತು ಅಜ್ಞಾನದಿಂದ ತಮೋ ಗುಣವಾಗಿರಲೂಬಹುದು. ಮನ ಹೇಗೇ ಇರಲಿ ಭಗವಂತನೇ ಕೊಟ್ಟ ನಮ್ಮ ಅಂಗದಲ್ಲಿ ಭಗವಂತನೇ ಕೊಟ್ಟ ಅರಿವಿನಿಂದ ಪಡೆದ ಲಿಂಗಗುಣದಿಂದ ಸ್ಪರ್ಷಿಸಿ ಅಂಗವನ್ನೇ ಲಿಂಗವನ್ನಾಗಿಸಬೇಕಾಗಿದೆ. ಕರಲು ಭೂಮಿಯನ್ನು ಕೃಷಿಯೋಗ್ಯ ಭೂಮಿಯನ್ನಾಗಿಸಿಕೊಂಡು ಒಕ್ಕಲುತನ ಮಾಡುವ ಬಗೆಯಲ್ಲಿ ಕಲ್ಮಷದಿಂದಾವೃತವಾದ ಮನವನ್ನು ಸ್ವಚ್ಛವಾದ ಅರಿವಿನಿಂದ ಜಾಗೃತಗೊಳಿಸಿಕೊಂಡು ಯಾರೊಬ್ಬರ ಸ್ವತ್ತು ಅಲ್ಲದ ಜ್ಞಾನವನ್ನು ಎಲ್ಲರೂ ಪಡೆಯಬೇಕಾಗಿದೆ ಎಂಬುದನ್ನು ಬಹಳ ಸೂಕ್ಷ್ಮತೆಯಲ್ಲಿ ಈ ವಚನದಲ್ಲಿ ಅಡಗಿಸಿಟ್ಟಿದ್ದಾರೆ. ಇಲ್ಲಿ ತಾನು ಮಾಡುವ ಕೃಷಿ ಕಾಯಕಕ್ಕೂ ಮತ್ತು ಅಂಗವನ್ನು ಲಿಂಗವನ್ನಾಗಿಸಿಕೊಳ್ಳುವ, ಜ್ಞಾನಿಯಾಗಬಹುದಾದ ಅಧ್ಯಾತ್ಮದ ನಿಲುವಿನ ಕುರಿತಾಗಿಯೂ ವಿಚಾರವನ್ನಡಗಿಸಿರುವುದನ್ನು ಗಮನಿಸಬೇಕಾಗಿದೆ.

ಹೀಗೆ ಒಂದೆಡೆ ಬಹಿರಂಗದ ಬೇಸಾಯ ಮತ್ತೊಂದೆಡೆ ಅಂತರಂಗದ ಕೃಷಿಯ ಮೂಲಕ ಅಂಗವನ್ನು ಲಿಂಗವನ್ನಾಗಿಸುವ ದಿಶೆಯಲ್ಲಿ **"ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ, ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ, ವ್ಯವಹರಿಸುವುದಕ್ಕೆ ವೈಶ್ಯನಲ್ಲ, ಉಳುವ ಒಕ್ಕಲುಮಗನ ತಪ್ಪನೋಡದೆ ಒಪ್ಪಿಗೊಳ್ಳಯ್ಯಾ,**

**ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ".** ಎಂದು ವಚಿಸುತ್ತಾರೆ. ಈ ವಚನದಲ್ಲಿ ಮುದ್ದಣ್ಣ ಒಂದರ್ಥದಲ್ಲಿ ಶ್ರೇಣೀಕೃತ ವ್ಯವಸ್ಥೆಯನ್ನು ವಿಮರ್ಶಿಸುತ್ತಾನೆ. ಬ್ರಾಹ್ಮಣನಾಗಿ ವೇದಾಧ್ಯಯನ ಮಾಡುವುದಕ್ಕಿಂತ, ಕ್ಷತ್ರಿಯನಾಗಿ ಶೂರತನದಿಂದ ಹೋರಾಟ ಮಾಡುವುದಕ್ಕಿಂತ, ವೈಶ್ಯನಾಗಿ ವ್ಯವಹಾರ ಮಾಡುವುದಕ್ಕಿಂತ, ಶ್ರಮಿಕನಾಗಿ ಬೇಸಾಯ ಮಾಡಿ ದವಸ ಧಾನ್ಯ ಬೆಳೆದು ಹಸಿದವರ ಹೊಟ್ಟೆ ತುಂಬಿಸುವ ಒಕ್ಕಲ ಮಗನಾಗಿರುವೆ ನನ್ನನ್ನು ಒಪ್ಪಿಕೊಳ್ಳು ಎಂದು ತನ್ನ ದೈವವನ್ನು ಕೋರುತ್ತಾರೆ. ಇಲ್ಲಿ ಶ್ರೇಣೀಕೃತ ವ್ಯವಸ್ಥೆಯಲ್ಲಿ ಕಟ್ಟಕಡೆಯಲ್ಲಿದ್ದ ಶ್ರಮಿಕನನ್ನು ಅವರ ಕಾಯಕದ ಮಹತ್ವದಿಂದ ಭಗವಂತನಿಗೆ ಹತ್ತಿರವಾಗಿಸಿ ಮೊದಲ ಸ್ಥಾನದಲ್ಲಿರಿಸಿಬಿಟ್ಟಿದ್ದಾರೆ. ಇಲ್ಲಿ ಒಕ್ಕಲಿಗ ಮುದ್ದಣ್ಣ ತನ್ನ ಅಂತರಂಗದ ಮನವನ್ನು ಕೃಷಿ ಮಾಡಿ ಅರಿವೆಂಬ ಜ್ಞಾನವನ್ನು ಬೆಳೆದು ವಿಚಾರವನ್ನೇ ಆಚಾರವನ್ನಾಗಿಸಿ ದಾಸೋಹ ಮಾಡುವ ಪವಿತ್ರ ಕಾಯಕದಲ್ಲಿದ್ದ ತನ್ನನ್ನು ಮರುಮಾತನಾಡದೇ ಮತ್ತು ತಪ್ಪನ್ನೆಣಿಸದೇ ಸ್ವೀಕರಿಸು ಎಂದು ಕಾಮಭೀಮ ಜೀವದೊಡೆಯನ್ನು ಕೋರುತ್ತಾರೆ.

ಇಂದಿನ ನಮ್ಮ ಈ ನಾಡಿನಲ್ಲಿ **"ಜೈ ಜವಾನ್, ಜೈ ಕಿಸಾನ್,** ಇವನೇ ನೋಡು ಅನ್ನದಾತ, ರೈತ ಈ ನಾಡಿನ ಬೆನ್ನೆಲುಬು" ಎನ್ನುವುದೆಲ್ಲವೂ ಬರೀ ಬೂಟಾಟಿಕೆಯಾಗಿದೆ. "ನಮ್ಮದು ರೈತಪರ ಸರ್ಕಾರ, ನಾನು ರೈತರ ಮಗ, ರೈತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ ಮಂತ್ರಿ ನಾನು, ನಾನು ಮಣ್ಣಿನ ಮಗ" ಎಂಬ ರಾಜಕಾರಣಿಗಳ ನುಡಿಗಳೆಲ್ಲಾ ಸುಳ್ಳಿನ ಕಂತೆಗಳಾಗಿವೆ. ನನ್ನಪ್ಪ ರೈತ, ನನ್ನಣ್ಣ ರೈತ, ನನ್ನ ಬಂಧು ರೈತ, ನಮ್ಮೆಲ್ಲರ ಅನ್ನದಾತ ರೈತನ ಒಡಲು ತಣ್ಣಗಿರಲಿ. ಆತ ನೊಂದುಕೊಂಡರೆ, ಆತ ಆತ್ಮಹತ್ಯೆ ಮಾಡಿಕೊಂಡರೆ ನಮಗೆಲ್ಲ ಒಳ್ಳೆಯದಾಗುತ್ತದೆಯೇ? ನಾಡಿನ ರೈತರಿಗೊಂದಿಷ್ಟು ಮಾನಸಿಕ ಸ್ಥೈರ್ಯವನ್ನು ಶರಣ ಒಕ್ಕಲಿಗ ಮುದ್ಧಣ್ಣನನ್ನು ನೆನಪಿಸಿಕೊಳ್ಳುವ ಮೂಲಕ ನೀಡೋಣ. ಮಣ್ಣಿನ ಮಗನ ಶ್ರಮ ಮತ್ತು ಶ್ರಮದ ಫಲ ಎಲ್ಲರಿಗೂ ಪ್ರಸಾದವಾಗಿ, ದಾಸೋಹವಾಗಿ ಸತ್ಪಾತ್ರಕ್ಕೆ ಸಲ್ಲುವಂತಾದರೆ ಒಕ್ಕಲಿಗ ಮುದ್ದಣ್ಣ ನೆಮ್ಮದಿಯಿಂದ ಸಂತಸ ಪಡಬಹುದೇನೋ? ನೊಂದು ಬೆಂದು ಬಸವಳಿದು ಹೋಗಿರುವ ನಮ್ಮ ರೈತನೊಡಲು ತಣ್ಣಗಿರಲೆಂದು, ಬರಗಾಲದಿಂದ, ಭೂಸ್ವಾಧೀನ ಪ್ರಕ್ರಿಯೆ ಮತ್ತು ಇನ್ನಿತರ ರಾಜಕೀಯ ನೀತಿಯಿಂದ ತಲ್ಲಣಗೊಂಡಿರುವ ರೈತನ ಒಡಲಳಲು ಶಾಂತವಾಗಿ ಒಂದಿನಿತು ನೆಮ್ಮದಿಯ ನಿಟ್ಟುಸಿರು ಬಿಡಲೆಂದು ಬಯಸುತ್ತಾ ಒಕ್ಕಲಿಗ ಮುದ್ದಣ್ಣನ ಜಯಂತಿಯ ಸಂಭ್ರಮದಲ್ಲಿ ನಮಗೆಲ್ಲ ಅನ್ನವನ್ನುಣಿಸುವ ಅನ್ನದಾತ ರೈತ ತಂದೆಗೆ ಶರಣು ಶರಣಾರ್ಥಿಗಳನ್ನು ಸಮರ್ಪಿಸೋಣ. ಇಳೆಯಲ್ಲಿ ಲಿಂಗಸಸಿ ಬೆಳೆಸಿ, ಅರಿವಿನ ಪ್ರಸಾದವನ್ನು ಜಂಗಮವಾಗಿಸಿದಾತನ ಪ್ರಯತ್ನವೆಲ್ಲವೂ ಸತ್ಪಾತ್ರಕ್ಕೆ ಸಲ್ಲಿಕೆಯಾಗುವಂತೆ ಪ್ರಯತ್ನಿಸೋಣ. ಹಾಗೆಯೇ ನಮ್ಮ ಕಣ್ಮುಂದಿರುವ ಅನ್ನದಾತ ರೈತನನ್ನು ಕೂಡಾ...

■■

## ನಿಷ್ಠೆ

ಅಧ್ಯಾತ್ಮ ಸಾಧಕನು ತನ್ನ ಸಾಧನೆಯ ಅತ್ಯುನ್ನತ ಗುರಿಯಾದ ಮೋಕ್ಷವನ್ನು ಸಂಪಾದಿಸಲು ಭಕ್ತಿಮಾರ್ಗವು ಅತ್ಯಂತ ಸರಳ ಸುಲಭವಾದ ಮಾರ್ಗ. ಶ್ರದ್ಧೆ ಮತ್ತು ನಿಷ್ಠೆಗಳೇ ಈ ಭಕ್ತಿಯ ಆಧಾರಗಳು. ಭಗವಂತನಲ್ಲಿ ನಂಬಿಗೆ ಹಾಗು ವಿಶ್ವಾಸಗಳಿಲ್ಲದೆ ಮೋಕ್ಷಕ್ಕೆ ಕಾರಣವಾದ ಭಗವಂತನ ಒಲುಮೆಯೂ ಸಾಧ್ಯವಾಗದು. ಭಗವಂತನು ನಂಬಿದ ಭಕ್ತರ ಹೃದಯದಲ್ಲಿ ನಿರಂತರ ನೆಲೆಸಿರುವುದರಿಂದ ಅವನನ್ನು ದೃಢವಾಗಿ ನಂಬಬೇಕು ಎಂಬುದು ಶರಣರ-ಸಂತರ ಅನುಭವದ ಮಾತಾಗಿದೆ. ಈ ನಂಬಿಗೆಯನ್ನು ಭಕ್ತಿಯ ಪರಿಭಾಷೆಯಲ್ಲಿ ಶ್ರದ್ಧೆ ಎಂದು ಕರೆಯಲಾಗಿದೆ. ಆದರೆ ಅದು ಅಂಧಶ್ರದ್ಧೆಯಲ್ಲ. ವಿಚಾರಪೂರ್ಣವಾದ ಶ್ರದ್ಧೆ; ಶುದ್ಧಾಂತಃಕರಣದಿಂದ ಮೂಡಿದ ಶ್ರದ್ಧೆ ಎಂಬುದನ್ನು ಸ್ಪಷ್ಟವಾಗಿ ಗಮನಿಸಬೇಕು.

# ಶಿವಭಕ್ತಿಯಲ್ಲಿ ನಿರತಳಾದ ದುಗ್ಗಳೆ

● ಶ್ರೀಧರ ಗೌಡರ

ಕನ್ನಡದ ಮೊದಲ ವಚನಕಾರ ಜೇಡರ ದಾಸಿಮಯ್ಯನ ಧರ್ಮಪತ್ನಿ ದುಗ್ಗಳೆ. ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎಂಬ ದಾಸಿಮಯ್ಯನ ಮಾತಿನಂತೆ, ಪತಿಯೊಂದಿಗೆ ಹಿತವಾಗಿ ಬೆರೆತು ಶಿವಭಕ್ತಿಯಲ್ಲಿ ನಿರತಳಾದ ಶಿವಶರಣೆ ದುಗ್ಗಳೆ.

ದುಗ್ಗಳೆಯ ಜನ್ಮಸ್ಥಳ ಕಲಬುರ್ಗಿ ಜಿಲ್ಲೆಯ ಗೊಬ್ಬೂರು, ತಂದೆ ಮಲ್ಲಿನಾಥ, ತಾಯಿ ಮಹಾದೇವಿ ಕೆಲವು ಕಾವ್ಯಗಳಲ್ಲಿ ತಂದೆ ತಾಯಿ ಸಂಕಣ್ಣ, ಶ್ರೀದೇವಿ ಹಾಗೂ ಶಾಮಯ್ಯ, ಶಂಕರಿ ಎಂದು ಇದೆ. ಈಕೆಯ ಎರಡು ವಚನಗಳು ದೊರಕಿವೆ. ಅವುಗಳಲ್ಲಿ ಬಸವಣ್ಣ, ಚನ್ನಬಸವಣ್ಣ, ಮರುಳಶಂಕರದೇವ, ಸಿದ್ದರಾಮ, ಅಜಗಣ್ಣರನ್ನು ಸ್ಮರಿಸಿದ್ದಾಳೆ. ದಾಸಯ್ಯಪ್ರಿಯ ರಾಮನಾಥ ಎಂಬ ಅಂಕಿತದೊಂದಿಗೆ ವಚನಗಳನ್ನು ರಚಿಸಿದ್ದಾಳೆ. ಈಕೆಯ ಕಾಯಕ ಬಟ್ಟೆ ನೇಯುವುದು.

ಈ ದಂಪತಿಗಳ ಕಾರ್ಯನಿಷ್ಠೆ, ವಸ್ತ್ರದಾನದ ವೈಶಿಷ್ಟ್ಯಗಳನ್ನು ಬಸವಣ್ಣ, ಕೋಲಶಾಂತಯ್ಯ, ಉಪ್ಪರಗುಡಿ ಸೋಮದೇವಯ್ಯ, ಸತ್ಯಕ್ಕ ತಮ್ಮ ವಚನಗಳಲ್ಲಿ ಸ್ಮರಿಸಿದ್ದಾರೆ.

### ದುಗ್ಗಳೆಯ ವಿವಾಹ:

ಜೇಡರ ದಾಸಿಮಯ್ಯ ಲೋಕ ಸಂಚಾರವನ್ನು ಮುಂದುವರಿಸುತ್ತಾ ವಿವಾಹವಾಗಲು ನಿಶ್ಚಯಿಸುತ್ತಾನೆ. ತಾನು ಗಳಿಸಿರುವುದನ್ನು ಸರಿಯಾದ ರೀತಿಯಲ್ಲಿ ಗುರು, ಲಿಂಗ, ಜಂಗಮರಿಗೆ ನೀಡಿ ಸಂಸಾರ ನಡೆಸುವ ಸದ್ಗೃಹಿಣಿಯನ್ನು ವರಿಸಲು ನಿಶ್ಚಯಿಸುತ್ತಾನೆ.

ಒಂದು ಕೈಯಲ್ಲಿ ಮರಳು ಬೆರಿಸಿದ ಅಕ್ಕಿಯ ಗಂಟು, ಮತ್ತೊಂದು ಕೈಯಲ್ಲಿ ಎರಡು ಕಬ್ಬಿನ ಕೋಲನ್ನು ಹಿಡಿದು, ನೀರನ್ನು ಮುಟ್ಟದೆ ಪಾಯಸವನ್ನು ಮಾಡಬೇಕು ಎಂಬ ಷರತ್ತು ಹಾಕಿ ಅಂಥ ಜಾಣಾಕ್ಷ, ಚತುರೆ, ಭಕ್ತಿವಂತೆಯನ್ನು ಹುಡುಕುತ್ತಾ ಗೊಬ್ಬೂರಿಗೆ ಬರುತ್ತಾನೆ

ತನ್ನ ಸತಿಯಾಗಲು ತಾನು ಒಡ್ಡುವ ಷರತ್ತನ್ನು ಹೇಳಿದಾಗ ಚಿಕ್ಕವಳಾದ ದುಗ್ಗಳೆ ಕಬ್ಬಿನ ಮೇಲ್ಭಾಗವನ್ನು ಹಿಂಡಿ, ಅಕ್ಕಿಯನ್ನು ಜಾಲಿಸಿ ತೆಗೆದು ಮರಳನ್ನು ಬೇರ್ಪಡಿಸಿ, ಕಬ್ಬಿನ ಬುಡದ ಭಾಗವನ್ನು ಹಿಂಡಿ ರಸದಲ್ಲಿ ಅಕ್ಕಿ ಹಾಕಿ ಒಲೆಯ ಮೇಲಿಟ್ಟು ರಸಹಿಂಡಿದ ಕಬ್ಬಿನ ಸಿಪ್ಪೆಯನ್ನು ಉರುವಲಾಗಿ ಒಲೆಯೊಳಗಿಟ್ಟು ಕುದಿಸಿ ಪಾಯಸಮಾಡಿ ಬಡಿಸಿ, ಜೇಡರ ದಾಸಿಮಯ್ಯ ಒಡ್ಡಿದ ಪರೀಕ್ಷೆಯಲ್ಲಿ ಜಯ ಗಳಿಸುತ್ತಾಳೆ. ದುಗ್ಗಳೆಯ ಜಾಣ್ಮೆ, ತಾಳ್ಮೆ, ಆತ್ಮವಿಶ್ವಾಸ, ಶಿವಭಕ್ತಿಯನ್ನು ನೋಡಿ ಮನಸಾರ ಮೆಚ್ಚಿ ದಾಸಿಮಯ್ಯ ದುಗ್ಗಳೆಯನ್ನು ವಿವಾಹವಾಗುತ್ತಾನೆ.

### ಸತಿಪತಿಗಳೊಂದಾದ ಬದುಕು:

ದುಗ್ಗಳೆ ವಯಸ್ಸಿನಲ್ಲಿ ಚಿಕ್ಕವಳಾದರೂ ಅಂದಿನ ಸಮಾಜ ವ್ಯವಸ್ಥೆಯನ್ನು ಅರಿತವಳು. ಪತಿಯಲ್ಲಿ ಶರಣಾದರೂ ಸಮಾನತೆಯ ನಿಲುವನ್ನು ಅರಿತು ಅಂತೆಯೇ ಬಾಳಿದವಳು ದಾಸಿಮಯ್ಯ ಆಕೆಯ ಬಗ್ಗೆ ಮೆಚ್ಚಿ ನುಡಿದಿರುವುದು ಹೀಗೆ

**ಬಂದುದನರಿತು ಬಳಸುವಳು**
**ಬಂದುದ ಪರಿಣಾಮಿಸುವಳು**
**ಬಂಧು ಬಳಗವ ಮರೆಸುವಳು**
**ದುಗ್ಗಳೆಯ ತಂದು ಬದುಕಿದನು ಕಾಣಾ ರಾಮನಾಥ**

ದಾಸಿಮಯ್ಯನ ವ್ಯಕ್ತಿತ್ವ ಬೆಳಗುವಲ್ಲಿ ದುಗ್ಗಳೆ ಮಹತ್ವದ ಪಾತ್ರವಹಿಸಿದಳು. ಬಂದುದನ್ನೆ ಬಳಸಿ, ಅದರಲ್ಲಿ ತೃಪ್ತಿ ಆನಂದವನ್ನು ಅನುಭವಿಸಿ ದಾಸಿಮಯ್ಯನ ಹತ್ತಿರದ ಬಂಧು ಬಳಗವನ್ನು ಮರೆಸುವಂತೆ ಮಾಡಿದ್ದಳು. ಇಂಥವಳನ್ನು ತಾನು ಮದುವೆಯಾಗಿ ಪಾವನವಾದೆ ಬದುಕಿನ ಸಾರ್ಥಕತೆಯನ್ನು ಹೊಂದಿದೆನು ಎಂದಿದ್ದಾನೆ.

### ತವನಿಧಿಯನ್ನು ಪಡೆದದ್ದು:

ಜೇಡರ ದಾಸಿಮಯ್ಯ ಹಾಗೂ ದುಗ್ಗಳೆ ದಂಪತಿಗಳನ್ನು ಪರೀಕ್ಷಿಸುವುದಕ್ಕಾಗಿ ಶಿವ ಜಂಗಮ ಸ್ವರೂಪಿಯಾಗಿ ಬರುವ ಪ್ರಸಂಗ ಭೈರವೇಶ್ವರ ಕಾವ್ಯದಲ್ಲಿ ನಿರೂಪಿತವಾಗಿದೆ.

**ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ ಕೂಡಲಸಂಗಮ -೫೮೭೧೧೫, ತಾ.ಹುನಗುಂದ ಜಿ.ಬಾಗಲಕೋಟ ಮೊ-೯೪೮೦೨೨೬೩೭೨**

ನೇಯ್ಗೆಯ ಕಾಯಕದ ಈ ದಂಪತಿಗಳು ತಾಳ್ಮೆಯಿಂದ, ಕಲಾತ್ಮಕವಾಗಿ ರೇಷ್ಮೆಯ ವಸ್ತ್ರವನ್ನು ನೇಯ್ದು ಮಾರಾಟ ಮಾಡಲು ಜೇಡರ ದಾಸಿಮಯ್ಯ ತೆಗೆದುಕೊಂಡು ಹೋಗಲು ಮಾರ್ಗಮಧ್ಯದಲ್ಲಿ ಜಂಗಮ ಸ್ವರೂಪಿಯಾದ ಶಿವ ತನಗೆ ಬೇಕೆಂದು ಕೇಳಲು ದಾಸಿಮಯ್ಯ ಭಕ್ತಿ ಪೂರ್ವಕವಾಗಿ ನೀಡುತ್ತಾನೆ. ಅದಕ್ಕೆ ಜಂಗಮ ತೆಗೆದುಕೊಳ್ಳಲು ಒಪ್ಪದೆ ಮಾರಾಟಕ್ಕೆ ತೆಗೆದುಕೊಂಡು ಹೊರಟಿರುವೆ, ಯಾವುದೇ ಧನವಿಲ್ಲದೆ ನನಗೆ ನೀಡಿದರೆ ನಿನ್ನ ಸತಿ ಸುಮ್ಮನಿರುವಳೆ? ಎಂದಾಗ ಇಂಥ ಸತ್‌ಕಾರ್ಯಕ್ಕೆ ನನ್ನ ಸತಿಯ ಒಪ್ಪಿಗೆ ಸದಾ ಇದೆ ಎಂದು ಹೇಳಿದಾಗ ಜಂಗಮ ಸ್ವರೂಪಿ ಶಿವ ಗಹಗಹಿಸಿ ನಗುತ್ತಾ ಆ ರೇಷ್ಮೆ ವಸ್ತ್ರವನ್ನು ಹರಿದು ಚೂರು ಚೂರು ಮಾಡಿ ಒಂದನ್ನು ತನ್ನ ಶಿರಕ್ಕೆ ಸುತ್ತಿಕೊಳ್ಳುತ್ತಾನೆ. ಮತ್ತೊಂದನ್ನು ತನ್ನ ಕೈಯಲ್ಲಿದ್ದ ಕೋಲಿಗೆ ಸುತ್ತುತ್ತಾನೆ, ಇನ್ನೊಂದನ್ನು ತನ್ನ ಕೈಗೆ ಸುತ್ತಿಕೊಳ್ಳುತ್ತಾನೆ. ಇದನ್ನು ನೋಡಿದ ಜೇಡರ ದಾಸಿಮಯ್ಯ ತನ್ನಷ್ಟಕ್ಕೆ ತಾನು ಸುಮ್ಮನಿದ್ದು ತನ್ನ ಮನೆಗೆ ದಾಸೋಹಕ್ಕೆ ದಯಮಾಡಿಸಬೇಕೆಂದು ಬಿನ್ನವಿಸುತ್ತಾನೆ. ಜಂಗಮನ ಜೊತೆ ಮನೆಗೆ ಬಂದ ಜೇಡರ ದಾಸಿಮಯ್ಯ ರೇಷ್ಮೆಯ ವಸ್ತ್ರವನ್ನು ಜಂಗಮರಿಗೆ ನೀಡಿದ ವಿಷಯವನ್ನು ದುಗ್ಗಳೆಗೆ ತಿಳಿಸಿದಾಗ ದುಗ್ಗಳೆ ಸಂತೋಷಪಡುತ್ತಾಳೆ. ಜಂಗಮರಿಗೆ ಪಾದ ಪೂಜೆ ಮಾಡಿ ಸಂತೋಷದಿಂದ ಉಣಬಡಿಸುತ್ತಾರೆ.

ಜಂಗಮ ಸೇವೆಯಲ್ಲಿ ಸಂತೋಷ ಪಡುತ್ತಿರುವ ದಂಪತಿಗಳನ್ನು ಕಂಡು ಶಿವ ಸ್ವರೂಪಿ ಜಂಗಮ ಅವರಿಗೆ ರಹಸ್ಯವಾಗಿ ತವನಿಧಿಯಾಗಲೆಂದು, ದುಗ್ಗಳೆಯನ್ನು ಕರೆದು ಒಂದು ಹಿಡಿ ಧಾನ್ಯವನ್ನು ತರಿಸಿ ಆಶೀರ್ವದಿಸಿ ನೀನು ಮಹಾಪತಿವ್ರತೆ. ನಾನು ಕೊಡುವ ಈ ಧಾನ್ಯವನ್ನು ಮನೆಯ ಧಾನ್ಯ ಸಂಗ್ರಹಿಸುವಲ್ಲಿ ಶಿವಧ್ಯಾನ ಮಾಡುತ್ತ ಹಾಕು. ನಿಮಗೆ ಶಿವ ಒಳ್ಳೆಯುದನ್ನು ಮಾಡುತ್ತಾನೆ ಎಂದು ಹರಿಸಿ ಜಂಗಮರೂಪಿ ಶಿವ ನಿರ್ಗಮಿಸುತ್ತಾನೆ.

ದುಗ್ಗಳೆ ಭಕ್ತಿಯಿಂದ ಮನೆಯಲ್ಲಿನ ಮಡಿಕೆ ಕುಡಿಕೆಗಳಿಗೆ ಜಂಗಮನು ಹರಸಿ ನೀಡಿದ ಧ್ಯಾನ್ಯವನ್ನು ಹಾಕುತ್ತಾಳೆ, ಬೆಳಗ್ಗೆ ಎದ್ದು ನೋಡಲು ಎಲ್ಲಾ ತವನಿಧಿಗಳಾಗಿ ತುಂಬಿ ತುಳುಕುತ್ತಿರುತ್ತವೆ.

ದುಗ್ಗಳೆಯೂ ಕೂಡಾ ಪತಿ ದಾಸಿಮಯ್ಯನಂತೆ ಅನುಭವ ಮಂಟಪದಲ್ಲಿ ಹಿರಿಯ ಶರಣೆಯಾಗಿ ವಚನ ರಚಿಸಿದ್ದಾಳೆ. ಇವಳ ವಚನಗಳಲ್ಲಿ ಬಸವಾದಿ ಶರಣರ ದರ್ಶನವಿದೆ.

**ಬಸವಣ್ಣನಿಂದ ಗುರುಪ್ರಸಾದಿಯಾದೆನು**
**ಚನ್ನಬಸವಣ್ಣನಿಂದ ಲಿಂಗಪ್ರಸಾದಿಯಾದೆನು**
**ಪ್ರಭುದೇವರಿಂದ ಜಂಗಮ ಪ್ರಸಾದಿಯಾದೆನು**
**ಮರುಳ ಶಂಕರದೇವರಿಂದ ಮಹಾಪ್ರಸಾದಿಯಾದೆನು**
**ಇಂತೀ ಚತುರ್ವಿಧವು ಏಕೀಭವಿಸಿ ಪ್ರಾಣಲಿಂಗವಾದ**
**ಮಹಾಮಹಿಮಂಗೆ ಶರಣೆಂದು ಬದುಕಿದೆನಯ್ಯಾ**
**ದಾಸಯ್ಯಪ್ರಿಯ ರಾಮನಾಥ**

ಗುರು, ಲಿಂಗ, ಜಂಗಮ, ಪ್ರಸಾದಗಳನ್ನು ತನಗಿಂತ ಕಿರಿಯರಾದ ಶರಣರಲ್ಲಿ ಕಂಡು ಸುಖಿಸಿದ ದುಗ್ಗಳೆಯ ಅಧ್ಯಾತ್ಮದ ಅರಿವಿನ ಎತ್ತರವನ್ನು ಮೇಲಿನ ವಚನದಲ್ಲಿ ಕಾಣಬಹುದು.

**ಭಕ್ತನಾದಡೆ ಬಸವಣ್ಣನಂತಾಗಬೇಕು**
**ಜಂಗಮವಾದಡೆ ಪ್ರಭುದೇವರಂತಾಗಬೇಕು**
**ಯೋಗಿಯಾದಡೆ ಸಿದ್ದರಾಮಯ್ಯನಂತಾಗಬೇಕು**
**ಭೋಗಿಯಾದಡೆ ಚನ್ನಬಸವಣ್ಣನಂತಾಗಬೇಕು**
**ಐಕ್ಯನಾದಡೆ ಅಜಗಣ್ಣನಂತಾಗಬೇಕು**
**ಇಂತಿವರ ಕಾರುಣ್ಯಪ್ರಸಾದವ ಕೊಂಡು**
**ಸತ್ತಹಾಗಿರಬೇಕಲ್ಲದೆ ತತ್ವದ ಮಾತು ಎನಗೇಕಯ್ಯಾ**
**ದಾಸಯ್ಯಪ್ರಿಯ ರಾಮನಾಥ**

ಸಮಕಾಲೀನ ಶರಣರಿಂದ ತಾನು ಹೇಗೆ ಪ್ರಭಾವಿತಳಾದೆನೆಂಬ ಸಂಗತಿಯನ್ನು ಮೇಲಿನ ವಚನದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ದುಗ್ಗಳೆ ವ್ಯಕ್ತಪಡಿಸಿದ್ದಾಳೆ.

■■

# ಸಿಂಧೂ V/S ಹಿಂದೂ: ಭಾರತೀಯ ಧರ್ಮ ದರ್ಶನ ಪರಿಷತ್ ಒಂದು ಚಿಂತನೆ

● ಚಂದ್ರಶೇಖರ ಕಗ್ಗಲ್ಲುಗೌಡ್ರು

ಒಂದಿಲ್ಲ ಒಂದು ಕಾರಣಕ್ಕೆ ಪೇಜಾವರ ಶ್ರೀಗಳು ಸುದ್ದಿಯಾಗುತ್ತಿರುತ್ತಾರೆ. ತಮಗೆ ಸಂಬಂಧಿಸಿರಬಹುದು ಅಥವಾ ಸಂಬಂಧಿಸದೆ ಇರಬಹುದು, ಅವರಂತೂ ಬ್ರೇಕಿಂಗ್ ನ್ಯೂಸ್ ಕೊಡುತ್ತಿರುತ್ತಾರೆ. ಸೋಮವಾರ ೦೯ ಸೆಪ್ಟೆಂಬರ್ ೨೦೧೯ ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ತಮ್ಮ ಪ್ರತಿಕ್ರಿಯೆಯನ್ನು ಲಿಂಗಾಯತ ಧರ್ಮದ ವಿಚಾರವಾಗಿ ಹಂಚಿಕೊಂಡಿದ್ದಾರೆ. "ನಾನು ಎಲ್ಲಿಯೂ ಕೂಡ ಪಂಥಾಹ್ವಾನ ಶಬ್ದ ಪ್ರಯೋಗವನ್ನೇ ಮಾಡಿಲ್ಲ. ಬಹಿರಂಗ ಆಹ್ವಾನವೆಂದೂ ಹೇಳಿಲ್ಲ. ಪ್ರತ್ಯೇಕ ಸ್ಥಳದಲ್ಲಿ ಕೆಲವೇ ಮಂದಿ ಸ್ನೇಹ ಸಂವಾದವನ್ನು ಮಾಡೋಣವೆಂದೇ ಹೇಳಿದ್ದೇನೆ. ಮಾಧ್ಯಮಗಳಲ್ಲಿ ಸ್ಪಷ್ಟೀಕರಿಸಿದ್ದೇನೆ." ಇದು ಅವರ ಪ್ರತಿಕ್ರಿಯೆಯ ಮೊದಲ ಪ್ಯಾರಾಗ್ರಾಫ್‌ನ ಆಯ್ದ ಭಾಗ. ಯಾವ ಮಾಧ್ಯಮದಲ್ಲೂ ಕೂಡ ಸ್ನೇಹ ಸಂವಾದ ಪದ ಪ್ರಯೋಗ ಆಗಿಲ್ಲ. ಅಲ್ಲೆಲ್ಲ ಬಹಿರಂಗ ಆಹ್ವಾನ, ಪಂಥಾಹ್ವಾನ ಶಬ್ದಗಳೇ ಪ್ರಯೋಗವಾಗಿರುವಂತಹದ್ದು. ಅದನ್ನು ಶ್ರೀಗಳು ಗಮನಿಸಲಿಲ್ಲವೇ? ಅಥವಾ ಗಮನಿಸಿದ್ದರೂ ಜಾಣ ಕುರುಡು ಪ್ರದರ್ಶನ ಮಾಡಿದ್ದರೇ? ಅವರೇ ಉತ್ತರಿಸಬೇಕು. ಇಲ್ಲದಿದ್ದಲ್ಲಿ ಮಾಧ್ಯಮದಲ್ಲಿ ಪ್ರಕಟಗೊಂಡ ಮರುದಿನವೇ ತಪ್ಪಾಗಿ ವರದಿ ಆಗಿದೆ ಎಂದು ಸ್ಪಷ್ಟಪಡಿಸಬಹುದಿತ್ತು. ಆದರೆ ಅವರು ಅದನ್ನು ಮಾಡದೆ ಮೌನವಿರಲು ಕಾರಣ ಯಾರೊಬ್ಬರೂ ಪಂಥಾಹ್ವಾನ ಸ್ವೀಕರಿಸಲು ಮುಂದೆ ಬರುವುದಿಲ್ಲ ಎಂಬ ಭಾವನೆ ಅವರಲ್ಲಿ ಮನೆ ಮಾಡಿತ್ತು ಎಂಬುವುದು ಮೇಲ್ನೋಟಕ್ಕೆ ಗೋಚರಿಸುತ್ತದೆ. ಯಾವಾಗ ಸಾಣೇಹಳ್ಳಿ ಶ್ರೀಗಳು ಪಂಥಾಹ್ವಾನ ಒಪ್ಪಿಕೊಂಡರೊ ಆಗ ಇವರಿಗೆ ಅನೇಕ ವೈದಿಕ ಚಿಂತಕರಿಂದ ಮಾಧ್ವ ಯತಿ ಶ್ರೇಷ್ಠರಾದ ಪೇಜಾವರ ಶ್ರೀಗಳಿಗೆ ಈ ವಯಸ್ಸಿನಲ್ಲಿ ಇದೆಲ್ಲ ಬೇಕಿತ್ತಾ? ಶರಣ ಶ್ರೇಷ್ಠರಾದ ಪಂಡಿತಾರಾಧ್ಯ ಶ್ರೀಗಳೊಂದಿಗೆ ಸಂವಾದದ ಅಗತ್ಯವಿದೆಯೇ? ತ್ರಿಮತಸ್ಥರ ಭೇದವನ್ನೇ ಹೋಗಲಾಡಿಸದ ಇವರಿಗೆ ಲಿಂಗಾಯತರ ಉಸಾಬರಿ ಏಕೆ ಬೇಕಿತ್ತು? ಸಂವಾದದಲ್ಲಿ ಉಭಯ ಶ್ರೀಗಳು ತಮ್ಮ ತಮ್ಮ ಸಿದ್ಧಾಂತಗಳಿಗೆ ಬದ್ಧರಾಗುವುದರಿಂದ ಸಮಸ್ಯೆಗೆ ಪರಿಹಾರ ಸಿಗಬಹುದೆ? ಎಂಬಿತ್ಯಾದಿ ಪ್ರಶ್ನೆಗಳು ಸುಳಿದಾಡಿದ ಮೇಲೆ ಪೇಜಾವರ ಶ್ರೀಗಳು ಈ ರೀತಿಯಾಗಿ ಮಾತನಾಡುತ್ತಿದ್ದಾರೆ ಎಂದೆನಿಸದಿರದು. ಪದೇ ಪದೇ ಅವರು ಸೌಜನ್ಯ ಪೂರ್ವಕವಾಗಿ ಒಬ್ಬ ಸಹೋದರನಾಗಿ ಮಾತನಾಡುತ್ತಿದ್ದೇನೆ ಎಂದು ಹೇಳುವುದನ್ನು ನೋಡಿದ್ದೇವೆ.

"ಹಿಂದೂ ಧರ್ಮ" ಶಬ್ದದ ಅರ್ಥವೇನು ಎಂಬುದನ್ನು ವಿಮರ್ಶಿಸೋಣ. ಹಿಂದೂ ಎಂಬುದು ಧರ್ಮವಾಚಕವಲ್ಲ. ಹಿಂದೂ ಶಬ್ದವು ದೇಶ ವಾಚಕವಾಗಿದೆ. ಸಿಂಧೂ ಶಬ್ದದಿಂದ ಇದು ಹುಟ್ಟಿದೆ. ವಿದೇಶಿಯರು ಸಿಂಧೂ ನದಿಯನ್ನು ನೋಡಿ ಈ ದೇಶವನ್ನೇ ಸಿಂಧೂ ದೇಶ ಎಂದು ಕರೆದರು. ಸಿಂಧೂ ಶಬ್ದವೇ ಹಿಂದೂ ಎಂದು ಪರಿಣಾಮಗೊಂಡಿದೆ. ಈ ದೇಶವನ್ನೇ ಹಿಂದೂಸ್ಥಾನ, ಹಿಂದೂ ದೇಶವೆಂದು ಕರೆಯಲಾಗಿದೆ. ಕವಿ ಇಕ್ಬಾಲರು "ಸಾರೆ ಜಹಾಂ ಸೇ ಅಚ್ಛಾ ಹಿಂದುಸ್ಥಾನ ಹಮಾರಾ...."ಎಂದು ಹಾಡಿದ್ದಾರೆ. "ಜೈ ಹಿಂದ್" ಎಂಬ ಘೋಷಣೆಯು ಪ್ರಸಿದ್ಧವಾಗಿದೆ. ಆದುದರಿಂದ ಹಿಂದೂ ಎಂಬುದು ದೇಶ ವಾಚಕವೇ ಹೊರತು ಧರ್ಮವಾಚಕವಲ್ಲ". ಎಂದು ಖಚಿತವಾಗಿ ಪೇಜಾವರ ಶ್ರೀಗಳು ಎರಡನೇ ಪ್ಯಾರಾಗ್ರಾಫ್‌ನಲ್ಲಿ ಹೇಳಿದ್ದಾರೆ. ಈ ಮಾತನ್ನು ಹಾಗೂ ಪೇಜಾವರ ಶ್ರೀಗಳ ಎದೆಗಾರಿಕೆಯನ್ನು ಪ್ರತಿಯೊಬ್ಬ ಭಾರತೀಯರು ಪ್ರಶಂಸಿಸಲೇ ಬೇಕು. ಈ ಹಿನ್ನೆಲೆಯಲ್ಲಿಯೇ ದೇಶದ ಘನ ನ್ಯಾಯಾಲಯ ಹಿಂದೂ ಎಂದರೆ ಧರ್ಮವಲ್ಲ, ಅದೊಂದು ಜೀವನ ಪದ್ಧತಿ ಎಂದು ಸಾರಿ ಹೇಳಿರುವುದು. ಅಲ್ಲದೆ ಸಾರ್ವಭೌಮ ರಾಷ್ಟ್ರದ ಪ್ರಧಾನಿ ಮೋದಿಯವರು ಕೂಡ ಇದನ್ನು ಟಿ. ವಿ. ಸಂದರ್ಶನದಲ್ಲಿ ಪುನರುಚ್ಚರಿಸಿದ್ದಾರೆ.

ಹಾಗಾದರೆ ಸಿಂಧೂ ಪದದ ಅರ್ಥವೇನು? ಸಿಂಧೂ ಎಂದರೆ ಪವಿತ್ರವಾಗಿರುವಂತಹದು, ಮಂಗಲಕರವಾಗಿರುವಂತಹದು, ಅದನ್ನು ನ್ಯಾಯಾಲಯದ ಪರಿಭಾಷೆಯಲ್ಲಿ ನೋಡುವುದಾದರೆ ಕ್ರಮಬದ್ಧವಾಗಿರುವುದು, ಯೋಗ್ಯವಾಗಿರುವುದು, ನ್ಯಾಯಯುತವಾಗಿರುವುದು, ಸಂವಿಧಾನದ ಅಥವಾ ಒಪ್ಪಿತವಾದ ಚೌಕಟ್ಟಿನಲ್ಲಿರುವುದು ಎಂದರ್ಥ. ಸಿಂಧುಗೆ ವಿರುದ್ಧ ಪದ ಅಸಿಂಧು. ಅಸಿಂಧು

**ಪದವೀಧರ ಪ್ರಾಥಮಿಕ ಶಿಕ್ಷಕ, ಸಂಚಿಯ ಹೊನ್ನಮ್ಮ ಸರಕಾರಿ ಪ್ರೌಢಶಾಲೆ, ಹಳೆನಗರ ಭದ್ರಾವತಿ ಜಿ. ಶಿವಮೊಗ್ಗ-೫೭೭೩೦೧**

ಪದವನ್ನು ಬಿಡಿಸಿ ಹೇಳಬೇಕಾಗಿಲ್ಲ. ಪರ್ಶಿಯನ್ನರಿಂದ ಸಿಂಧು ಪದ ಹಿಂದುವಾಗಿ, ಗ್ರೀಕರಿಂದ ಇಂಡಸ್ ಆಗಿ, ಬ್ರಿಟೀಷರಿಂದ ಇಂಡಿಯಾ ಆಗಿದೆ ಎಂದು ಇತಿಹಾಸ ಮಾತನಾಡುತ್ತದೆ. ವಿದೇಶಿಯರ ಆಳ್ವಿಕೆ ಗುಲಾಮಿ ಸಂಕೇತವೆಂದು ಸ್ವಾಭಿಮಾನಕ್ಕೆ ಕುಂದುಂಟಾಯಿತ್ತೆಂದು ಅಹಿಂಸಾ ಹೋರಾಟ, ಕ್ರಾಂತಿಯ ಹೋರಾಟ ಹಾಗೂ ಸಶಸ್ತ್ರ ಹೋರಾಟಗಳ ಮೂಲಕ ಸ್ವಾತಂತ್ರ್ಯ ಗಳಿಸಿಕೊಂಡಿದ್ದೇವೆ. ಸಾರ್ವಭೌಮ ರಾಷ್ಟ್ರದ ಪ್ರಜೆಗಳಾಗಿದ್ದೇವೆ. ಇಷ್ಟಾದರೂ ಸಿಂಧೂ ಪದಕ್ಕೆ ಇರುವ ಅನನ್ಯವಾದ ಅರ್ಥಗಳು ಅಪಭ್ರಂಶಗೊಂಡ ಹಿಂದೂ ಪದಕ್ಕೆ ಇರಲಿಕ್ಕೆ ಸಾಧ್ಯವೇ? ಈ ಗುಲಾಮಿ ಹಿಂದೂ ಪದದ ಬದಲಾಗಿ ಸಿಂಧೂ ಪದ ಪ್ರಯೋಗ ಮಾಡಬಹುದಲ್ಲವೇ? ಹೂವಿನಕೇರಿ ಹುಕ್ಕೇರಿ ಆಗಿ, ಹೂಬಳ್ಳಿ ಹುಬ್ಬಳ್ಳಿಯಾಗಿ ಅಪಭ್ರಂಶಗೊಂಡಿರುವುದನ್ನು ನೋಡಿದರೆ ಹೂವಿನಕೇರಿ ಹಾಗೂ ಹೂಬಳ್ಳಿ ಪದಗಳಿಗಿರುವ ಆಪ್ಯಾಯತೆ ಹುಕ್ಕೇರಿ ಹಾಗೂ ಹುಬ್ಬಳ್ಳಿ ಪದಪ್ರಯೋಗಕ್ಕೆ ಇಲ್ಲ ಎಂಬುದು ತಿಳಿದು ಬರುತ್ತದೆ. ಅದೇ ರೀತಿಯ ಆಪ್ಯಾಯತೆ ಹಿಂದೂ ಪದದಿಂದ ಸಿಗುವುದಿಲ್ಲ. ಸಂಸ್ಕೃತ ಘನ ವಿದ್ವಾಂಸರಾದ ಪೇಜಾವರ ಶ್ರೀಗಳಿಗೆ ಇದೆಲ್ಲ ತಿಳಿಯದ ವಿಚಾರವೇನಲ್ಲ. ಆದರೂ ಹಿಂದೂ ಪದದ ಮೇಲೆ ಮಮಕಾರ.

ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಾ "ಹಿಂದೂ ದೇಶದಲ್ಲಿ ಆವಿರ್ಭಾವಗೊಂಡ ಅಥವಾ ಹಿಂದೂ ದೇಶದಲ್ಲಿ ಹುಟ್ಟಿದ ಪ್ರವಾದಿಗಳಿಂದ ಪ್ರವರ್ತಿತವಾದ ಧರ್ಮವೇ ಹಿಂದೂ ಧರ್ಮ". ಎಂದು ಹೇಳಿರುವುದು. ಇಲ್ಲಿ ಬಹುಮುಖ್ಯವಾದ ತರ್ಕವಿದೆ. ಹಿಂದೂ ದೇಶದಲ್ಲಿ ಜನಿಸಿದ ಧರ್ಮ ಹಿಂದೂ ದೇಶದ ಧರ್ಮ ಆಗಬೇಕು ಅಥವಾ ಹಿಂದೂಸ್ಥಾನದಲ್ಲಿ ಜನಿಸಿದ ಧರ್ಮ ಹಿಂದೂಸ್ಥಾನದ ಧರ್ಮ ಆಗಬೇಕಾಗಿತ್ತು. ಆದರೆ ಪೇಜಾವರ ಶ್ರೀಗಳ ಮಾತಿನಲ್ಲಿ ಅದು ವ್ಯಕ್ತವಾಗದೇ ಹಿಂದೂ ಧರ್ಮ ಎಂದೇಳಿ ಹಲವು ಅನುಮಾನಗಳಿಗೆ ಕಾರಣವಾಗಿರುವುದು. ಹಿಂದೂ ದೇಶದಲ್ಲಿ ದೇಶಕ್ಕೆ, ಹಿಂದೂ ಸ್ಥಾನದಲ್ಲಿ ಸ್ಥಾನಕ್ಕೆ ಬಹಳ ಮಹತ್ವವಿದೆ ಎಂಬುದನ್ನು ಮರೆಯಬಾರದು. ಅವರು ಮುಂದುವರೆಯುತ್ತಾ "ಶಂಕರ, ರಾಮಾನುಜ, ಮಧ್ವ, ಬಸವೇಶ್ವರ, ಬುದ್ಧ, ನಾನಕ, ಮಹಾವೀರ, ರೇಣುಕ, ಇವರೆಲ್ಲರೂ ಹಿಂದೂ ದೇಶದಲ್ಲಿ ಹುಟ್ಟಿದ ಪ್ರವಾದಿಗಳೆಂದು, ಇವರು ಸ್ಥಾಪಿಸಿದ ಧರ್ಮಗಳೆಲ್ಲವೂ ಹಿಂದೂ ಧರ್ಮವೆ ಆಗುತ್ತೆಂದು, ಇವರಲ್ಲಿ ಎಷ್ಟೇ ಭಿನ್ನತೆ ಇದ್ದರೂ ಈ ಎಲ್ಲ ಧರ್ಮಗಳೂ ಹಿಂದೂ ಧರ್ಮವೇ ಆಗಿವೆ ಎಂದು, ದೇವರನ್ನು ಒಪ್ಪಲಿ ಒಪ್ಪದೇ ಇರಲಿ, ಜಾತಿಭೇದ ಒಪ್ಪಲಿ ಅಥವಾ ಒಪ್ಪದೇ ಇರಲಿ, ವೇದವನ್ನು ಒಪ್ಪಲಿ ಅಥವಾ ಒಪ್ಪದಿರಲಿ ಎಷ್ಟೇ ವ್ಯತ್ಯಾಸವಿರಲಿ ಇವೆಲ್ಲವೂ ಹಿಂದೂ ದೇಶದಲ್ಲಿ ಹುಟ್ಟಿದ್ದರಿಂದ ಹಿಂದೂ ಧರ್ಮಗಳೇ ಆಗಿವೆ ಎಂದು ಹಿಂದೂ ಧರ್ಮ ಶಬ್ದಕ್ಕೆ ಈ ಅರ್ಥವನ್ನು ಬಿಟ್ಟು ಬೇರೆ ಅರ್ಥವನ್ನು ಮಾಡಲು ಸಾಧ್ಯವೇ ಇಲ್ಲವೆಂದು ವೈದಿಕ ಧರ್ಮವೇ ಹಿಂದೂ ಧರ್ಮ ಎಂಬುದಕ್ಕೆ ಯಾವ ಆಧಾರವೂ ಇಲ್ಲ" ಎಂದು ಹೇಳಿದ್ದಾರೆ. ನಮ್ಮ ಪ್ರಶ್ನೆ ಶಂಕರ, ರಾಮಾನುಜ, ಮಧ್ವ ಹಾಗೂ ರೇಣುಕರು ಯಾವ ಧರ್ಮ ಸ್ಥಾಪಿಸಿದರು? ಬುದ್ಧನಿಂದ ಬೌದ್ಧ ಧರ್ಮ, ಮಹಾವೀರ ಜಿನನಾಗಿದ್ದರಿಂದ ಜೈನ ಧರ್ಮ, ಬಸವಣ್ಣನವರು ವ್ಯಕ್ತಿಯ ಅಂಗದಲ್ಲಿ ಲಿಂಗ ಕಂಡಿದ್ದರಿಂದ ಲಿಂಗಾಯತ ಧರ್ಮ, ನಾನಕರಿಗೆ ಜನ ಶಿಷ್ಯರಾಗಿದ್ದರಿಂದ ಸಿಖ್ ಧರ್ಮ ಉದಯಿಸಿತು ಎಂಬುವುದು ನಿರ್ವಿವಾದ. ಇದೇ ತೆರನಾಗಿ ಶಂಕರ, ರಾಮಾನುಜ, ಮಧ್ವರಿಗೆ ವೇದಗಳೇ ಪ್ರಧಾನ ಹಾಗೂ ಆಧಾರವಾಗಿದ್ದರಿಂದ ಅವರ ಅನುಯಾಯಿಗಳನ್ನು ವೈದಿಕರೆಂದು ಕರೆಯುವುದು ಸಮಂಜಸವಾಗುತ್ತದೆ. ಆದರೆ ಪೇಜಾವರ ಶ್ರೀಗಳು ಅರ್ಥಗರ್ಭಿತವಾಗಿ ವೈದಿಕರು ಎಂದು ಕರೆದುಕೊಳ್ಳದೆ ಹಿಂದೂ ಎಂದು ಹೇಳುವುದು ವೈರುಧ್ಯವೇ ಸರಿ. ಇದಕ್ಕೆ ಇನ್ನ್ಯಾವ ಆಧಾರ ಕೊಡಬೇಕೋ ಪೇಜಾವರ ಶ್ರೀಗಳು ಒಬ್ಬರೇ ಬಲ್ಲರು.

ಮೂರನೇ ಪ್ಯಾರಾದಲ್ಲಿ "ಜಾತಿ ವ್ಯವಸ್ಥೆಯನ್ನು ಒಪ್ಪದ ರಾಮಕೃಷ್ಣಾಶ್ರಮ, ಆರ್ಯ ಸಮಾಜ, ಸ್ವಾಮಿ ನಾರಾಯಣ ಪಂಥ, ಕುರುಬರ ಹಾಲುಮತ, ಈಡಿಗ, ಬಿಲ್ಲವರ ನಾರಾಯಣ ಗುರು ಪಂಥ ಮುಂತಾದ ಅನೇಕ ಧರ್ಮಗಳು ಜಾತಿ ವ್ಯವಸ್ಥೆಯನ್ನು ಒಪ್ಪದಿದ್ದರೂ ಹಿಂದೂ ಧರ್ಮವೇ ಆಗಿಲ್ಲವೇ?" ಎಂಬುದು ಪೇಜಾವರ ಶ್ರೀಗಳ ಉವಾಚ. ಗುರುಗಳೇ ಇವರೆಲ್ಲರೂ ಜಾತಿ ನಿರಾಕರಿಸಿದ್ದರೂ ಇವರು ಆರಾಧಿಸುವುದು ರಾಮ, ಕೃಷ್ಣ, ದುರ್ಗೆ, ಗಣಪತಿ, ಕಾಳಿ, ನಾರಾಯಣ ಮುಂತಾದ ಮುಕ್ಕೋಟಿ ದೇವರನ್ನಲ್ಲವೇ? ಆದ್ದರಿಂದ ಸಹಜವಾಗಿ ಇವರೆಲ್ಲರೂ ವೈದಿಕರ ಪರಿಧಿಯಲ್ಲಿ ಬರುತ್ತಾರೆ. ಅದರಲ್ಲಿ ವಿಶೇಷವೇನಿಲ್ಲ. ಆದರೆ ತಾವು ಇವುಗಳನ್ನು ಅನೇಕ ಧರ್ಮಗಳೆಂದು ಯಾವ ಆಧಾರದಲ್ಲಿ ಉಲ್ಲೇಖಿಸಿದ್ದೀರಿ? ನಮಗೆ ಅರ್ಥವಾಗಿಲ್ಲ.

"ಕ್ರೈಸ್ತ ಮತದಲ್ಲಾದ ಕ್ರಾಂತಿ, ಸುಧಾರಣೆಯ ಫಲವಾಗಿ ಪ್ರೊಟೆಸ್ಟೆಂಟ್ ಮತವು ಹುಟ್ಟಿದಂತೆ ಹಿಂದೂ ಧರ್ಮದಲ್ಲಾದ ಕ್ರಾಂತಿಯ ಪರಿಣಾಮವಾಗಿ ಲಿಂಗಾಯತ ಧರ್ಮ ಹುಟ್ಟಿದೆ" ಎಂದು ಪೇಜಾವರ ಶ್ರೀಗಳ ಅಭಿಪ್ರಾಯವಾಗಿದೆ. ಕ್ರೈಸ್ತ ಮತದಲ್ಲಿ ಯೇಸು ಕ್ರಿಸ್ತನನ್ನು, ಬೈಬಲನ್ನು ಒಪ್ಪಿಕೊಂಡೆ ಪ್ರೊಟೆಸ್ಟೆಂಟ್‌ರು ಕ್ರಾಂತಿ ಮಾಡಿರುವುದು. ಆದರೆ ಬಸವಣ್ಣನವರು ಧಾರ್ಮಿಕ ಸ್ವಾತಂತ್ರ್ಯ ವಂಚಿತರಿಗೆ ತಮ್ಮ ವೈದಿಕ ಶೈವ ಧರ್ಮವನ್ನು ತ್ಯಜಿಸಿ ಲಿಂಗಾಯತ ಧರ್ಮವನ್ನು

ಹೊಸದಾಗಿ ಸ್ಥಾಪಿಸಿ ಕರುಣಿಸಿರುವುದು ಪೇಜಾವರ ಶ್ರೀಗಳಿಗೆ ಕಾಣದಿರುವುದು ಆಶ್ಚರ್ಯವೇ ಸರಿ. ಇದು ಜಾಣ ಕುರುಡು ಎನ್ನಬಹುದು. "ಅದ್ವೈತ ಮತದ ಪರಬ್ರಹ್ಮನು ನಿರ್ಗುಣ, ನಿರಾಕಾರ. ದ್ವೈತ, ವಿಶಿಷ್ಟಾದ್ವೈತದ ಪರಬ್ರಹ್ಮನು ಸಗುಣ ಸಾಕಾರ. ಆದರೂ ಈ ಮೂರು ಧರ್ಮಗಳು ವೈದಿಕ ಧರ್ಮಗಳು ಹಾಗೂ ಹಿಂದೂ ಧರ್ಮಗಳೇ ಆಗಿವೆಯಲ್ಲವೇ?" ಎಂಬುದು ಪೇಜಾವರ ಶ್ರೀಗಳ ಪ್ರಶ್ನೆ. ಎರಡನೇ ಪ್ಯಾರಾದಲ್ಲಿ ವೈದಿಕ ಧರ್ಮವೇ ಹಿಂದೂ ಧರ್ಮ ಎಂಬುದಕ್ಕೆ ಯಾವ ಆಧಾರವೂ ಇಲ್ಲ ಎಂದೇಳಿದ ಶ್ರೀಗಳು ಇಲ್ಲಿ ವೈದಿಕ ಧರ್ಮ ಪದ ಪ್ರಯೋಗ ವಿರೋಧಾಭಾಸವಲ್ಲವೆ? ಸತ್ಯ ಗೊತ್ತಿದ್ದರೂ ಜಾಣ ಮೂಗರಂತೆ ನಟಿಸುತ್ತಿದ್ದಾರೆ. ಮುಂದುವರೆದು "ಈ ಎಲ್ಲಾ ವಿಭಿನ್ನ ಧರ್ಮಗಳ ಸಮುಚ್ಚಯವೇ ಹಿಂದೂ ಧರ್ಮವೆನಿಸಿದೆ" ಎಂದಿರುವುದು. ಇಲ್ಲಿ ಹಿಂದೂಸ್ಥಾನದ ಧರ್ಮವೆನಿಸಿದರೆ ಮಾತ್ರ ಸಮಂಜಸವಾಗುತ್ತದೆಯೇ ಹೊರತು ಹಿಂದೂ ಧರ್ಮ ಎಂದರೆ ಅಲ್ಲ.

"ಜೈನ, ಬೌದ್ಧ, ಸಿಖ್ ಧರ್ಮಗಳು ಬ್ರಿಟೀಷರ ಕಾಲದಲ್ಲಿ ಅವರ ಒಡೆದು ಆಳುವ ನೀತಿಯಿಂದ ಪ್ರತ್ಯೇಕ ಸ್ವತಂತ್ರ ಧರ್ಮಗಳಾಗಿವೆ ಎಂದು ಭಾವಿಸಿದ್ದೆ, ಸ್ವತಂತ್ರ ಬಂದ ಮೇಲೆ ಇವು ಬೇರೆಯಾಗಿದ್ದು ನನಗೆ ಗೊತ್ತಾಗಿದ್ದರೆ ಆ ಕಾಲದಲ್ಲಿ ಅದಕ್ಕೂ ನಾನು ವಿರೋಧ ವ್ಯಕ್ತಪಡಿಸುತ್ತಿದ್ದೆ" ಎಂದು ಪೇಜಾವರ ಶ್ರೀಗಳು ವ್ಯರ್ಥಾಲಾಪ ಮಾಡಿದ್ದಾರೆ. ೧೯೬೨ ರಲ್ಲಿ ಸಿಖ್ ಧರ್ಮ ಸ್ವತಂತ್ರ ಮಾನ್ಯತೆ ಗಳಿಸಿದಾಗ ಆ ಕಾಲದಲ್ಲಿ ಸಂವಹನ ಕೊರತೆಯಿಂದಾಗಿ ಶ್ರೀಗಳಿಗೆ ವಿರೋಧಿಸಲಿಕ್ಕೆ ಸಾಧ್ಯವಾಗದಿರಬಹುದು. ಆದರೆ ೧೯೯೧–೯೨ ರಲ್ಲಿ ಬೌದ್ಧ ಧರ್ಮ ಹಾಗೂ ೨೦೧೪ರಲ್ಲಿ ಜೈನ ಧರ್ಮ ಸ್ವತಂತ್ರಗೊಂಡಾಗ ಪೇಜಾವರ ಶ್ರೀಗಳು ಘನ ಪಂಡಿತರಾಗೇ ಇದ್ದರು. ಈಗಲೂ ಘನ ಪಂಡಿತರೇ. ಅವರಿಗೆ ಸಂವಹನ ಕೊರತೆ ಉಂಟಾಗಿದೆ ಎಂದರೆ ಯಾರೂ ನಂಬುವುದಿಲ್ಲ. ಬೌದ್ಧರು ಹಾಗೂ ಜೈನರು ಈ ದೇಶದಲ್ಲಿ ಅಷ್ಟೇನು ಪ್ರಭಾವಶಾಲಿಗಳಲ್ಲವೆಂದು ಶ್ರೀಗಳು ಭಾವಿಸಿ ನಿರ್ಲಕ್ಷಿಸಿರಬಹುದಾಗಿದೆ. ಆದರೆ ಲಿಂಗಾಯತದ ಹೆಸರು ಕೇಳಿದರೆ ಮೈಯೆಲ್ಲ ಕಿವಿ, ಮೈಯೆಲ್ಲ ಕಣ್ಣಾಗಿ ಎಚ್ಚರಿಕೆವಹಿಸುತ್ತಿದ್ದಾರೆ. ಕಾರಣ ಲಿಂಗಾಯತದ ಪ್ರಭಾವ ಬಿಡಿಸಿ ಹೇಳಬೇಕಾಗಿಲ್ಲ.

"ಲಿಂಗಾರಾಧಕರೆಲ್ಲರೂ ಹಿಂದೂಗಳೇ ಎಂದು, ಲಿಂಗಾಯತ ಧರ್ಮವು ಪ್ರತ್ಯೇಕ ಧರ್ಮವೆಂದು ವಾದಿಸುವವರು ಕಳುಹಿಸಿದ ಪುಸ್ತಕಗಳಲ್ಲಿ ಏನೂ ಹೊಸ ವಿಷಯಗಳಿಲ್ಲ, ವೈದಿಕ ಧರ್ಮಕ್ಕೂ ಲಿಂಗಾಯತ ಧರ್ಮಕ್ಕೂ ಇರುವ ವ್ಯತ್ಯಾಸವನ್ನು ತಿಳಿಸಲಾಗಿದೆಯಷ್ಟೆ. ಇದರಿಂದ ಲಿಂಗಾಯತ ಧರ್ಮವು ಹಿಂದೂ ಧರ್ಮಕ್ಕಿಂತ ಬೇರೆ ಎಂದು ಸಿದ್ಧವಾಗುವುದಿಲ್ಲ, ದ್ವೈತ, ಅದ್ವೈತಗಳಿಗೆ ಬಹಳಷ್ಟು ತೀವ್ರ ವ್ಯತ್ಯಾಸವಿದ್ದರೂ ಅವೆರಡೂ ವೈದಿಕ ಧರ್ಮ ಹಾಗೂ ಹಿಂದೂ ಧರ್ಮ ಆಗಿಲ್ಲವೇ?" ಎಂದು ಅಭಿಪ್ರಾಯ ವ್ಯಕ್ತಪಡಿಸಿ ಪೇಜಾವರ ಶ್ರೀಗಳು ಗೊಂದಲಕ್ಕೊಳಗಾಗಿದ್ದಾರೆ.

ಎರಡನೇ ಪ್ಯಾರಾದಲ್ಲಿ ವೈದಿಕ ಧರ್ಮವೇ ಹಿಂದೂ ಧರ್ಮ ಎಂಬುದಕ್ಕೆ ಯಾವ ಆಧಾರವೂ ಇಲ್ಲ ಎಂದು ಖಡಾಖಂಡಿತವಾಗಿ ನುಡಿದಿದ್ದ ಪೇಜಾವರ ಶ್ರೀಗಳು ಈ ಮೇಲಿನ ಮಾತಿನಲ್ಲಿ ವೈದಿಕ ಧರ್ಮ ಹಾಗೂ ಹಿಂದೂ ಧರ್ಮ ಎಂದು ಉಲ್ಲೇಖಿಸಿದ್ದಾರೆ. ಅವರ ದೃಷ್ಟಿಯಲ್ಲಿ ವೈದಿಕ ಧರ್ಮ ಹಾಗೂ ಹಿಂದೂ ಧರ್ಮ ಬೇರೆ ಬೇರೆ ಎಂದು ತಿಳಿದುಕೊಂಡಿರುವಂತಿದೆ. ಹಾಗಾದರೆ ವೈದಿಕರೆಂದರೆ ಯಾರು? ಹಿಂದೂಗಳೆಂದರೆ ಯಾರು? ವೈದಿಕರೆಂದರೆ ಬ್ರಾಹ್ಮಣರೇ? ಹಿಂದೂಗಳೆಂದರೆ ಬ್ರಾಹ್ಮಣೇತರರೆ? ಇದನ್ನು ಪೇಜಾವರ ಶ್ರೀಗಳು ಸ್ಪಷ್ಟಪಡಿಸ ಬೇಕು. ವ್ಯತ್ಯಾಸಗಳಿರುವುದರಿಂದಲೇ ಒಂದು ಮತ್ತೊಂದಕ್ಕೆ ಭಿನ್ನ ಎಂದು ಗುರುತಿಸುವುದು ಎಂಬುದನ್ನು ಶ್ರೀಗಳು ಮರೆತರೆ ಹೇಗೆ?

"ಜಾತಿ ವ್ಯವಸ್ಥೆಯನ್ನು ಒಪ್ಪದ ಅನೇಕ ಧರ್ಮಗಳನ್ನು ಹೆಸರಿಸಿ ಅವೆಲ್ಲವೂ ಹಿಂದೂ ಧರ್ಮವಾಗಿದೆಯೆಂದು ತೋರಿಸಿಕೊಟ್ಟಿದ್ದೇನೆ. ಇವೆಲ್ಲವುಗಳಿಗೆ ಪ್ರತ್ಯೇಕ ಲಿಂಗಾಯತ ಧರ್ಮವೆಂದು ವಾದಿಸುವ ಯಾರೂ ಇಷ್ಟರವರೆಗೆ ಉತ್ತರ ನೀಡಿಲ್ಲ. ಹೀಗಾಗಿ ಲಿಂಗಾಯತ ಧರ್ಮವು ಪ್ರತ್ಯೇಕ ಧರ್ಮವೆಂದು ಸಾಧಿಸಲು ಯಾರಿಂದಲೂ ಸಾಧ್ಯವಿಲ್ಲ" ಎಂದು ಪೇಜಾವರ ಶ್ರೀಗಳ ಉವಾಚ. ಪೇಜಾವರ ಶ್ರೀಗಳು ತಮ್ಮನ್ನು ಸಾರ್ವಭೌಮ ರಾಷ್ಟ್ರದ ಪ್ರಧಾನಿಗಳೋ ಅಥವಾ ದೇಶದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರೋ ಎಂದು ಭಾವಿಸಿಕೊಂಡಿರುವಂತಿದೆ. ತಮ್ಮ ಬಳಿ ಸಾಧಿಸಿಕೊಳ್ಳುವ ಅನಿವಾರ್ಯತೆಯಾಗಲಿ ಹಾಗೂ ಅಗತ್ಯತೆಯಾಗಲಿ ಲಿಂಗಾಯತರಿಗೆ ಇಲ್ಲ. ಸರ್ಕಾರ ಮಾನ್ಯತೆ ಕೊಟ್ಟರೂ ಅಥವಾ ಕೊಡದಿದ್ದರೂ ಅದೊಂದು ಸ್ವತಂತ್ರ ಧರ್ಮ. ಸರ್ಕಾರ ಮಾನ್ಯತೆ ಕೊಟ್ಟರೆ ಯಾರೂ ಕೂಡ ಎರಡೆರಡು ಲಿಂಗ ಧರಿಸುವುದಿಲ್ಲ, ಕೊಡದಿದ್ದರೆ ಲಿಂಗ ಬಿಚ್ಚಿ ಜನಿವಾರ ಧರಿಸಲು ಯಾರು ತಯಾರಿಲ್ಲ ಎಂಬುದನ್ನು ಪೇಜಾವರ ಶ್ರೀಗಳು ನೆನಪಿನಲ್ಲಿಟ್ಟುಕೊಳ್ಳಬೇಕು.

"ಲಿಂಗಾಯತ ಧರ್ಮ ಹಿಂದೂ ಧರ್ಮಕ್ಕೆ ಸೇರಿದ್ದರೂ ಅನೇಕ ಜಾತಿಗಳನ್ನೊಳಗೊಂಡ ಸ್ವತಂತ್ರ ಧರ್ಮವೆಂಬುದನ್ನು ಒಪ್ಪಿಕೊಳ್ಳುತ್ತೇನೆ". ಎಂದು ಪೇಜಾವರ ಶ್ರೀಗಳು ನವ ದ್ವೈತ

ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಈ ಕಾರಣಕ್ಕಾಗಿಯೇ ಸಾಣೇಹಳ್ಳಿ ಶ್ರೀಗಳು ಅವರೊಂದಿಗೆ ಚರ್ಚೆಯ ಅಗತ್ಯವಿದೆಯೇ ಎಂದು ಪ್ರಶ್ನಿಸಿರುವುದು ಸರಿಯಾಗಿದೆ. ಪೇಜಾವರ ಶ್ರೀಗಳ ವಾದ ಹೇಗಿದೆ ಎಂದರೆ ಪಲಾವ್, ಮೊಸರನ್ನ, ಪುಳಿಯೊಗರೆ, ವಾಂಗೀಬಾತ್‌ನಲ್ಲಿ ಅಕ್ಕಿಯೇ ಪ್ರಧಾನವಾಗಿರುವುದರಿಂದ ಅವೆಲ್ಲವೂ ಒಂದೇ ಎಂದು ನಂಬಿಸುವುದು. ಅಕ್ಕಿಯೇ ಪ್ರಧಾನವಾಗಿದ್ದರೂ ಕೂಡ ತಯಾರಿಸುವ ವಿಧಾನ, ಅದು ಕೊಡುವ ರುಚಿ ಬೇರೆ ಬೇರೆ ಎಂಬುದನ್ನು ಮರೆಮಾಚಿ ಎಲ್ಲವೂ ಒಂದೇ ಎಂದು ವಾದಿಸುವುದು. ಲಿಂಗಾಯತ ಧರ್ಮ ಹಿಂದೂಸ್ಥಾನದಲ್ಲಿ ಸ್ವತಂತ್ರ ಧರ್ಮ ಎಂದೇಳಿದ್ದರೆ ಅದಕ್ಕೊಂದು ಮಹತ್ವ ಬರುತ್ತಿತ್ತು. ಆದರೆ ಅವರು ಆ ರೀತಿ ಹೇಳದೆ ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ ಮಾತನಾಡಿದ್ದಾರೆ. ಒಂದು ಕಡೆ ಲಿಂಗಾಯತರನ್ನು ಮೆಚ್ಚಿಸಬೇಕು, ಅದೇ ಸಮಯದಲ್ಲಿ ಹಿಂದುಗಳನ್ನು ಸಮಾಧಾನ ಪಡಿಸಬೇಕು. ಇದನ್ನೇ ನಾವು ನವ ದ್ವೈತ ಸಿದ್ಧಾಂತ ಎಂದು ಕರೆದಿರುವುದು. ತಮ್ಮ ಮಠದಲ್ಲಿ ಮುಸ್ಲಿಂರಿಗೆ ಇಫ್ತಾರ್ ಕೂಟ ಏರ್ಪಡಿಸಿ ಸಂಪ್ರದಾಯಸ್ಥ ಮಾಧ್ವರ ಕೆಂಗಣ್ಣಿಗೆ ಗುರಿಯಾಗಿದ್ದು ಇತಿಹಾಸದ ಪುಟ ಸೇರಿದೆ. ಈಗ ಏನಾದರೂ ಲಿಂಗಾಯತ ಸ್ವತಂತ್ರ ಧರ್ಮ ಎಂದು ಒಪ್ಪಿಕೊಂಡರೆ ಇದೂವರೆಗೆ ಹಿಂದು ಧರ್ಮವೆಂದು ನಂಬಿರುವ ಹಿಂದುಗಳು ತಮ್ಮ ವಿರುದ್ಧ ತಿರುಗಿಬಿದ್ದಾರು ಎಂಬ ಅಂಜಿಕೆ ಅವರನ್ನು ಕಾಡಿರಬಹುದು. ಬದುಕಿನ ಸಂಧ್ಯಾಕಾಲದಲ್ಲಿ ಅತಂತ್ರ ಸ್ಥಿತಿ ತಂದುಕೊಳ್ಳಬಾರದೆಂದು ಪೇಜಾವರ ಶ್ರೀಗಳು ಮುನ್ನೆಚ್ಚರಿಕೆ ವಹಿಸಿರುವಂತೆ ಕಾಣುತ್ತದೆ. ನಾವು ಶ್ರೀಗಳಲ್ಲಿ ಮನವಿ ಮಾಡುವುದು ಇಷ್ಟೆ, ಒಮ್ಮೆ ಗಟ್ಟಿ ಧ್ವನಿಯಲ್ಲಿ ಲಿಂಗಾಯತ ಸ್ವತಂತ್ರ ಧರ್ಮವೆಂದು ಹೇಳಿರಿ. ಆಗ ಏನಾದರೂ ತಮಗೆ ಅಸುರಕ್ಷತೆ ಉಂಟಾದರೆ ಸಮಸ್ತ ಲಿಂಗಾಯತರು ತಮ್ಮ ಬೆಂಬಲಕ್ಕೆ ನಿಂತು ತಾವು ನಂಬಿರುವ ಯತಿ ಧರ್ಮವನ್ನು ಅನುಸರಿಸಲು ಎಲ್ಲ ರೀತಿಯ ವ್ಯವಸ್ಥೆ ಮಾಡಿಕೊಡುತ್ತಾರೆ. ಏಕೆಂದರೆ ಬಸವಣ್ಣ ಇವ ನಮ್ಮವ ಎಂಬುದನ್ನು ಕಲಿಸಿದ್ದಾರೆ.

"ನಾವೆಲ್ಲರು ನಮ್ಮ ನಮ್ಮ ಧರ್ಮದ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡು ಹಿಂದೂ ಧರ್ಮದ ನೆಲೆಯಲ್ಲಿ ಸಂಘಟಿತರಾಗೋಣ. ಉಳಿದ ಧರ್ಮಾನುಯಾಯಿಗಳೊಂದಿಗೆ ಸ್ನೇಹ ಸೌಹಾರ್ದದಿಂದ ಬಾಳೋಣ" ಎಂದು, "ಭಾರತವು ಛಿದ್ರಛಿದ್ರವಾಗಬಾರದು, ಇಂಥ ದುರಂತಕ್ಕೆ ನಾವು ಅವಕಾಶ ಕೊಡುವುದು ಬೇಡ, ಹಿಂದೂ, ಮುಸ್ಲಿಂ, ಕ್ರೈಸ್ತರನ್ನೊಳಗೊಂಡ ಸಮಗ್ರ ಭಾರತವಾಸಿಗಳೆಲ್ಲರೂ ಒಂದಾಗಬೇಕು. ಇದೇ ನನ್ನ ಧ್ಯೇಯ, ಇದೇ ನನ್ನ ಕನಸು, ಇದು ನನಸಾಗಲಿ" ಎಂದು ಪೇಜಾವರ ಶ್ರೀಗಳು ಹಾರೈಸಿದ್ದಾರೆ.

'ಶಿವಭಕ್ತರಿರ್ದ ದೇಶ ಪಾವನವೆಂಬುದು ಹುಸಿಯೇ, ಸಕಲ ಜೀವಿಗಳಿಗೆ ಲೇಸನ್ನು ಬಯಸುವವನು ಕುಲಜನು, ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ' ಎಂಬ ವಚನೋಕ್ತಿಗಳು ದೇಶವನ್ನು ಕಟ್ಟುತ್ತವೆಯೇ ಹೊರತು ದೇಶವನ್ನು ಛಿದ್ರಗೊಳಿಸುವುದಿಲ್ಲ ಎಂಬುದನ್ನು ಪೇಜಾವರ ಶ್ರೀಗಳಿಗೆ ನೆನಪಿಸಿ, ಲಿಂಗಾಯತ ಧರ್ಮ ಸ್ವತಂತ್ರವಾದರೆ ಭಾರತ ದೇಶ ಮತ್ತೊಮ್ಮೆ ಜಗದ್ಗುರು ಆಗುವುದರಲ್ಲಿ ಸಂಶಯವಿಲ್ಲ ಎಂಬುದನ್ನು ಆತ್ಮವಿಶ್ವಾಸದಿಂದ ಹೇಳ ಬಯಸುತ್ತೇವೆ.

ಭಾರತದಲ್ಲಿ ಜನಿಸಿದ ಬೌದ್ಧ, ಜೈನ, ಲಿಂಗಾಯತ ಹಾಗೂ ಸಿಖ್ ಧರ್ಮಗಳನ್ನು ಸ್ವತಂತ್ರ ಧರ್ಮಗಳೆಂದು ಪೇಜಾವರ ಶ್ರೀಗಳು ಮೊದಲು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಲಿ. ಆ ನಂತರ ಅವರು ಮಾಡಬೇಕಾಗಿರುವ ಒಂದು ಘನ ಕಾರ್ಯವಿದೆ. ಅದೇನೆಂದರೆ ಭಾರತೀಯ ಧರ್ಮ ದರ್ಶನ ಪರಿಷತ್ ಸ್ಥಾಪಿಸಿ ಅದರಲ್ಲಿ ವೈದಿಕ(ಶೈವ+ವೈಷ್ಣವ) ಧರ್ಮ, ಬೌದ್ಧ ಧರ್ಮ, ಜೈನ ಧರ್ಮ, ಲಿಂಗಾಯತ ಧರ್ಮ ಹಾಗೂ ಸಿಖ್ ಧರ್ಮದ ಪ್ರತಿನಿಧಿಗಳನ್ನೊಳಗೊಂಡ ಕಾರ್ಯಕಾರಿಣಿ ಸಮಿತಿ ರಚಿಸಲಿ. ವಿದೇಶಿ ಮೂಲದ ಕ್ರೈಸ್ತ, ಇಸ್ಲಾಂ, ಪಾರಸಿ, ಯಹೂದಿ (ಭಾರತದಲ್ಲಿ ಇದ್ದರೆ) ಧರ್ಮದ ಪ್ರತಿನಿಧಿಗಳನ್ನು ವಿಶೇಷ ಆಹ್ವಾನಿತರಾಗಿ ಭಾರತೀಯ ಧರ್ಮ ದರ್ಶನ ಪರಿಷತ್‌ನಲ್ಲಿ ಸೇರಿಸಿಕೊಳ್ಳೋಣ. ತಮ್ಮ ಮಠದಲ್ಲಿರುವಂತೆ ಅಲ್ಲಿಯೂ ಕೂಡ ಪರ್ಯಾಯ ಕಲ್ಪನೆಯನ್ನು ಪರಿಚಯಿಸಿ ಭಾರತೀಯ ಮೂಲದ ಧರ್ಮ ಪ್ರತಿನಿಧಿಗಳನ್ನು ಪ್ರತಿ ಎರಡು ವರ್ಷದ ಅವಧಿಗೆ ಅಧ್ಯಕ್ಷರನ್ನಾಗಿ ಸಮನಾಗಿ ಆಯ್ಕೆ ಮಾಡುವುದು. ಈ ಪರಿಷತ್ ಮೂಲಕ ಭಾರತದಲ್ಲಿ ಕೋಮು ಸಂಘರ್ಷ ನಡೆಯದಂತೆ ಎಚ್ಚರಿಕೆ ವಹಿಸುವುದು, ಆಕಸ್ಮಿಕವಾಗಿ ಸಂಘರ್ಷ ನಡೆದಲ್ಲಿ ಅಂತಹ ಸ್ಥಳಗಳಿಗೆ ಭೇಟಿ ಕೊಟ್ಟು ಪರಸ್ಪರ ಮಾತುಕತೆಯ ಮೂಲಕ ಶಾಂತಿ ಸ್ಥಾಪಿಸುವ ಕಾರ್ಯವನ್ನು ಕೈಗೊಳ್ಳುವುದು. ಈ ರೀತಿಯಾಗಿ ಪೇಜಾವರ ಶ್ರೀಗಳು ಕಾರ್ಯೋನ್ಮುಖರಾದಲ್ಲಿ ಅವರ ಧ್ಯೇಯ ಕನಸು ಈಡೇರುತ್ತದೆ. ಇಲ್ಲದಿದ್ದಲ್ಲಿ ಪೇಜಾವರ ಶ್ರೀಗಳು ಭಾರತೀಯ ಸಮಾಜದ ಪಾಲಿಗೆ ಪೇಜಾ'ವರ' ಶ್ರೀಗಳಾಗದೇ ಪೇಜಾ'ವಾರ' ಶ್ರೀಗಳಾಗಿಯೇ ಜನಮಾನಸದಲ್ಲಿ ಉಳಿಯುತ್ತಾರೆ.

■■